# ವೇದಾಂತ ಲೇಖನಗಳು

# 1. ಹೊಸಕೆರೆ ಚಿದಂಬರಯ್ಯನವರು

## (ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು)

ಚಿದಂಬರಯ್ಯನವರು ನಾನು ಮೊದಲು ಕಂಡದ್ದು ಕಡೂರಿನಲ್ಲಿ ಕ್ರಿ.ಶ. 1903ರಲ್ಲಿ ಆ ಊರಿನ ಟೌನ್ ಓವರ್ಸಿಯರಾಗಿದ್ದ ನಾನು ಒಂದು ದಿನ ಊರಿನಲ್ಲಿ ಅಡ್ಡಾಡುತ್ತಾ ಆಂಗ್ಲೋವರ್ನಾಕುಲರ್ ಸ್ಕೂಲಿನ ಒಳಕ್ಕೆ ಹೋದೆ. ಕಟ್ಟಡದ ಬಲಭಾಗದಲ್ಲಿದ್ದ ಒಂದು ಕೋಣೆಯಲ್ಲಿ ಅವರು ಒಂದು ದೊಡ್ಡ ಪುಸ್ತಕವನ್ನು ಓದುತ್ತಾ ಕುರ್ಚಿಯ ಮೇಲೆ ಕುಳಿತಿದ್ದರು. ವ್ಯಕ್ತಿಯ ಉಡಿಗೆತೊಡಗಿಗಳಲ್ಲಾಗಲಿ ಮಾತುಕಥೆಗಳಲ್ಲಾಗಲಿ ಅಷ್ಟೇನೂ ವಿಶೇಷವು ಕಾಣಿಸಲಿಲ್ಲ. ಆದರೂ ಕಾಲ ಕರ್ಮ ಸಂಯೋಗದಿಂದ ದೊರೆತ ಆ ಪರಿಚಯವು ನಮ್ಮಿಬ್ಬರನ್ನೂ ತೀರ ಹತ್ತಿರದ ಗೆಳೆಯರನ್ನಾಗಿ ಮಾಡಿಬಿಟ್ಟಿತು.

ನಾವು ಆಗಾಗ್ಗೆ ಮತ್ತೆಮತ್ತೆ ಸೇರುವದಕ್ಕೆ ಮೊದಲಾಯಿತು. ಚಿದಂಬರಯ್ಯನವರು ಬಾಲ್ಯದಲ್ಲಿ ಅಷ್ಟೇನೂ ಸ್ಕೂಲಿನ ವಿದ್ಯಾಭ್ಯಾಸವನ್ನು ಪಡೆದವರಲ್ಲವಾದರೂ ತಮ್ಮ ಸ್ವಂತವ್ಯಾಸಂಗದಿಂದಲೂ ಉತ್ತಮ ಸಹವಾಸದಿಂದಲೂ ಕನ್ನಡ, ಸಂಸ್ಕೃತ, ಇಂಗ್ಲಿಷು-ಈ ಮೂರು ಭಾಷೆಗಳಲ್ಲಿಯೂ ತಕ್ಕಮಟ್ಟಿನ ಪರಿಚಯವನ್ನು ಸಂಪಾದನೆ ಮಾಡಿಕೊಂಡಿದ್ದರು. ಕನ್ನಡದಲ್ಲಿ ಆಗಾಗಲೇ ಒಂದೆರಡು ಗ್ರಂಥಗಳನ್ನು ಬರೆದಿದ್ದ ದ್ದಲ್ಲದೆ ಕಾವ್ಯರಸವನ್ನು ತಾವೂ ಈಂಟಬಲ್ಲವರಾಗಿದ್ದರು. ಜೊತೆಯವರಿಗೂ ಅದರ ಸವಿಯನ್ನು ನೋಡಿಸಬಲ್ಲ ಚತುರರಾಗಿದ್ದರು. ಓವರ್ಸಿಯರ್ ಕೆಲಸವು ನನಗೆ ಮನೆಯವರ ಬಲವಂತದಿಂದ ಗಂಟುಬಿದ್ದದ್ದೇ ಹೊರತು ನನಗೆ ಮೆಚ್ಚಿನದಾಗಿರದೆ ವಿದ್ಯಾಭ್ಯಾಸದ ಇಲಾಖೆಯ ಕಡೆಗೇ ನನ್ನ ಮನಸ್ಸು ಒಲಿಯುತ್ತಿದ್ದದ್ದರಿಂದಲೂ ಕನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ ನನಗೂ ಸ್ವಲ್ಪ ಅಭಿರುಚಿಯಿದ್ದದ್ದರಿಂದಲೂ ಚಿದಂಬರಯ್ಯನವರು ಸಹಜವಾಗಿ ನನಗೆ ಸ್ವಲ್ಪ ಸಲುಗೆಯನ್ನು ಕೊಟ್ಟರು. ನಾವಿಬ್ಬರೂ ಒಕ್ಕಡೆಯಲ್ಲಿಯೇ ವಾಸಮಾಡುತ್ತಾ ಲಘುಕೌಮುದಿ, ಶಬ್ದಾನುಶಾಸನ, ಸಾಹಿತ್ಯದರ್ಪಣ, ಕುವಲಯಾನಂದ, ಚಿಕ್ಕದೇವರಾಜ ವಿಜಯ, ಚಿಕ್ಕದೇವರಾಯ ವಂಶಾವಳಿ, ಶಬರಶಂಕರವಿಲಾಸ ಮುಂತಾದ ಗ್ರಂಥಗಳನ್ನು ಜೊತೆಯಲ್ಲಿ ಅಭ್ಯಾಸ ಮಾಡುತ್ತಿದ್ದೆವು. ಚಿದಂಬರಯ್ಯನವರು ಸ್ಕೂಲಿನ ಕೆಲಸದಲ್ಲಿ ಅತ್ಯಂತ ಆದರವುಳ್ಳವರಾಗಿದ್ದದ್ದು, ತಮ್ಮ ಕೆಲಸವನ್ನು ಮತ್ತೊಬ್ಬರಿಗೆ ಹೇಳದೆ ತಾವೇ ಮಾಡಿಕೊಳ್ಳುತ್ತಾ ಇದ್ದದ್ದು ಬಿಡುವಿನ ಕಾಲದಲ್ಲಿ

ಪರೀಕ್ಷೆಗೆ ಓದುವ ವಿದ್ಯಾರ್ಥಿಗಳಿಗಿಂತಲೂ ಹೆಚ್ಚಿನ ಅಕ್ಕರೆಯಿಂದ ಗ್ರಂಥಗಳನ್ನು ಚಿಂತನೆ ಮಾಡುತ್ತಿದ್ದುದು-ಇವೆಲ್ಲವೂ ನನಗೆ ಅವರಲ್ಲಿ ಹೆಚ್ಚಿನ ಗೌರವವುಂಟಾಗುವಂತೆ ಮಾಡಿದವು.

ಚಿದಂಬರಯ್ಯನವರ ಶಿಫಾರಸ್ಸಿನಿಂದ ನನಗೆ ವಿದ್ಯಾಭ್ಯಾಸದ ಇಲಾಖೆಯಲ್ಲಿ ಕೆಲಸವಾಯಿತು; ನಾನು ಮೊಳಕಾಲ್ಮೂರು ಹೊಸದುರ್ಗಗಳನ್ನು ದಾಟಿ ಹೊಳಲುಕೆರೆಯ ಸ್ಕೂಲಿನ ಹೆಡ್‌ಮಾಸ್ಟರ್ ಆಗಿ ಬರುವ ಹೊತ್ತಿಗೆ ನಮ್ಮಿಬ್ಬರ ಸ್ನೇಹವು ಬಲವಾಗಿತ್ತು. ಚಿದಂಬರಯ್ಯನವರು ಕಡೂರಿನಲ್ಲಿ ಸ್ಥಾಪಿಸಿದ ಉಪಾಧ್ಯಾಯ ಸಂಘಕ್ಕೆ ನನ್ನನ್ನು ಜಾಯಿಂಟ್ ಸೆಕ್ರೆಟರಿಯಾಗಿ ಸೇರಿಸಿಕೊಂಡಿದ್ದರು. ಸಂಘದಲ್ಲಿ ಅವರು ಓದಿದ ಮನಃ ಶ್ಶಿಕ್ಷಣ, ಬೋಧನಕ್ರಮ, ಬೋಧನೆಯ ಸ್ವಭಾವ- ಮುಂತಾದ ಉಪನ್ಯಾಸಗಳು ಅಚ್ಚಾಗಿ ಅನೇಕ ಟ್ರೇನಿಂಗು ಸ್ಕೂಲುಗಳ ಮೆಚ್ಚುಗೆಯನ್ನು ಪಡೆದವು; ಕಡೂರಿನಲ್ಲಿ ಒಂದು ವಿದ್ಯಾಭ್ಯಾಸದ ಪ್ರದರ್ಶನ ಮಹೋತ್ಸವವೂ ಆಯಿತು. (ಚಿದಂಬರಯ್ಯ ನವರಿಗೆ ಯಾವ ಟ್ರೈನಿಂಗೂ ಆಗಿರಲಿಲ್ಲ!) ಆ ಸುಮಾರಿನಲ್ಲಿ ಅವರು 'ಕಾಲಾಂತಕ, 'ತಾರಾನಾಥ', 'ಸ್ತ್ರೀಧರ್ಮ ಸಂಗ್ರಹ' 'ಮಾಧವರಾವ್ ಸಿಂಧೆ', 'ಗುಣನಿರೂಪಣೆ' 'ಕೃಷ್ಣಮಹೀಶ್ವರೀ' (ನಾಟಕ) ಮುಂತಾದ ಗ್ರಂಥಗಳನ್ನು ಬರೆದರು.

ಆದರೆ ಇಷ್ಟು ಹೊತ್ತಿಗೆ ಚಿದಂಬರಯ್ಯನವರಿಗೆ ನನ್ನ ಗಾಳಿ ಸ್ವಲ್ಪ ಬೀಸಿತ್ತು. ಕಡೂರಿನಲ್ಲಿದ್ದಾಗ ನಾನು 'ಪಂಚೀಕರಣ' 'ವೇದಾಂತಸಾರ' ಮುಂತಾದ ವೇದಾಂತ ಪ್ರಕರಣಗಳನ್ನು ಓದುತ್ತಿರುವದನ್ನು ಕಂಡು ಹಾಸ್ಯ ಮಾಡುತ್ತಿದ್ದ ಅವರು ಬಿಡುವು ದೊರೆತಾಗಲೆಲ್ಲ ಹೊಳಲುಕೆರೆಗೆ ಬಂದು ನನ್ನೊಡನೆ ಪಂಚದಶಿಯನ್ನು ಓದುವದಕ್ಕೆ ಮೊದಲು ಮಾಡಿದ್ದರು. ಕ್ರಿ.ಶ. 1906ರಲ್ಲಿ ಅವರಿಗೆ ಪತ್ನಿವಿಯೋಗವಾದಮೇಲೆ ಅವರು ಪಂಚದಶಿಯನ್ನು ಮುಗಿಸಿ ಶಂಕರಾನಂದರ ಗೀತಾತಾತ್ಪರ್ಯ ಬೋಧಿನಿಯನ್ನು ಓದಿ ವೇದಾಂತದ ಹುಚ್ಚು ಹಿಡಿಸಿಕೊಂಡುಬಿಟ್ಟಿದ್ದರು. ಸಂನ್ಯಾಸವನ್ನು ತೆಗೆದುಕೊಂಡು ವೇದಾಂತಶ್ರವಣವನ್ನು ಮಾಡಬೇಕೆಂದು ಆಗಿಂದಾಗ್ಯೆ ಅವರು ಹೇಳುತ್ತಿದ್ದುದು ಚೆನ್ನಾಗಿ ನನ್ನ ನೆನಪಿನಲ್ಲಿದೆ.

ಅಲ್ಲಿಂದ ಮುಂದಕ್ಕೆ ಜೊತೆಯಲ್ಲಿರಬೇಕೆಂಬ ಕುತೂಹಲವು ಇಬ್ಬರಲ್ಲಿಯೂ ಬಲವಾಗಿ ಬೇರೂರಿತು. ನಾವಿಬ್ಬರೂ ದಾವಣಗೆರೆಯಲ್ಲಿ ಮತ್ತೆ ಸೇರಿದೆವು. ಅವರು ಅಲ್ಲಿಯ ಮಿಡಲ್ ಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದರು; ನಾನು ಸಹಾ -ಯೋಪಾಧ್ಯಾಯನಾಗಿದ್ದೆ; ಸ್ಕೂಲಿನ ಕೆಲಸದಲ್ಲಿದ್ದು ನಮ್ಮ ಉತ್ಸಾಹವೇನು

ಕುಗ್ಗಲಿಲ್ಲವಾದರೂ ವೇದಾಂತವು ಹೆಚ್ಚು ಹೆಚ್ಚಾಗಿ ನಮ್ಮ ಮನಸ್ಸನ್ನು ಸೆಳೆಯಿತು. ಇಬ್ಬರೂ ಕಾಲಟಿಯಲ್ಲಿ ಕುಂಭಾಭಿಷೇಕಸಮಯಕ್ಕೆ ಶ್ರೀಸಚ್ಚಿದಾನಂದಶಿವಾಭಿನವ ನೃಸಿಂಹಭಾರತೀಸ್ವಾಮಿಗಳಲ್ಲಿ ಭಾಷ್ಯಶಾಂತಿಯನ್ನು ಮಾಡಿಸಿಕೊಂಡು ಧಾರವಾಡ ದಲ್ಲಿದ್ದ (ಈಚೆಗೆ ಶ್ರೀವಾಲುಕೇಶ್ವರಸ್ವಾಮಿಗಳಾಗಿ ಮೈಸೂರಿನಲ್ಲಿ ಬ್ರಹ್ಮೀಭೂತರಾದ) ಹಾನಗಲ್ಲ ವಿರೂಪಾಕ್ಷಶಾಸ್ತ್ರಿಗಳವರಲ್ಲಿ ಸೂತ್ರಭಾಷ್ಯವನ್ನು ಅಭ್ಯಾಸಮಾಡ ತೊಡಗಿದೆವು. ಆದರೆ ಚಿದಂಬರಯ್ಯನವರ ಮನಸ್ಸು ಬರಿಯ ಪುಸ್ತಕಪಾಠಿ ಯಾಗಿರಲು ಒಪ್ಪಲಿಲ್ಲ. ಸುಮಾರು 1910ರಲ್ಲಿ ನಮ್ಮಿಬ್ಬರಿಗೆ ದೊರೆತಿದ್ದ ಶ್ರೀ ಮಹಾಭಾಗವತರೆಂಬ ಸಾಧುಗಳ ದರ್ಶನದ ಫಲವಾಗಿ ಅವರು ಉತ್ಕಟ ವೈರಾಗ್ಯ ದಿಂದ ಗೋಂದಾವಳಿಯ ಶ್ರೀಬ್ರಹ್ಮಚೈತನ್ಯಮಹಾರಾಜರೆಂಬ ಸದ್ಗುರುಗಳ ಸೇವೆ ಗೆಂದು ರಜವನ್ನು ಪಡೆದುಕೊಂಡು ಹೋಗಿಬಿಟ್ಟರು; ಅವರ ಸೇವೆಯಲ್ಲಿ ಹಲವು ತಿಂಗಳುಗಳಿದ್ದು ಕೊನೆಗೆ ಕುರ್ತಕೋಟಿಯಲ್ಲಿ ಬ್ರಹ್ಮಚಿಂತನೆಯಲ್ಲಿಯೇ ಕಾಲಹರಣ ವನ್ನು ಮಾಡುತ್ತಾ ಇದ್ದುಬಿಟ್ಟರು. ಪುಸ್ತಕದ ವ್ಯಾಸಂಗವನ್ನು ನನ್ನ ಪಾಲಿಗೆ ಬಿಟ್ಟು ಹೋಗಿದ್ದರು!

ಕುರ್ತಕೋಟಿಯಲ್ಲಿದ್ದಾಗ ಅವರ ಚಿತ್ತವು ಧ್ಯಾನಯೋಗ ಭಕ್ತಿಯೋಗ ಗಳಲ್ಲಿ ನೆಲೆಗೊಂಡಿತು. ಅವರು ಬೆಳಿಗ್ಗೆ, ಸಾಯಂಕಾಲ- ಎರಡು ಹೊತ್ತು ದೀರ್ಘ ಕಾಲ ಪ್ರಾಣಾಯಾಮ, ಸಗುಣಾರಾಧನ, ಲಯಚಿಂತನ-ಮುಂತಾದ ಸಾಧನೆಗಳನ್ನು ಮಾಡುತ್ತಿದ್ದರು; ಉಳಿದ ಕಾಲದಲ್ಲಿ ಭಕ್ತಿಪ್ರಧಾನವಾದ ಗ್ರಂಥಗಳನ್ನು ಓದುವದು, ಬರೆಯುವದು, '**ಪರಮಾರ್ಥ**'ವೆಂಬ ಮಾಸಪತ್ರಿಕೆಯ ಸಂಪಾದಕತ್ವದ ಕೆಲಸವನ್ನು ನಿರ್ವಹಿಸುವದು- ಹೀಗೆ ಕಾಲಕ್ಷೇಪಮಾಡುತ್ತಿದ್ದರು.ಅವರು ವಿದ್ಯಾಭ್ಯಾಸದ ಇಲಾಖೆ ಯಲ್ಲಿ ಕೆಲಸಮಾಡುತ್ತಿದ್ದಾಗ ಇಟ್ಟುಕೊಂಡಿದ್ದ ಉತ್ಸಾಹವನ್ನೆಲ್ಲ ಈಗ ಪರಮಾರ್ಥ ವಿದ್ಯಾಭ್ಯಾಸದ ಇಲಾಖೆಯ ಸೇವೆಗೆ ಧಾರೆಯೆರೆದಿದ್ದರೆನ್ನಬಹುದು. ಮೈತ್ರೇಯಿ, ಪರಮಾತ್ಮಸ್ತುತಿ, ವಾಲ್ಮೀಕಿಯಜಯ, ಭಗವದ್ಗೀತಾಸಾರವಿಚಾರ, ಗುರುಸ್ತುತಿ ಸುಮಾಂಜಲಿ, ಸುಧರ್ಮಾಪ್ರಭಾವ, ಗೀತಾರ್ಥವಿವರಣೆ- ಮುಂತಾದ ಗ್ರಂಥಗಳನ್ನು ಅವರು ಹೊರಕ್ಕೆ ತಂದದ್ದು ಈ ಕಾಲದಲ್ಲಿಯೇ.

ಚಿದಂಬರಯ್ಯನವರು ಈಗ ವಾನಪ್ರಸ್ಥಾಶ್ರಮಿಗಳಂತೆ ದೇಹಾಭಿಮಾನವನ್ನು ತೀರ ತೊರೆದುಬಿಟ್ಟಿದ್ದರು. ಅವರು ತಮ್ಮ ತನುಮನೋಧನಗಳನ್ನು ಕುರ್ತಕೋಟಿ ಯಲ್ಲಿ ಶ್ರೀಮಹಾಭಾಗವತರ ಸೇವೆಗೂ ಅಲ್ಲಿ ಭಕ್ತಮಂಡಲಿಯವರಿಗಿದ್ದ ಸತ್ರದ

ಸೇವೆಗೂ ಒಪ್ಪಿಸಿಬಿಟ್ಟಿದ್ದರೆಂದರೆ ಅತ್ಯುಕ್ತಿಯಾಗದು. ಆಗಿನ ಅವರ ಮನಃಸ್ಥಿತಿಯನ್ನು ಮನದಟ್ಟುಮಾಡಿಕೊಳ್ಳುವದಕ್ಕೆ ಒಂದು ಸಂದರ್ಭವನ್ನು ನೆನಪಿಗೆ ತಂದುಕೊಳ್ಳುವದು ಸಹಾಯಕವಾಗುತ್ತದೆ. ನಾನು ಒಮ್ಮೆ ಕುರ್ತಕೋಟಿಗೆ ಹೋಗಿ ಊಟವಾದ ಬಳಿಕ ಅವರ ಬಳಿಯಲ್ಲಿ ಕುಳಿತು ಮೇಜಿನ ಮೇಲಿದ್ದ ಒಂದು ಸರಕಾರಿಯ ಲಕೋಟೆ ಯನ್ನು ಕಂಡು ಇದೇನೆಂದುಕೇಳಿದೆನು; ಅವರು'ಅದು ರಜ ವಿಷಯದ ಕಾಗದ ವಿರಬೇಕು' ಎಂದು ಉದಾಸೀನವಾಗಿ ಉತ್ತರಕೊಟ್ಟರು. ನಾನು ಅದನ್ನು ಒಡೆದು ನೋಡಲು ''ರಜಕೊಡುವದಾಗುವದಿಲ್ಲವೆಂದು ಇಂಡಾರ್ಸು ಕೊಟ್ಟರೂ ನೀವು ಮತ್ತೆ ಮತ್ತೆ ರಜಕ್ಕೆ ಬರೆದುಕೊಳ್ಳುತ್ತೀರಾದ್ದರಿಂದ ನಿಮ್ಮನ್ನು ಕೆಲಸದಿಂದ ತೆಗೆದು ಹಾಕಿದೆ'' ಎಂದು ಬರೆದಿತ್ತು. ಅದನ್ನು ನಾನು ಓದುತ್ತಲೂ ಚಿದಂಬರಯ್ಯನವರು ''ಸರಿ ಹಾಗಾದರೆ ಮತ್ತೆ ರಜಕ್ಕೆ ಬರೆದುಕೊಳ್ಳುವದೇ ತಪ್ಪಿತು'' ಅಂದುಬಿಟ್ಟರು ! ನಾನು ಆ ಸಂದರ್ಭಕ್ಕೆ ತಕ್ಕಂತೆ ಒಂದು ಅರ್ಜಿ ಬರೆದು ಬಲಾತ್ಕಾರದಿಂದ ಅವರ ರುಜು ಹಾಕಿಸಿ ಸರಕಾರಕ್ಕೆ ಕಳುಹಿಸಿಕೊಟ್ಟೆ ; ಸರಕಾರದವರೊ ದಯವಿಟ್ಟು ಹಿಂದಿನ ಹುಕುಂ ವಜಾಮಾಡಿ ಅವರಿಗೆ ವಿಶ್ರಾಂತಿ ವೇತನವನ್ನು ಕೊಡಿಸಿಕೊಟ್ಟರು.

ಚಿದಂಬರಯ್ಯನವರು ಮಹಾಭಾಗವತರು ಸಂನ್ಯಾಸಾಶ್ರಮವನ್ನು ಸ್ವೀಕರಿಸಿದ ಮೇಲೂ ಅವರೊಡನೆ ಸಂಚಾರ ಮಾಡಿ ಬಹುಕಾಲ ಸಂಚಾರದಿಂದಾದ ದೇಹ ಶ್ರಮವನ್ನೂ ಮನಃಶ್ರಮವನ್ನೂ ನಿವಾರಿಸಿಕೊಳ್ಳುವದಕ್ಕೆ ಸುಮಾರು ಕ್ರಿ.ಶ. 1919ನೆಯ ಮೊದಲು ಭಾಗದಲ್ಲಿ ಬೆಂಗಳೂರಿಗೆ ಬಂದರು. ಕೆಲಕಾಲ ನಾವಿಬ್ಬರೂ ವೇದಾಂತ ವಿಚಾರದಿಂದ ಕಾಲವನ್ನು ಕಳೆದೆವು. ಆ ಸುಮಾರಿಗೆ ಶ್ರೀಯುತ ಕೊಪ್ಪಳದ ಜಯ ರಾಮಾಚಾರ್ಯರು ಹರಿಕೀರ್ತನ ಸಮ್ಮೇಳನವೊಂದನ್ನು ಏರ್ಪಡಿಸಿ ಚಿದಂಬರಯ್ಯ ನವರ ಸಂಪಾದಕತ್ವದಲ್ಲಿ ''ಭಕ್ತಬಂಧು'' ಎಂಬ ಮಾಸಪತ್ರಿಕೆಯನ್ನು ಹೊರಡಿಸಿದರು. (ಪರಮಾರ್ಥ ಪತ್ರಿಕೆಯು ಮೂರು ವರ್ಷಗಳು ನಡೆದ ಮೇಲೆ ಬೆಂಗಳೂರಿನಲ್ಲಿದ್ದ ವೇ||ಸಾಲಗ್ರಾಮದ ನಾರಾಯಣ ಶಾಸ್ತ್ರಿಗಳವರ ಸಂಪಾದಕತ್ವವನ್ನು ಪಡೆದಿತ್ತು.) ಆಗಿನಿಂದ ಚಿದಂಬರಯ್ಯನವರು ಪುರಾಣದ ಆಖ್ಯಾನಗಳನ್ನು ಕೀರ್ತನ ಪರವಾಗಿ ಬರೆಯುತ್ತಾ ಬಂದು, ಕೊನೆಗೆ ಅವನ್ನು 'ಕೀರ್ತನಕಂಠಾಭರಣ' ವೆಂಬ ಹೆಸರಿನಿಂದ ಒಟ್ಟುಗೂಡಿಸಿ ಪ್ರಕಟಿಸಿದರು.

ಈ ನಡುವೆ ಧಾರವಾಡದ ''ನ್ಯಾಷನಲ್ ಕಾಲೇಜ್'' ಎಂಬ ದೇಶೀಯ ವಿದ್ಯಾಶಾಲೆಯವರ ಕರೆ ಬಂದದ್ದರಿಂದ ಅಲ್ಲಿಗೆ ಹೋಗಿ ಎರಡು ಮೂರು ವರ್ಷಗಳು

ಅಲ್ಲಿದ್ದು ತಮ್ಮ ನೆರವನ್ನು ಅವರಿಗೆ ಕೊಟ್ಟದ್ದಲ್ಲದೆ ಸುತ್ತವರಿಯಲ್ಲಿದ್ದಾಗ 'ಭರತ ಖಂಡದ ಜೀವಜ್ಯೋತಿಗಳು', 'ಆತ್ಮಶಕ್ತಿಯ ತೇಜಸ್ಸು' 'ಆರ್ಯಧರ್ಮ ಪ್ರದೀಪ' 'ವಿದ್ಯಾರಣ್ಯ ಕಾವ್ಯ' ಮುಂತಾದ ಗ್ರಂಥಗಳನ್ನು ರಚಿಸಿದರು.

ಚಿದಂಬರಯ್ಯನವರು ಸ್ಫಟಿಕದಂತೆ ಸ್ವಚ್ಛರಾಗಿರುತ್ತ ಆಯಾ ಉಪಾಧಿಗಳಿಗೆ ತಕ್ಕಂತೆ ಜನರಿಗೆ ಒಪ್ಪಾಗುವ ರೀತಿಯಲ್ಲಿರುತ್ತಿದ್ದರು. ಅವರು ಯಾವ ಯಾವ ಸಂದರ್ಭ ಗಳಲ್ಲಿ ಯಾವ ಯಾವ ಕಡೆಗೆ ತಮ್ಮ ಚಿತ್ತವನ್ನು ಓಲಬಿಟ್ಟರೆಂಬುದು ಒಂದೇ ಸಮವಾಗಿ ಹರಿಯುತ್ತಿದ್ದ ಅವರ ಲೇಖನಿಯಿಂದ ಬೆಳಕುಕಂಡಿರುವ ಗ್ರಂಥಗಳಿಂದಲೇ ತಿಳಿಯುವಂತಿದೆ. ಆದರೂ ಕಡಲಿನ ಮೇಲುಗಡೆಯಲ್ಲಿ ಅಲೆಗಳ ಹೊಡೆತವಿದ್ದರೂ ತೀರ ಆಳವಾಗಿ ಹೋಗಿ ನೋಡಿದರೆ ಶಾಂತಿಯೇ ಇರುವಂತೆಯೂ ವಾಯುಮಂಡಲ ಮೇಘಮಂಡಲಗಳ ಮುಸುಕಿನಲ್ಲಿ ಬಗೆಬಗೆಯ ಮಾರ್ಪಾಟುಗಳನ್ನು ಪಡೆಯುವಂತೆ ತೋರುವ ಅಂಬರವು ನಿಜವಾಗಿ ನಿಷ್ಕಲಂಕವಾಗಿಯೇ ಇರುವಂತೆಯೂ ಇವರು ಅಂತರಂಗದಲ್ಲಿ ಪರಮಾರ್ಥ ವಾಸನೆಯನ್ನು ಒಂದೇ ಸಮನೆ ಬೆಳಸಿಕೊಂಡು ಹೆಸರಿಗೆ ತಕ್ಕಂತೆ ಚಿದಂಬರರೇ ಆಗಿರುತ್ತಿದ್ದರು. ಅವರು ಧಾರವಾಡದಿಂದ ಬೆಂಗಳೂರಿಗೆ ಬಂದ ಮೇಲಂತು ಯಾವಾಗಲೂ ಸತ್ಕರ್ಮ , ಸದ್ವಿಚಾರ, ಸದ್ಗ್ರಂಥರಚನೆ - ಇವು ಗಳಲ್ಲಿಯೇ ಹೆಚ್ಚಾಗಿ ಮನಸ್ಸನ್ನು ಮುಳುಗಿಸಿದ್ದರು. ಅವರು ಇತ್ತೀಚೆಗೆ ಬರೆದಿರುವ **ಅನುಭವಾಮೃತ, ಮಾಂಡೂಕ್ಯಸಂವಾದ, ಗೀತಾರ್ಥ ಚಂದ್ರಿಕೆ,ಪಂಚದಶೀತತ್ತ್ವಾರ್ಥ, ವೇದಾಂತದ ಜೀವಾಳ, ವೇದಾಂತದರೂಪ ರೇಖೆ, ಬ್ರಹ್ಮಸೂತ್ರದಬೆಳಕು**- ಮುಂತಾದ ಗ್ರಂಥಗಳೇ ಅವರ ಮನಸ್ಸಿನ ಒಲುಮೆಯನ್ನು ಸರಿಯಾಗಿ ಅಳೆಯಬಲ್ಲ ಗ್ರಂಥಗಳು; ಮಿಕ್ಕವು ಆಯಾ ಕಾಲದ ಆಯಾ ಸುತ್ತುವಳೆಯದ ಪ್ರೇರಣೆಯ ಫಲಗಳು.

ಚಿದಂಬರಯ್ಯನವರು ಹೆಚ್ಚು ಮಾತಿನವರಲ್ಲ. ಹೊರಗಿನ ಆಡಂಬರವನ್ನು ಕಂಡವರಲ್ಲ. ಬಡತನದ ಒತ್ತಡದಿಂದ ಚಿಕ್ಕಂದಿನಿಂದಲೂ ಕುಟುಂಬ ಪೋಷಣೆಗೆ ಹಣವನ್ನು ಗಳಿಸಲೇಬೇಕಾಗಿಬಂದರೂ ತಾವು ವಿದ್ಯಾಶಾಲೆಯಲ್ಲಿ ದೊರಕಿಸಲಾರದೆ ಹೋಗಿದ್ದ ವಿದ್ಯೆಯನ್ನು ಅವರು ತಮ್ಮ ಜೀವಿತದಲ್ಲೆಲ್ಲ ಸ್ವತಂತ್ರ ಪ್ರಯತ್ನದಿಂದ ಸಂಪಾದಿಸಿ ಅದನ್ನು ನಾಡಿನ ಸೇವೆಗೆ ಗ್ರಂಥರೂಪವಾಗಿ ಸೂರೆಗೊಡುತ್ತಲೇ ಇದ್ದರು.

ಅವರು ಮೊದಮೊದಲು ಪ್ರೌಢಶೈಲಿಯಲ್ಲಿ ಕಾವ್ಯವನ್ನು ಬರೆಯುತ್ತಿದ್ದರಂತೆ; ಆದರೆ ನಮಗೆ ಈಗ ದೊರಕುವ ಕವಿತೆಗಳೆಲ್ಲ ಅತ್ಯಂತ ಲಲಿತವಾಗಿರುತ್ತವೆ. ಸಂಪ್ರದಾಯ ಕ್ರಮವನ್ನನುಸರಿಸಿ ದ್ರಾಕ್ಷಾಪಾಕವಾಗಿ ಹೃದಯವನ್ನರಳಿಸುವಂತೆ ಬರೆದ ಅವರ ಕವಿತೆಗೆ ಮೆಚ್ಚಿ ಒಂದಾನೊಂದು ಸಭೆಯವರು ಅವರಿಗೆ **ಕರ್ಣಾಟಕ ಕವಿ**

ರತ್ನ ಎಂಬ ಬಿರುದನ್ನು ಕೊಟ್ಟಿದ್ದರು. 'ವಿದ್ಯಾರಣ್ಯ', 'ಚೂಡಾಲೆ' 'ಕೃಷ್ಣಮಹೀಶ್ವರಿ' ಮುಂತಾದವು ಚಂಪೂನಾಟಕಾದಿಗಳ ರಚನೆಯಲ್ಲಿ ಅವರಿಗಿದ್ದ ಕೌಶಲದ ಮಟ್ಟವನ್ನು ವ್ಯಕ್ತಗೊಳಿಸುತ್ತವೆ. ಕನ್ನಡಗದ್ಯವನ್ನು ಬರೆಯುವಾಗ ಅವರು ಬಳಕೆಗೆ ತಂದಿರುವ ನುಡಿಗಳ ಬೆಡಗು ಎಷ್ಟೋ ಜನ ತರುಣರನ್ನು ಮುಗ್ಧಗೊಳಿಸಿ ಅವರ ಶೈಲಿಯನ್ನು ಅನುಕರಿಸುವಂತೆ ಹುರಿಗೊಳಿಸಿರುತ್ತದೆ. ಕನ್ನಡ ನಾಡಿನಲ್ಲಿಯೂ ಕನ್ನಡ ನುಡಿಯಲ್ಲಿಯೂ ಅವರಿಗಿದ್ದ ಅಭಿಮಾನವು ಮಿಕ್ಕ ಯಾವ ಕನ್ನಡಿಗರಿಗಿಂತಲೂ ಕಡಿಮೆಯಾಗಿರಲಿಲ್ಲವೆಂದು ಧಾರಾಳವಾಗಿ ಹೇಳಬಹುದು. ಆದರೆ ಇವೆಲ್ಲಕ್ಕಿಂತಲೂ ಪರಮಾರ್ಥವಿಚಾರದಲ್ಲಿ ಅವರು ಮುಟ್ಟಿದ್ದ ಆಳವೂ ಅಧ್ಯಾತ್ಮ ಸಾಧನೆಯಲ್ಲಿ ಅವರು ತೋರಿಸುತ್ತಿದ್ದ ಶ್ರದ್ಧಾತತ್ಪರತೆಗಳೂ ತಮಗೆ ತಿಳಿದುಬಂದ ವಿಷಯಗಳನ್ನು ತಿಳಿಗನ್ನಡದಲ್ಲಿ ಸೂರೆಗೊಟ್ಟ ಅವರ ಪ್ರತಿಭೆಯೂ ಔದಾರ್ಯವೂ ನಮ್ಮನ್ನು ಬೆರಗುಗೊಳಿಸಿರುತ್ತವೆ.

ಅಂತರಂಗದಲ್ಲಿ ನಾವಿಬ್ಬರೂ ಕಲೆತು ಮಾತಾಡುತ್ತಿದ್ದಾಗ ಅವರು ಸಂಭಾಷಣೆಯಲ್ಲಿ ತೋರಿಸುತ್ತಿದ್ದ ರಸಹಾಸ್ಯ, ತಮ್ಮ ಪರಿಚಯದವರಲ್ಲಿ ಒಬ್ಬನಾದ ನನ್ನಲ್ಲಿ ಅವರಿಟ್ಟಿದ್ದ ಪ್ರೇಮ- ಮುಂತಾದ ವೈಯಕ್ತಿಕ ಜೀವನದ ಭಾಗವನ್ನು ಕುರಿತು ಇಲ್ಲಿ ಪ್ರಸ್ತಾಪಿಸಲು ಎಡೆಯಿಲ್ಲ. ಆದರೆ ಇತ್ತೀಚೆಗೆ ವೇದಾಂತವಿಚಾರದಲ್ಲಿ ನನಗೂ ಅವರಿಗೂ ಉಂಟಾದ ಕೆಲವು ಅಭಿಪ್ರಾಯ ಭೇದಗಳನ್ನು ಅವರು ಮುಚ್ಚುಮರೆಯಿಲ್ಲದೆ ಹೊರಗೆಡಹಿದ್ದು, ಈಚೆಗೆ ನನ್ನ ಅಭಿಪ್ರಾಯಗಳು ಸರಿಯೆಂದು ತಮಗೆ ಕಾಣಿಸಿದ ಮೇಲೆ ಮತ್ತೆ ನನ್ನಲ್ಲಿ ಮೊದಲಿಗಿಂತಲೂ ಹೆಚ್ಚಿನ ಬಳಕೆಯಿಂದ ಬೆರೆತಿರಬೇಕೆಂದು ಹವಣಿಸಿದ್ದು, ನನ್ನ ದುರ್ದೈವದಿಂದ ಅಷ್ಟಕ್ಕೆಡೆಯಿಲ್ಲದೆ ಕರಾಳ ಕಾಲದ ವಶದಿಂದ ಅವರು ಕಳೆದ ಚೈತ್ರ ಬಹುಳ ತದಿಗೆಯ ದಿನ ಇಹಲೋಕವನ್ನು ಬಿಟ್ಟು ತೆರಳಿದ್ದು - ಇವುಗಳಿಂದ ನನ್ನ ಮನದಲ್ಲುಂಟಾಗಿರುವ ಮೆಚ್ಚುಗೆಯೂ ಮೈತ್ರಿಯ ಹೊರಹೊಮ್ಮುಗೆಯೂ ವಿರಹ ಶೋಕವೂ ಒಳತೋಟಿಯಾಡುತ್ತಿರುವವು, ಪರಮಾತ್ಮನಲ್ಲಿ ನಾವಿಬ್ಬರೂ ಯಾವಾಗಲೂ ಒಂದಾಗಿಯೇ ಇರುವೆವೆಂಬ ಶಾಸ್ತ್ರೀಯ ದೃಷ್ಟಿಯ ಸಮಾಧಾನವೊಂದೇ ಚಿತ್ತದ ಈ ಏರಿಳಿತ ಗಳಿಗೆ ತಡೆಯಾಗಬಲ್ಲದು.

ಇಡಿಯ ಕರ್ಣಾಟಕಕ್ಕೇ ಪರಿಚಿತರಾಗಿರುವ ಈ ಮಹಾನುಭಾವರ ಜೀವನವನ್ನು ನನ್ನ ಕಣ್ಣಿಂದ ಅಳೆದು ಬರೆದಿರುವದಕ್ಕಾಗಿ ಕನ್ನಡಿಗರೆಲ್ಲರ ಕ್ಷಮೆಯನ್ನು ಬೇಡುತ್ತೇನೆ. ಕಷ್ಟಸಹಿಷ್ಣುಗಳಾಗಿ ನಿರಂತರವಿದ್ಯಾಭ್ಯಾಸಿಗಳಾಗಿ ಇಹಕ್ಕೂ ಪರಕ್ಕೂ ಬೇಕಾದ ಹೆಗ್ಗುರಿಯನ್ನು ನಡೆಯಿಂದಲೂ ನುಡಿಯಿಂದಲೂ ಜನರಿಗೆ ತೋರಿಕೊಡಬಲ್ಲ ಇಂಥ ಚಿದಂಬರಯ್ಯನವರುಗಳು ಕನ್ನಡ ನಾಡಿನಲ್ಲಿ ಹೇರಳವಾಗಿ ಉದಯಿಸಲಿ ! ಜಯ ಚಿದಂಬರ!!

# 2. ಭರತಖಂಡದ ಮುಖ್ಯಧನ

ಸಮುದ್ರದಲ್ಲಿ ಏರುವಿಕೆಯೂ ಇಳಿಯುವಿಕೆಯೂ ಹೇಗೆ ಒಂದನ್ನೊಂದು ಹಿಂಬಾಲಿಸಿಕೊಂಡಿರುವವೋ ಹಾಗೆ ಪ್ರಪಂಚದಲ್ಲಿ ಉನ್ನತಿಯೂ ಅವನತಿಯೂ ಪ್ರತಿಯೊಂದು ವಸ್ತುವಿಗೂ ಗಂಟುಬಿದ್ದೇ ಇರುವದು. ಇದರಂತೆ ಎಷ್ಟೋ ದೇಶ ದೇಶಗಳೇ ಎಷ್ಟೋ ಸಲ ಮೇಲಕ್ಕೂ ಕೆಳಕ್ಕೂ ಸುತ್ತಾಡಿರುವವು. ಇವುಗಳ ಪೂರ್ವ ಚರಿತ್ರೆಯನ್ನೆಲ್ಲ ಪರಿಶೀಲನೆ ಮಾಡಿ ನೋಡಿದವರು ಪರಮಾವಧಿಯ ಸಾಮರ್ಥ್ಯವುಳ್ಳ ದೂರದರ್ಶಕ ದರ್ಪಣವನ್ನಿಟ್ಟುಕೊಂಡು ಚೆನ್ನಾಗಿ ಕಣ್ಣನ್ನರಳಿಸಿ ನಿಟ್ಟಿಸಿ ನೋಡಿದವರು ಕೂಡ ಈಗ ಜಗತ್ತಿನಲ್ಲಿರುವ ದೇಶಗಳಲ್ಲೆಲ್ಲ ಭರತಖಂಡವೇ ಪುರಾತನ ರಾಜ್ಯವೆಂದು ಸಿದ್ಧಮಾಡಿರುವರು. ಈಗ ಯಾವ ದೇಶವು ತನ್ನಲ್ಲಿ ನಿರ್ಮಿತವಾದ ವಸ್ತ್ರಾಲಂಕಾರಗಳ ಥಳಕಿನಿಂದ ಈ ನಮ್ಮ ದೇಶದವರ ಕಣ್ಣು ಕುಕ್ಕುತ್ತಿರುವದೋ ಆ ಇಂಗ್ಲೆಂಡು ದೇಶದ ಜನರು ಬಟ್ಟೆಯ ಸ್ವರೂಪವನ್ನೇ ಕಾಣದೆ ಮೈಗೆ ಕಾಡು ಸೊಪ್ಪುಗಳನ್ನು ಕಟ್ಟಿಕೊಂಡು ಗುಡ್ಡಗಾಡುಗಳಲ್ಲಿ ಕಾಡು ಜನರಂತೆ ಅಲೆಯುತ್ತಿದ್ದಾಗಲೇ ಭರತಖಂಡದ ಜನರು-ಆಧ್ಯಾತ್ಮಿಕ ಸಂಪತ್ತಿನ ಮಾತೊಂದು ಕಡೆ ಇರಲಿ, ಅದು ಅವರ ಜನ್ಮಕ್ಕೆ ಹತ್ತಿದ್ದು- ಲೌಕಿಕ ಸಂಪತ್ತಿನಲ್ಲಿಯೇ ಸಂಪೂರ್ಣ ಭೂಮಂಡಲವನ್ನೇ ಬೆರಗುಮಾಡಿ ಬಿಟ್ಟಿದ್ದರು. ಈಚೆಗೆ ಇಂಗ್ಲೆಂಡು ಮೊದಲಾದ ದೇಶಗಳ ಜನರು ತಾವು ತಮ್ಮ ಉನ್ನತಿಯ ಶಿಖರವನ್ನೇರಿ ಅಲ್ಲಿಂದಲೇ ಭರತಖಂಡದ ಭವ್ಯತೆಯನ್ನು ಕಂಡು ತಮ್ಮ ಕಣ್ಣಿಗೂ ಬೊಕ್ಕಸಕ್ಕೂ ಹಬ್ಬವನ್ನು ಮಾಡಿಕೊಳ್ಳಬೇಕೆಂದು ನಮ್ಮ ದೇಶದಲ್ಲಿ ಪಾದಾರ್ಪಣಮಾಡಿ ನೋಡಿದಾಗ ಇಲ್ಲಿಯ ವಿಲಕ್ಷಣ ನಾಗರಿಕತೆಯನ್ನು ಕಂಡು ಅವರು ಇದನ್ನು ವಿವಿಧ ರೀತಿಯಿಂದ ವರ್ಣನೆ ಮಾಡಿ ಬರೆದಿರುತ್ತಾರೆ. ಆಗಿನ ಕಾಲದಲ್ಲಿ ಭರತಖಂಡದ ತಿರುಳೂ ಅಷ್ಟು ಸವಿಯಾಗಿತ್ತು. ಆಗ ಈ ದೇಶಕ್ಕೂ ಪರದೇಶಕ್ಕೂ ಸಂಬಂಧವು ಬೆಳೆದಿರಲಿಲ್ಲವಾದ್ದರಿಂದಲೋ ಅಂತೂ ಪಶ್ಚಿಮ ದೇಶದ ಯಾತ್ರಿಕರೆಲ್ಲರೂ ನಮ್ಮ ಭರತಖಂಡವನ್ನು ಬಾಯಿತುಂಬ ಕೊಂಡಾಡಿ ಕೈತುಂಬ ಬರೆದಿಟ್ಟಿರುವರು. ಈಚೆಗೆ ಯಾರ ಕಾಲಗುಣದಿಂದಲೋ ಏನೋ ಭರತಖಂಡದ ತಿರುಳು ಸುಕ್ಕಿ ಸೊರಗಿ ನೀರವಾಗುತ್ತ ಬಂದು ಈಗ ಒಣಗಿ ಗರಗಾಗುವ ಸ್ಥಿತಿಗೆ ಬಂದಿದೆ. ಇನ್ನಾದರೂ ಅದರ ಬುಡಕ್ಕೆ ತಂಪು ಸೇರದೆ ಹೋದರೆ ಉಷ್ಣಾಧಿಕ್ಯದಿಂದ ಅದು ಕಾವೇರಿ ಸೀದು ಬಗ್ಗಾಗುವದೇ ಸರಿ. ಇರಲಿ, ದೈವಯೋಗವು ಹೇಗಿರುವದೋ ಏನೊ! ಈಗಂತು ಭರತಖಂಡವೆಂದರೆ ಇತರ ದೇಶಗಳೊಡನೆ ಹೋಲಿಸಿದಾಗ ಫಲವೃಕ್ಷಗಳ ನಡುವಣ ಮೋಟುಮರದಂತೆ ನಿರಾಶಾಜನಕವಾಗಿ ಕಾಣುತ್ತದೆ.

ಕಂಡರೂ ಹೆದರಬೇಕಾದ್ದಿಲ್ಲ. ''ಬಡವಂ ಬಲ್ಲಿದನಾಗನೆ?'' ಎಂದು ಮುಂತಾದ ವಾಕ್ಯಗಳು ಸೋಮೇಶ್ವರ ಶತಕದಲ್ಲಿ ಇನ್ನೂ ನಮ್ಮ ಕಣ್ಣುಮುಂದೆ ಬಂದು ನಿಂತು ನಮ್ಮ ಜೀವಜ್ಯೋತಿಯನ್ನು ಉಜ್ವಲಗೊಳಿಸುತ್ತಿವೆ.ಈಗ ನಮ್ಮ ದೇಶದ ನಾಗರಿಕತೆಯು ಎಷ್ಟೇ ಮಸುಕಾಗಿದ್ದರೂ ಒಮ್ಮೆ ಇದು ತನ್ನ ಪ್ರತಿಭೆಯ ಪ್ರಖರತ್ವದಿಂದ ಪ್ರತಿಯೊಂದು ಜನಾಂಗವನ್ನೂ ತಲೆದೂಗಿಸಿದ್ದೆಂಬ ಪ್ರತೀತಿಯು ಮಾತ್ರ ಇನ್ನೂ ಅಚ್ಚಳಿಯದೆ ಇರುವದು.

ಹೀಗೆ ಭರತಖಂಡವು ಇಷ್ಟು ಪುರಾತನವಾಗಿರುವುದು, ಭರತಖಂಡದ ವೇದವು ಇನ್ನೂ ಪುರಾತನವಾಗಿರುವದು. ಹೇಗೆಂದರೆ ನಾವು ಮೇಲೆ ಹೇಳಿದ ದೇಶ ಪುರಾತನತ್ವವು ಇತಿಹಾಸಕಾಲದ ಹಿಂಭಾಗದ್ದು . ಮನಸ್ಸಿನ ಊಹಾಶಕ್ತಿಯನ್ನು ಮತ್ತಷ್ಟು ಹಿಂದಕ್ಕೆ ನೂಕಿದರೆ ಇತಿಹಾಸಕಾಲದ ಹಿಂದೆ ಪುರಾಣಕಾಲ, ಪುರಾಣ ಕಾಲದ ಹಿಂದೆ ಸ್ಮೃತಿಕಾಲ, ಅದರ ಹಿಂದೆ ಶ್ರುತಿ ಕಾಲ ಹೀಗೆ ಹನುಮನ ಬಾಲದಂತೆ ಬೆಳೆಯುವದು. ಆ ಶ್ರುತಿಕಾಲವು ಯಾವದೆಂದರೆ ಹೇಳುವದಕ್ಕೆ ಇದುವರೆಗೆ ಯಾರಿಗೂ ಶಕ್ಯವಾಗಿಲ್ಲ. ಹೀಗೆ ಕಾಲನಿರ್ಣಯ ಮಾಡುವ ಚಟವು ಪಾಶ್ಚಾತ್ಯರಿಗೆ ಹೆಚ್ಚು. ಈಚೀಚೆಗೆ ಪಾಶ್ಚಾತ್ಯ ಸಂಸ್ಕೃತಿಯು ತನ್ನ ಕಾಲನ್ನು ನಮ್ಮ ಕಡೆಗೆ ಚಾಚಿದ ಮೇಲೆ ನಮ್ಮವರೂ ಅವರನ್ನು ಅನುಕರಣ ಮಾಡಿ ಕಾಲ ನಿರ್ಣಯ ಮಾಡುವದಕ್ಕೆ ಹೊರಡುತ್ತಿರುತ್ತಾರೆ. ಸ್ವಭಾವ ವಾಗಿ ನಮ್ಮವರು ಕಾಲ ನಿರ್ಣಯ ಪಕ್ಷಪಾತಿಗಳಲ್ಲ. ವಸ್ತುನಿರ್ಣಯ ಪಕ್ಷಪಾತಿಗಳು ಇರಲಿ. ಯಾರು ಎಷ್ಟು ಊಹಿಸಿದರೂ ಶ್ರುತಿಯ ಕಾಲವು ಇದೇ ಸರಿಯೆಂದು ಏಕಾಭಿಪ್ರಾಯವಿನ್ನೂ ರೂಪಗೊಂಡಿಲ್ಲ. ಅವರು ತಮ್ಮ ಮನಸ್ಸಿನ ಪಾತ್ರವು ಹರಿದು ಹೋಗುವಷ್ಟು ಹಿಗ್ಗಿಸಿ ಊಹಿಸಿದರೂ ಊಹೆಗೆ ಶಕ್ಯವಾದಷ್ಟು ಕಾಲದ ಹಿಂದೆಯೇ ಒಂದೊಂದೇ ಉತ್ತರವು ಮತ್ತೆ ಮತ್ತೆ ಕಣ್ಣೆದುರಿಗೆ ಬಂದೀತೆಂದು ತೋರುತ್ತದೆ. ಇನ್ನು ನಮ್ಮ ಶ್ರುತಿಯಲ್ಲಿರುವ ಉಲ್ಲೇಖವನ್ನೇ ನೋಡಿದರೆ ಜಗತ್ತಿನ ಸೃಷ್ಟಿಯಾದಾಗಲೇ ಈ ಶ್ರುತಿಯೂ ಸೃಷ್ಟಿಯಾಯಿತೆಂದು ತಿಳಿಯಬರುತ್ತದೆ. ಅಂತು ಇಂತು ಶ್ರುತಿಯು ಅತ್ಯಂತ ಪುರಾತನವಾದುದೆಂದು ಸಿದ್ಧವಾಯಿತು.

ಈ ಶ್ರುತಿಯು ನಮ್ಮ ಮುಖ್ಯಧನ. ಬಹು ಪುರಾತನ ನಾಣ್ಯಗಳನ್ನು ಭೂಮಿ ಯಿಂದ ಹೊರಗೆಡೆವಿರುವ ದೇಶಗಳೆಷ್ಟೋ ಉಂಟು. ಶ್ರುತಿಯಂಥ ಪುರಾತನ ನಾಣ್ಯವನ್ನು ಬೇರೆ ಯಾವ ದೇಶವೂ ಹಡೆದಿಲ್ಲ. ಇತರ ದೇಶಗಳ ನಾಣ್ಯಗಳು ಎಷ್ಟೇ ಪುರಾತನವಾಗಿದ್ದರೂ ಅವೆಲ್ಲ ನಮ್ಮ ಶ್ರುತಿಯ ಆಭಾಸಗಳೇ ಸರಿ. ಈ ಶ್ರುತಿಯಲ್ಲಿಯೂ ವೇದಾಂತ ಅಥವಾ ಅಧ್ಯಾತ್ಮಶಾಸ್ತ್ರವೆಂಬ ಭಾಗವು ನಮ್ಮ ಪುರಾತನಧನದ ಮುಖ್ಯ

ಸ್ವರೂಪವು. ವೇದಾಂತದ ಹೊರತು ಉಳಿದ ಕರ್ಮ ಮತ್ತು ಉಪಾಸನೆ ಈ ಭಾಗಗಳೆಲ್ಲ ಆ ಮುಖ್ಯಸ್ವರೂಪದ ಅಂಗಗಳು.

ಲೌಕಿಕಸಂಪತ್ತಿನಿಂದ ಎಷ್ಟೋಕಾಲ ಮುಗಿಲುಮುಟ್ಟಿ ಮೆರೆಯುತ್ತಿದ್ದ ಎಷ್ಟೋ ದೇಶಗಳು ಮಣ್ಣುಮುಕ್ಕಿ ಹೋದವು. ಅದರಂತೆ ಒಮ್ಮೆ ಇಂದ್ರನ ಅಮರಾವತಿ ಯನ್ನು ಅಣಕಿಸಿದಂಥ ನಮ್ಮ ಭರತಖಂಡವೂ ಈಗ ನೆಲ ಹಿಡಿದು ಪಾತಾಲದ ಮುಂದೆ ಬಾಯಿ, ನೀರುಸುರಿಸುತ್ತಿರುವದು. ಆದರೂ ಇತರ ದೇಶಗಳ ಅವನತಿ ಸ್ಥಿತಿಗೂ ನಮ್ಮ ದೇಶದ ಅವನತಿ ಸ್ಥಿತಿಗೂ ಬಹಳ ಅಂತರವಿದೆ. ಇತರ ದೇಶಗಳು ತಮ್ಮ ಮುಖ್ಯ ಧನವಾದ ಲೌಕಿಕ ಸಂಪತ್ತನ್ನೆಲ್ಲ ಕಳೆದುಕೊಂಡು ಮುಖವನ್ನು ಒಣಗಿಸಿಕೊಂಡು ತಾರತಮ್ಯವಾಡುತ್ತಿವೆ. ಭರತಖಂಡವು ಲೌಕಿಕ ಸಂಪತ್ತನ್ನು ಕಳೆದುಕೊಂಡು ತಲೆಯ ಮೇಲೆ ಮುಸುಕುಹಾಕಿಕೊಂಡಿದ್ದರೂ ಮುಖ ಮುದ್ರೆ ಮಾಸಿಲ್ಲ. ಏಕೆಂದರೆ **ನಮ್ಮ ದೇಶದ ಮುಖ್ಯಧನವು ಲೌಕಿಕ ಸಂಪತ್ತಲ್ಲ, ಅಧ್ಯಾತ್ಮವಿದ್ಯೆ.** ನಮ್ಮ ದೇಶದ ಬೆಳಕು ಕ್ಷುದ್ರವಾದ ಲೌಕಿಕ ವಸ್ತುಗಳ ಬೆಳಕಿಗೆ ಬೆರಗಾಗುವಂಥದ್ದಲ್ಲ. ನಮ್ಮ ದೇಶವು ಅಧ್ಯಾತ್ಮಪ್ರಕಾಶದ್ದು . ಉಳಿದ ಎಲ್ಲಾ ಪದಾರ್ಥಗಳಿಗೂ ಅಂತವುಂಟು, ವೇದಾಂತಕ್ಕೆ ಅಂತವಿಲ್ಲ . ಆದ್ದರಿಂದ ಭರತಖಂಡವು ಲೌಕಿಕಸಂಪತ್ತಿನ ದೃಷ್ಟಿಯಿಂದ ನೆಲಹಿಡಿದರೂ ಅದರೊಳಗಣ ಪೆಚ್ಚಾದ ವೇದಾಂತವೆಂಬ ಮುಖ್ಯಧನವನ್ನು ಸ್ವಲ್ಪಮಟ್ಟಿಗೆ ಬಳಕೆಗೆ ತಂದುಕೊಳ್ಳುತ್ತಲೆ ಅದು ತನ್ನ ಅದ್ವಿತೀಯ ಸಾಮರ್ಥ್ಯದಿಂದ ಸೂಜಿಕಲ್ಲು ಕಬ್ಬಿಣ ವನ್ನೆಳೆಯುವಂತೆ ಉಳಿದ ಜಗತ್ತನ್ನೆಲ್ಲ ತನ್ನ ಕಡೆಗೆ ಎಳೆದುಕೊಂಡು ಅದಕ್ಕೆ ತನ್ನ ಪ್ರತಿಷ್ಠೆಯನ್ನು ಮನಗಾಣಿಸಿ ಕೊಟ್ಟು ಜಗತ್ತಿನ ಮೇಲ್ಮೆಗೆ ಕೇಂದ್ರಸ್ಥಾನವಾಗಿರುವದು.

ವೇದಾಂತಶಾಸ್ತ್ರವು ಶ್ರೀಸ್ವಾಮಿ ವಿವೇಕಾನಂದರ ಕಾಲಕ್ಕೆ ಮೊದಲನೆಯ ಸಲ ಪರದೇಶ ಸಂಚಾರಕ್ಕೆ ಹೊರಕ್ಕೆ ಹೆಜ್ಜೆಯನ್ನಿಟ್ಟು ಹೊರಟಿತೆಂದು ಎಲ್ಲರೂ ತಿಳಿದಿರುವರು. ವೇದಾಂತವು ಪಶ್ಚಿಮದೇಶಕ್ಕೆಂದು ಪ್ರಸ್ಥಾನಮಾಡಿದ್ದು ಸ್ವಾಮಿಗಳಕಾಲದಲ್ಲಿರಬಹುದು. ಆದರೆ ಅದಕ್ಕೆ ಮುಂಚೆ ಪೂರ್ವದೇಶದಲ್ಲಿಯೇ ಭರತಖಂಡದ ಹೊರಗೆಲ್ಲ ಗುಡುಗಾಡುತ್ತಿತ್ತೆಂದು ಊಹಿಸುವದಕ್ಕೆ ಬಲವಾದ ಆಧಾರಗಳಿವೆ. ಕ್ರಿ.ಪೂ. 600 ವರ್ಷಗಳ ಹಿಂದೆ ಆಗ್ಗೆ ಶ್ರೀಶಂಕರಾಚಾರ್ಯರೂ ಕೂಡ ಅವತರಿಸಿರಲಿಲ್ಲ - ಲಾವೋಟ್ಸಿ ಎಂಬ ತತ್ತ್ವಜ್ಞಾನಿಯ ಮೂಲಕ ಚೀನದೇಶದಲ್ಲಿ ವೇದಾಂತಮತದ ಪ್ರಸಾರ ವಾಗಿರುವದು. ಅವನು ಆ ತನ್ನ ಮತವನ್ನು ಟಾವೊಯಿಸಂ ಎಂದು ಕರೆದಿರುವನು. ಟಾವೊ ಎಂದರೆ ಬ್ರಹ್ಮ. ವಾಚಕರ ಅವಗಾಹನೆಗಾಗಿ ಆ ಟಾವೊ ಮತದ ಸಿದ್ಧಾಂತವನ್ನು ಹೇಳಿ ಅದರ ಕೆಳಗೆ ವೇದಾಂತದ ಅದೇ ಅಭಿಪ್ರಾಯಗಳಲ್ಲಿ ಇಲ್ಲಿ ಬರೆಯುತ್ತೇನೆ.

ಟಾ. ಅದಕ್ಕೆ ನಾಮನಿರ್ದೇಶವೇ ಅಶಕ್ಯ.

ವೇ. ಯತೋ ವಾಚೋ ನಿವರ್ತನ್ತೇ ಅಪ್ರಾಪ್ಯ ಮನಸಾ ಸಹ

ಟಾ. ಯಾವದು ನಮಗೆ ಗೋಚರವಾಗುವದೋ.....ಅದೆಲ್ಲಮಿಥ್ಯ.

ವೇ. ಯದ್ದೃಶ್ಯಂ ತನ್ಮಿಥ್ಯಾ.

ಟಾ. ನಿನ್ನ ಆತ್ಮವೂ ಟಾವೊವೂ ಒಂದೆ.

ವೇ. ತತ್ತ್ವಮಸಿ.

ಟಾ. ಸತ್, ಅಸತ್-ಎಲ್ಲವೂ ಟಾವೊ.

ವೇ. ಬ್ರಹ್ಮೈವೇದಂ ಸರ್ವಂ.

ಟಾ. ಟಾವೊವನ್ನು ಯಾರೂ ನಾಶಗೊಳಿಸಲಾರರು.

ವೇ. ಅಚ್ಛೇದ್ಯೋಽಯಮದಾಹ್ಯೋಽಯಂ.

ಟಾ. ಟಾವೋವು ಕೊಲೆಗಡುಕನಲ್ಲಿಯೂ ವೇಶ್ಯೆಯಲ್ಲಿಯೂ....ತತ್ತ್ವವೇತ್ತನಲ್ಲಿಯೂ ಸಮನಾಗಿರುವದು.

ವೇ. ಶುನಿಚೈವ ಶ್ವಪಾಕೇಚ ಪಂಡಿತಾಃ ಸಮದರ್ಶಿನಃ.

ಟಾ. ಮನುಷ್ಯನ ಪಾಪಪುಣ್ಯಗಳೆಲ್ಲವೂ ಸುಳ್ಳು.

ವೇ. ಮಾಯಾಮಯತ್ವಂ ಭೋಗಸ್ಯ.

ಟಾ. ಪುರುಷರು ಸ್ತ್ರೀಯನ್ನು ಪ್ರೀತಿಸಿದರೂ ಟಾವೋವನ್ನು ಪ್ರೀತಿಸಿದಂತೆಯೆ.

ವೇ. ತತ್ರೇಮಾತ್ಮಾರ್ಥಮನ್ಯತ್ರ ನೈವಮನ್ಯಾರ್ಥಮಾತ್ಮನಿ ।
ಅತಸ್ತತ್ಪರಮಂ ತೇನ ಪರಮಾನಂದಮಾತ್ಮನಃ ॥

ಹೀಗೆ ನಮ್ಮ ದೇಶದ ಮುಖ್ಯಧನವಾದ ವೇದಾಂತವು ತನ್ನ ದೇಶವನ್ನು ಬೆಳಕುಮಾಡುವದೇ ಅಲ್ಲದೆ ತನ್ನದೊಂದು ಕೃಪಾಕಟಾಕ್ಷದಿಂದ ಪರದೇಶದವರ ಕಣ್ಣು ಮಂಜುಮಂಜಾಗುವಷ್ಟು ಬೆಳಕನ್ನು ಬೀರುವಂಥದ್ದಾಗಿರುವದು. ಲೌಕಿಕವಾದ ಯಾವ ಧನಕ್ಕೂ ಈ ಬಗೆಯ ಸಾಮರ್ಥ್ಯವು ಬರಲಾರದು. ತನ್ನ ಗುರುತ್ವದಿಂದ ಲೋಕವನ್ನೆಲ್ಲ ತನ್ನ ಪಾದಮೂಲದಲ್ಲಿ ಕುಳ್ಳಿರಿಸಿಕೊಂಡು ಸಂತಯಿಸುವಂಥ ವೇದಾಂತರೂಪವಾದ ಮುಖ್ಯಧನಕ್ಕೆ ಸಮಾನವಾದ ಮತ್ತೊಂದು ಧನವು ಎಲ್ಲೆಲ್ಲಿಯೂ ಸೃಷ್ಟಿಯಾಗಿಲ್ಲ. ಇಂಥ ಮುಖ್ಯಧನದ ಜನ್ಮಸ್ಥಾನವಾದ ಭರತಖಂಡವೇ ಧನ್ಯ! ಧನ್ಯ!!

*****

# 3. ಅಪ್ಪಯ್ಯನವರ ವೃತ್ತಾಂತ

ನಮ್ಮ ದೇಶದ ಭಾಗ್ಯವೆಂದರೆ ಸಾಧುಸಂತರು. ಎಷ್ಟೋಕಾಲಗಳ ಹಿಂದೆ ನಮ್ಮ ದೇಶವು ಭೌತಿಕವಾದ ಐಶ್ವರ್ಯದಲ್ಲಿಯೂ ಕೂಡ ಸೃಷ್ಟಿಯ ಇತರ ಪ್ರಾಂತ್ಯವನ್ನೆಲ್ಲಾ ಮೀರಿಸಿತ್ತೆಂದು ಎಷ್ಟೋ ಜನರು ಹೇಳಿಕೊಳ್ಳುವರು. ನಮಗಂತು ಈಗ ಅದು ಪುರಾಣದ ಮಾತೋ ಕನಸಿನಮಾತೋ ಆಗಿರುವದು. ಭೌತಿಕವಾದ ಐಶ್ವರ್ಯದಮಾತು ಹೇಗಾದರೂ ಇರಲಿ, ಪಾರಮಾರ್ಥಿಕವಾದ ಸಂಪತ್ತಿನಲ್ಲಿ ಅಂದರೆ ಧರ್ಮನಿಷ್ಠೆ ಯಲ್ಲಿ ನಮ್ಮ ದೇಶದ ಕಯ್ಯೇ ಮೇಲೆಂಬುದಕ್ಕೆ ಎಳ್ಳಷ್ಟೂ ಸಂಶಯವಿಲ್ಲ. ನಮ್ಮ ದೇಶದ ಧರ್ಮನಿಷ್ಠೆಯ ಪ್ರಾಬಲ್ಯವು ಪುರಾಣಕಾಲದಲ್ಲಿ ಮಾತ್ರವೇ ಅಲ್ಲ. ಈಗಲೂ ಉಜ್ಜ್ವಲವಾಗಿರುವದು. ಮುಂದೆಯೂ ಹೀಗೆಯೇ ಇರುವದು. ಭರತ ಖಂಡವು ಧರ್ಮನಿಷ್ಠೆಯ ತವರ್ಮನೆ. ಅಥವಾ ಅಷ್ಟೇಕೆ, ಧರ್ಮನಿಷ್ಠೆಯೇ ಭರತ ಖಂಡವಾಗಿ ರೂಪುಗೊಂಡಿರುವದೆಂದರೂ ಅತಿಶಯೋಕ್ತಿಯಾಗಲಾರದು. ಆದ್ದರಿಂದ ನಿಜವಾದ ಭಾರತೀಯನೆಂದರೆ-ಭರತಖಂಡದ ಭೂಗುಣಕ್ಕೊಪ್ಪುವ ಪುರುಷನೆಂದರೆ - ಧರ್ಮ ನಿಷ್ಠನಾದವನು. ಆಕಾಶದಲ್ಲಿ ಎಷ್ಟೋ ನಕ್ಷತ್ರಗಳಿದ್ದರೂ ಚಂದ್ರನೊಬ್ಬನಿಂದ ಅದು ಬೆಳಗುವಂತೆ ಭರತಖಂಡದಲ್ಲಿ ಕೋಟ್ಯನುಕೋಟಿ ಪ್ರಜೆಗಳಿದ್ದರೂ ಅದು ಭರತಖಂಡ ವೆನಿಸಿಕೊಳ್ಳುವದು ಧರ್ಮನಿಷ್ಠರಿಂದ. ಧರ್ಮದ ಕಡೆಯ ಲಕ್ಷ್ಯವಿಲ್ಲದೇ ಬರೀ ಭೌತಿಕಶಾಸ್ತ್ರದ ಅವಲಂಬನದಿಂದ ಎಷ್ಟು ಜನರು ಪರೋಪಕಾರ ದೀಕ್ಷೆಯನ್ನು ವಹಿಸಿದರೂ ಅವರಿಂದ ನಿಜವಾದ ಸಾರ್ವಜನಿಕಹಿತವು ಈಡೇರಲಾರದು. ಇನ್ನೇನು, ಆ ಉದ್ದೇಶವು ಶ್ಲಾಘ್ಯವಾದದ್ದಾದ್ದರಿಂದಲೂ ಅವರ ಪ್ರಯತ್ನವು ಬಲವಾಗಿರುವದ ರಿಂದಲೂ ಅಷ್ಟಿಷ್ಟು ಹಿತವಾದಂತೆ ಕಂಡರೂ ಅದೂ ಬರೀ ತೋರಿಕೆಯದೇ ಸರಿ. ನಿಜವಾದ ಹಿತವು ಧರ್ಮನಿಷ್ಠೆಯುಳ್ಳವರಿಂದ ಮಾತ್ರವೇ ಆಗುವದು. ಧರ್ಮದ ಪ್ರಸಾರಕ್ಕಾಗಿ ನಮ್ಮದೇಶದಲ್ಲಿ ಅಲ್ಲಲ್ಲಿ ಬೇರೆಬೇರೆ ಮಠಗಳೂ ಬೇಕಾದಷ್ಟಿದ್ದರೂ ಅವುಗಳು ಧರ್ಮದ ಪ್ರಸಾರಕ್ಕೇನೂ ಹೆಚ್ಚು ನೆರವಾಗಿಲ್ಲ. ಅವುಗಳ ಲಕ್ಷ್ಯವೆಲ್ಲಾ ವ್ಯಾವಹಾರಿಕ ವಾದ ವೈಭವಗಳ ಪೂರ್ಣತೆಯನ್ನು ಮಾಡಿಕೊಳ್ಳುವದರ ಕಡೆಗೇ ಇರುವದ ರಿಂದ ಪಾಪ, ಧರ್ಮಪ್ರಸಾರದ ಕಡೆಗೆ ಅವುಗಳಿಗೆ ಅವಕಾಶವು ಹೇಗೆ ಸಿಕ್ಕೀತು? ಆ ವೈಭವಗಳಿಗಾದರೋ ತುದಿಯಿಲ್ಲ ಮೊದಲಿಲ್ಲ. ಅವು ಪೂರ್ಣವಾಗುದೆಂದಿಗೆ? ಇನ್ನೊಂದೇನೆಂದರೆ, ಮಠದವರು ಅತ್ಯುಚ್ಚವಾದ ಗುರುಪೀಠವನ್ನು ಆರೋಹಣ ಮಾಡಿರುವದರಿಂದ ತಮ್ಮ ಗಾಂಭೀರ್ಯವನ್ನು ರಕ್ಷಣೆ ಮಾಡಿಕೊಳ್ಳುವ ಸಡಗರದಲ್ಲಿ

ಅವರು ಬಡಬಗ್ಗರನ್ನೂ ಮತ್ತು ಕೀಳುಜಾತಿಯವರನ್ನೂ ವಿಚಾರಿಸುವದು ಕೂಡ ಮತದವರ ಗೌರವಕ್ಕೆ ಸಲ್ಲದ್ದೆನಿಸುವದು. ಹೀಗೆ ಪದವಿಯ ಬಲೆಗೆ ಬಿದ್ದಿರುವಾಗ ಸಾರ್ವಜನಿಕಹಿತಕ್ಕೆ ಅವರಿಗೆ ಅವಕಾಶವೆಲ್ಲಿ? ಸಾಧುಸಂತರ ಪಂಕ್ತಿಗೆ ಸೇರಿದವರಿಗೆ ಈ ತೊಡಕಿಲ್ಲ ಅವರು ಈ ಪ್ರಪಂಚದ ಹಣೆಯ ಬರಹವಿಷ್ಟೆಂದು ಅದನ್ನು ಕಡೆಗಂಡು ಯಾವದೊಂದು ಗುರುತ್ವವನ್ನೂ ಮೈಮೇಲೆ ಹಾಕಿಕೊಳ್ಳದೆ ಇತರರನ್ನು ಉದ್ಧಾರ ಮಾಡುವದಕ್ಕಾಗಿ ತಾವೂ ಇತರರಲ್ಲೊಬ್ಬರಾಗಿ ಬಡವರೆನ್ನದೆ ಕೀಳುಜಾತಿಯವರೆನ್ನದೆ ಎಲ್ಲರಲ್ಲಿಯೂ ಸಮಬುದ್ಧಿಯಿಂದ ತಮ್ಮ ಸರ್ವಪ್ರಯತ್ನವನ್ನೂ ಸಾರ್ವಜನಿಕಹಿತಕ್ಕಾಗಿ ಮುಂದುವರಿಸುವರು. ಉತ್ತರದೇಶದ ಸಾಧುಸಂತರ ವಿಚಾರಗಳು ಎಲ್ಲಾ ಕಡೆಗಳಲ್ಲಿಯೂ ಪ್ರಚಾರಕ್ಕೆ ಬಂದಿರುವವು. ನಮ್ಮ ಕರ್ಣಾಟಕ ಭೂಮಿಯಲ್ಲಿಯೂ ಅಂಥ ಮಹನೀಯರು ಕೆಲವರಾಗಿ ಹೋಗಿರುವರು. ಅವರಲ್ಲೊಬ್ಬರ ಚರಿತ್ರೆಯನ್ನು ಇಲ್ಲಿ ಉಲ್ಲೇಖಿಸ ಬೇಕೆಂದಿರುವೆವು.

ನಮ್ಮ ಕರ್ಣಾಟಕ ಜನಪದದ ಯಾವುದೋ ಒಂದು ದೊಡ್ಡ ಪುಣ್ಯ ವಿಶೇಷವು 1760ರಲ್ಲಿ ಫಲೋನ್ಮುಖವಾಯಿತು. ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ಉತ್ತರ ಕನ್ನಡ ಡಿಸ್ಟ್ರಿಕ್ಟಿನಲ್ಲಿ ಭಟ್ಟಕಳವೆಂಬ ಗ್ರಾಮದಲ್ಲಿ ಈ ನಮ್ಮ ಕಥಾನಾಯಕರು ಅವತರಿಸಿದರು. ಅವರ ಹೆಸರು **ಅಪ್ಪಯ್ಯನವರು.** ಇವರ ತಂದೆಯ ಹೆಸರು ರಾಮಚಂದ್ರ, ಇವರು ಸಾರಸ್ವತರು. ಇವರಿಗೆ ಆ ಗ್ರಾಮದ ಗೌಡಿಕೆ ಇತ್ತು. ಅಪ್ಪಯ್ಯನೆಂಬ ಅಡ್ಡಹೆಸರು ರೂಢಿಯಾಯಿತು. ಭಟ್ಟಕಳವು ಹಿಂದೂ ದೇಶದ ಪಶ್ಚಿಮ ತೀರದ ರೇವು ಪಟ್ಟಣ. ಇದು ಮೊದಲು ನಗರ (ಶಿವಮೊಗ್ಗ ಡಿ||)ದ ಮುಖ್ಯಸ್ಥರಿಗೆ ಸೇರಿ ವಿದ್ಯಾನಗರವೆಂದು ಹೆಸರುಗೊಂಡಿತ್ತು. ಆಗಿನ ಕಾಲದಲ್ಲಿ ಸುಮಾರು ಬಸವಪ್ಪನೆಂಬ ಅರಸು ಆಳುತ್ತಿದ್ದನೆಂದು ತೋರುತ್ತದೆ. ಆಗಿನ ಅರಸರಿಗೆ ಈಗಿನಕಾಲದ ನವನಾಗರಿಕತೆಯ ಬೆಡಗು ಗೊತ್ತಿಲ್ಲದ್ದರಿಂದಲೋ ಏನೋ ತಮ್ಮ ಅರಸುತನವನ್ನು ಬರೀ ನಟನೆಗಳಲ್ಲಿ ಮುಗಿಸದೆ ನಿಜವಾದ ಯೋಗ್ಯತಾಪಕ್ಷಪಾತಿಗಳಾಗಿದ್ದರು.

ಅಪ್ಪಯ್ಯನವರಿಗೆ ವಿದ್ವಾಂಸರಾಗಬೇಕೆಂಬ ಪ್ರವೃತ್ತಿಯುಂಟಾಗದೆ ಏಕಾಂತ ವಾಸದಲ್ಲಿರಬೇಕೆಂಬ ಇಚ್ಛೆ ಬಲವಾಗಿತ್ತು. ಇಂಥವರೇ ನಮ್ಮದೇಶದ ಜೀವರತ್ನಗಳು. ಬಹಿರ್ಮುಖರಾದವರು ಬೇಕಾದಷ್ಟು ಜನರಿರುತ್ತಾರೆ. ಲೋಕದಲ್ಲಿ ಬಹಿರ್ಮುಖರಾಗಿರುವದು ಬಹು ಸುಲಭ. ಅಂತರ್ಮುಖರಾಗುವದು ಕಷ್ಟ. ಭಗವಂತನು ಇಂದ್ರಿಯಗಳನ್ನೆಲ್ಲಾ ಬಹಿರ್ಮುಖವಾಗಿಯೇ ಸೃಷ್ಟಿಸಿರುತ್ತಾನೆ. ಆದರೆ ಅದನ್ನು ಹಾಗೆಯೇ ಹೋಗ

ಗೊಟ್ಟಷ್ಟೂ ಮನುಷ್ಯನು ದೇವರಿಗೆ ದೂರನಾಗುತ್ತಾನೆ. ಮಹಾವೀರನಾದವನೊಬ್ಬನು ಮಾತ್ರ ಆ ಬಹಿರ್ಮುಖಪ್ರವೃತ್ತಿಯನ್ನು ಹಿಂದಕ್ಕೆ ಜಗ್ಗಿ ಅಂತರ್ಮುಖವಾಗಿ ಮಾಡುತ್ತಾನೆ. ನಮ್ಮ ಅಪ್ಪಯ್ಯನವರು ಅಂಥಾ ವೀರಾಗ್ರೇಸರಾಗಿದ್ದರು. ಇನ್ನು ಯಾವಾಗಲೂ ಅಂತರ್ಮುಖವಾಗಿರುವದೆಂಬುದು ಸಾಧ್ಯವೆನಿಸದೆ ಹೋಗುವದೂ ಉಂಟು. ಅಂಥ ಸಂದರ್ಭದಲ್ಲಿ ಅಪ್ಪಯ್ಯನವರ ಪ್ರವೃತ್ತಿಯು ಪುರಾಣೇತಿಹಾಸಗಳನ್ನು ಕೇಳುವದರ ಕಡೆಗೆ ಹರಿಯುತ್ತಿತ್ತು. ಅಂತು ಮನಸ್ಸಿಗೆ ಭಗವದ್ವಿಚಾರದ ಸವಿಯೇ ತಗಲಿಕೊಂಡಿತ್ತು. ಹೀಗೆ ಅಪ್ಪಯ್ಯನವರಿನ್ನೂ ಹದಿನೈದು ವರ್ಷದವರಾಗಿರುವಾಗಲೇ ಅವರ ಮನಸ್ಸೆಲ್ಲಾ ಭಗವದ್ವಿಚಾರದಲ್ಲಿ ತುಂಬಿ ತುಳುಕುತ್ತಿತ್ತು . ಅವರ ಮುಖದಿಂದ ಭಗವನ್ನಾಮ ಸ್ಮರಣೆಯ ಪ್ರವಾಹವು ಅಪ್ರತಿಹತವಾಗಿ ಉಕ್ಕಿ ಹರಿಯುತ್ತಿತ್ತು. ಇದಕ್ಕೆ ತಕ್ಕ ಹಾಗೆ ಅಪ್ಪಯ್ಯನವರಿಗೆ ಸಂಗೀತಜ್ಞಾನವೂ ಇತ್ತು. ಸಂಗೀತವು ಹೃದಯವನ್ನು ವಿಕಾಸ ಗೊಳಿಸುವ ವಿದ್ಯೆ. ಆ ಹೃದಯವೇ ಪರಮಾತ್ಮನ ಸ್ಫೂರ್ತಿಯಾಗುವ ಸ್ಥಳ. ಆದ್ದರಿಂದ ಗಾನಕ್ಕೂ ಪರಮಾತ್ಮಜ್ಞಾನಕ್ಕೂ ಎಡೆಬಿಡದ ಬಂಧುತ್ವವಿದೆ. ಪರಮಾತ್ಮನು ಕೂಡ ಗಾನವಿನೋದಿ. ಅಪ್ಪಯ್ಯನವರು ಸುಸ್ವರದಿಂದ ಪರಮಾತ್ಮನ ಯಶಸ್ಸನ್ನು ಕೀರ್ತಿ ಸುತ್ತಿದ್ದರೂ ಅವರ ಮನಸ್ಸಿನಲ್ಲಿ ''ದೇವರೊಬ್ಬನೇ ಅಲ್ಲವೇ? ವಿಗ್ರಹಗಳೇನನ್ನು ಸೂಚಿಸುತ್ತವೆ? ಪ್ರಪಂಚದ ಸೃಷ್ಟಿ ಹೇಗೆ ಆಯಿತು? ವೇದಾಂತಜ್ಞಾನವನ್ನು ಪಡೆದವರೆನಿಸಿಕೊಂಡರೂ ದುಃಖಿಗಳಾಗಿರುವುದಕ್ಕೆ ಕಾರಣವೇನು?''ಎಂಬುದು ಮುಂತಾದ ಕಲ್ಪನೆಗಳ ಹೋರಾಟವು ನಡೆಯಿತು.

ಹೀಗಾಗುವದು ಸಾಮಾನ್ಯವಾಗಿ ತಂದೆತಾಯಿಗಳಿಗೆ ಇಷ್ಟವಾಗಿರುವದಿಲ್ಲ. ಏಕೆಂದರೆ ತಮ್ಮ ಮಕ್ಕಳು ತಮ್ಮಂತೆ ಪ್ರಾಪಂಚಿಕವಾಗಿ ಮಕ್ಕಳು ಮರಿಗಳನ್ನು ಹಡೆದುಕೊಂಡು ಸಂಸಾರದಲ್ಲಿ ಸುತ್ತುತ್ತಿರಬೇಕೆಂಬ ಅವರ ಅಪೇಕ್ಷೆ. ಅಪ್ಪಯ್ಯ ನವರ ತಂದೆತಾಯಿಗಳು ಆ ಅಭಿಪ್ರಾಯಕ್ಕೇನೂ ಹೊರತಾದವರಾಗಿರಲಿಲ್ಲ. ತಮ್ಮ ಮಗನನ್ನು ಹೇಗಾದರೂ ತಾವು ನಡೆದ ದಾರಿಗೇ ತಿರುಗಿಸಬೇಕೆಂದು ತಮ್ಮ ಕೈಲಾದ ಸಾಹಸ ವನ್ನೆಲ್ಲಾ ಮಾಡಿದರು. ಸಂಸಾರವೆಂಬ ಕಗ್ಗಾಡಿನಿಂದ ತಪ್ಪಿಸಿಕೊಂಡು ಹೋಗದೆ ಇರುವದಕ್ಕೆ ವಿವಾಹವೆಂಬುದೊಂದು ಗುದ್ದೆ (ಕೊರಳಿಗೆ ಹಾಕುವ ದೊಡ್ಡದೊಂದು ಮರದ ತುಂಡು) ಇದೆ. ಅಪ್ಪಯ್ಯನವರ ಮಾತಾಪಿತೃಗಳು ತಮ್ಮ ಮಗನಿಗೆ ಇಂಥ ಒಂದು ಗುದ್ದೆಯನ್ನು ಕಟ್ಟಿದ್ದರು. ಭಾಗೀರಥಿ ಎಂದು ಅನುರೂಪವಾದ ಕನ್ಯೆಗೂ ಅಪ್ಪಯ್ಯನವರಿಗೂ ಗಂಟುಬಿತ್ತು.

ಒಂದು ದಿವಸ ಸಿದ್ಧಿವಿನಾಯಕಚತುರ್ಥಿ. ಮನೆಯಲ್ಲಿ ಬೇಕುಬೇಕಾದ ಭಕ್ಷ್ಯ ಭೋಜ್ಯಗಳಾಗಿವೆ. ಇನ್ನೂ ವ್ರತವಾಗಿಲ್ಲ. ಸಮಯಕ್ಕೆ ಒಬ್ಬ ಮಹಾ ತೇಜಃಪುಂಜನಾದ ಸಂನ್ಯಾಸಿ ಬಂದನು. ಅವನಿಗೆ ಹಿಂದೆ ಎರಡು ಮೂರು ದಿನ ಆಹಾರವಿಲ್ಲದ್ದರಿಂದ ಬಹಳ ಹಸಿವೆಯಾಗಿತ್ತು. ಏನು ಮಾಡುವದು! ಮನೆಯವರಿಗೆ ಸಂನ್ಯಾಸಿಯ ಲಕ್ಷ್ಯವಿಲ್ಲ. ಹಸಿದಿರುವ ಸ್ಥಿತಿಯಲ್ಲಿ ಪ್ರಾಣಿಯನ್ನಿಟ್ಟುಕೊಂಡಿರುವದು ಅಪ್ಪಯ್ಯನವರಿಗೆ ಸರಿಬೀಳದು. ಈ ಸಂದರ್ಭದಲ್ಲಿ ಅತ್ತೆಯವರು ಸಿಟ್ಟುಗೊಂಡರೂ ತಡೆದುಕೊಳ್ಳುವೆನೆಂದು ಭಾಗೀರಥಮ್ಮನವರು ಸಂನ್ಯಾಸಿಗೆ ಬಡಿಸುವದಕ್ಕೊಪ್ಪಿಕೊಂಡರು. ಈಗ ಅವರು ಅಪ್ಪಯ್ಯನವರ ಪತ್ನಿಯಾದದ್ದು ಸಾರ್ಥಕವಾಯಿತು. ಇಂಥ ಪತ್ನಿಯರನ್ನು ಗುದ್ದೆ ಎಂದು ಹೇಳುವದು ತಪ್ಪು. ಅವರು ಗುದ್ದೆಯಲ್ಲವೆಂಬುದಿಷ್ಟೇ ಅಲ್ಲ. ಸಂಸಾರವೆಂಬ ತಿರುಗಣಿಯಿಂದ ಪಾರಾಗುವದಕ್ಕೆ ಅವರೇ ಸಹಕಾರಿಗಳು. ಇಂಥ ಪತ್ನಿಯು ಅಪ್ಪಯ್ಯನವರಿಗೆ ದೊರೆತದ್ದು ಅವರ ಮೇಲಿನ ಭಗವದನುಗ್ರಹದಿಂದಲೇ ಸರಿ. ಸಿದ್ಧಿವಿನಾಯಕನು ಸಾಕ್ಷಾತ್ತಾಗಿ ಬಂದು ನೈವೇದ್ಯವನ್ನು ಕೇಳುವಾಗ ಆ ಮೃಣ್ಮಯಮೂರ್ತಿಯದೇನು ಹೆಚ್ಚುಗಾರಿಕೆ? ವಿಚಾರಮಾಡಿದರೆ ಸಿದ್ಧಿ ವಿನಾಯಕನು ಪರಮಾತ್ಮ. ಸಾಮಾನ್ಯವಾಗಿ ಎಲ್ಲರ ಹೃದಯದಲ್ಲಿಯೂ ಪರಮಾತ್ಮನಿದ್ದೇ ಇರುವನೆಂದ ಮೇಲೆ ಆ ಭವ್ಯ ಸಂನ್ಯಾಸಿಯ ಹೃದಯದಲ್ಲಿರುವನೆಂದು ಹೇಳಬೇಕಾದ್ದೇನು? ಪರಮಾತ್ಮ ವಿಭೂತಿಯು ಎಲ್ಲರ ಹೃದಯದಲ್ಲಿರುವದಕ್ಕಿಂತಲೂ ಅಂಥವರ ಹೃದಯದಲ್ಲಿ ಹೆಚ್ಚು ಆವಿರ್ಭೂತವಾಗಿರುವದು. ಆದ್ದರಿಂದಲೇ ತೇಜಸ್ವಿಗಳಾದವರು ಬಂದರೆ ಸಾಕ್ಷಾತ್ ಪರಮಾತ್ಮನೇ ಬಂದಂತೆ ತಿಳಿಯಬೇಕೆಂದು ಸಂಪ್ರದಾಯವಿದೆ. ಆ ಸಂನ್ಯಾಸಿಯು ನಿಜವಾಗಿಯೂ ಅಪ್ಪಯ್ಯನವರ ಮೇಲೆ ಅನುಗ್ರಹವನ್ನು ಮಾಡುವದಕ್ಕೆ ಬಂದ ಪರಮಾತ್ಮನ ವಿಭೂತಿವಿಶೇಷವೇ ಎಂದು ಒಡನೆ ವ್ಯಕ್ತವೇ ಆಯಿತು. ಭಾಗೀರಥಮ್ಮನವರು ಬಡಿಸುತ್ತ ಬಂದ ಹಾಗೆಲ್ಲ ಸಂನ್ಯಾಸಿಯು ತಿನ್ನುತ್ತಲೇ ಬಂದನು. ಮಾಡಿದ ಅಡಿಗೆಯಲ್ಲಾ ಮುಗಿಯುವುದಕ್ಕೆ ಬಂತು. ಸಂನ್ಯಾಸಿಯ ಊಟ ಮುಗಿಯಲಿಲ್ಲ. ಆಗ ಅಪ್ಪಯ್ಯನವರು ಅಡಿಗೆ ಸಾಕಾಯಿತೋ ಸಾಲದೋ ಎಂದು ನೋಡುವುದಕ್ಕೆ ಒಳಕ್ಕೆ ಹೋದಾಗ ಅಡಿಗೆಯೆಲ್ಲಾ ದ್ವಿಗುಣವಾಗಿ ಅಕ್ಷಯವಾದದ್ದು ಕಂಡುಬಂತು. ಅತ್ಯಾಶ್ಚರ್ಯದಿಂದ ಹೊರಗೆ ಬರುವದರೊಳಗೆ ಸಂನ್ಯಾಸಿಯು ಊಟವನ್ನು ಮುಗಿಸಿಕೊಂಡು ಹೋಗಿ ಬಿಟ್ಟಿದ್ದನು. ಅಪ್ಪಯ್ಯನವರು ಊಟದ ಯೋಚನೆಯನ್ನು ಬಿಟ್ಟು ಆ ಮಹಾಮಹಿಮನನ್ನು ಹುಡುಕಿಕೊಂಡು ಹೊರಟರು. ಒಂದು ಕಾಡಿನಲ್ಲಿ ಆ ಸಂನ್ಯಾಸಿಯ ದರ್ಶನವು ದೊರೆಯಿತು. ಯೋಗ್ಯನಾದ ಗುರುವಿಗೂ

ಯೋಗ್ಯನಾದ ಶಿಷ್ಯನಿಗೂ ಬೆಸುಗೆ ಬಿದ್ದಮೇಲೆ ಹೇಳತಕ್ಕದ್ದೇನು?ಆಮೇಲೆ ಅವರಿಬ್ಬರೂ ಭಟ್ಟಕಳದ ಹತ್ತಿರದಲ್ಲಿಯೇ ಕೆಲವು ದಿವಸವಿದ್ದರು. ಆ ಸಂನ್ಯಾಸಿಯ ಹೆಸರು **ಸ್ವಾಮಿ ವಿಮಲಾನಂದರು.** ಇವರು ಸುಮಾರು 1864ರಲ್ಲಿ ಪ್ರಸಿದ್ಧವಾಗಿರುವ 'ಕೃಷ್ಣಾರ್ಜುನರ ಕಾಳಗ' ಮೊದಲಾದ ಎಷ್ಟೋ ಗ್ರಂಥಗಳ ಲೇಖಕರೆಂದು ತೋರುತ್ತದೆ. ಇವರು ಅಪ್ಪಯ್ಯನವರನ್ನು ಶಿಷ್ಯರನ್ನಾಗಿ ಪರಿಗ್ರಹಿಸಿ ಯೋಗದಲ್ಲಿಯೂ, ವೇದಾಂತ ದಲ್ಲಿಯೂ ಒಳ್ಳೆಯ ಅನುಭವವನ್ನು ತಂದುಕೊಟ್ಟರು. ಇವರ ಅನುಗ್ರಹ ಬಲದಿಂದ ಅಪ್ಪಯ್ಯನವರು ಪರಮಾತ್ಮ ವಿಚಾರಗಳಲ್ಲಿ ಅನೇಕ ಹಾಡುಗಳನ್ನು ರಚಿಸಿ ತಂಜಾ ವೂರಿನ ತನಕ ಸಂಚಾರಮಾಡಿ ಅನೇಕ ಜನರ ಧರ್ಮಜ್ಯೋತಿಯನ್ನು ದೇದೀಪ್ಯ ಗೊಳಿಸಿದರೆಂದು ತಿಳಿಯ ಬರುತ್ತದೆ. ಅಪ್ಪಯ್ಯನವರು ಸಂಸ್ಕೃತ, ಹಿಂದೂಸ್ಥಾನಿ, ಮರಾಠಿ, ಕನ್ನಡ, ಈ ನಾಲ್ಕು ಭಾಷೆಗಳ ಪರಿಚಯವುಳ್ಳವರಾಗಿದ್ದು ತಮ್ಮ ಹಾಡುಗಳನ್ನೆಲ್ಲಾ ವಿಮಲಾನಂದರ ಅಂಕಿತವನ್ನು ಹಾಕಿರುತ್ತಾರೆ. ಆ ಹಾಡುಗಳನ್ನು ಆ ದೇಶದಲ್ಲಿ ಈಗಲೂ ಜನರು ಮಕ್ಕಳನ್ನು ತೂಗುವಾಗ ಹಾಡುತ್ತಿರುತ್ತಾರೆ. ಅಪ್ಪಯ್ಯ ನವರು ತಮ್ಮ ಪ್ರಭಾವದಿಂದ ಕುರುಡರಿಗೆ ಕಣ್ಣುಕೊಟ್ಟರೆಂದೂ ದೋಣಿಯಿಲ್ಲದೆ ನದಿಯನ್ನು ದಾಟಿದರೆಂದೂ ಜನರು ಅವರ ಮಹಿಮೆಯನ್ನು ಹೊಗಳುವರು. ಅವುಗಳದೇನು ಹೆಚ್ಚುಗಾರಿಕೆ? ಜನರ ಮನಸ್ಸಿನ ಪ್ರವೃತ್ತಿಯನ್ನೇ ತಿರುಗಿಸುವದು ಕಷ್ಟದ ಕೆಲಸ. ಈ ಕೆಲಸವನ್ನು ಅಪ್ಪಯ್ಯನವರು ಬಹು ಚೆನ್ನಾಗಿ ಮಾಡಿ ತಮ್ಮ ಕೀರ್ತಿಧ್ವಜವನ್ನು ಆಚಂದ್ರಾರ್ಕವಾಗಿ ಸ್ಥಾಪಿಸಿಕೊಂಡಿದ್ದಾರೆ. ಇವರು ಕೊನೆಗೆ ಸಂನ್ಯಾಸಿಗಳಾಗಿ ಮಹಾ ಸಮಾಧಿಯನ್ನು ತೆಗೆದುಕೊಂಡಿರಬಹುದು. ಇವರ ಸಮಾಧಿಯು ಭಟ್ಟಕಳದಲ್ಲಿದೆ. ಈಗಲೂ ಅದಕ್ಕೆ ಅನೇಕರು ನಡೆದುಕೊಳ್ಳುತ್ತಾರೆ. ಅಪ್ಪಯ್ಯನವರ ಜನ್ಮಸ್ಥಾನವಾದ ಭಟ್ಟಕಳವು ವಿದ್ಯಾನಗರವೆನಿಸುವದಕ್ಕೆ ಆಗಿನ ಕಾಲದ ವಿದ್ವಾಂಸರ ಪ್ರಾಚುರ್ಯವು ಕಾರಣವೆಂದು ಹೊರಗೆ ಕಂಡರೂ ನಿಜವಾಗಿ ಆ ಹೆಸರು ಅದಕ್ಕೆ ಅಪ್ಪಯ್ಯನವರ ಪಾರಮಾರ್ಥಿಕವಿದ್ಯಾಪ್ರಾಚುರ್ಯದಿಂದ ಚೆನ್ನಾಗಿ ಶೋಭಿಸುವದು. ಪರಮಾತ್ಮವಿದ್ಯೆಯ ಹೊರತು ಉಳಿದ ವಿದ್ಯೆಯನ್ನೆಲ್ಲಾ ವೇದಾಂತಶಾಸ್ತ್ರಜ್ಞರು ಅವಿದ್ಯೆಯೆಂದೇ ಕರೆಯುತ್ತಾರೆ. ಮಿಕ್ಕವಿದ್ಯೆಯಲ್ಲಿ ಪಾರಂಗತರಾದವರು ಬಹುಜನರು ಸಿಕ್ಕುತ್ತಾರೆ. ಪರಮಾತ್ಮ ವಿದ್ಯೆ ಯನ್ನು ಕಲಿತವರು ವಿರಳ. ಕನ್ನಡಿಗರಲ್ಲೊಬ್ಬರಾದ ಅಪ್ಪಯ್ಯನವರು ಹೀಗೆ ಪರಮಾತ್ಮ ವಿದ್ಯಾಸಂಪನ್ನರಾಗಿ ಯಶಸ್ವಿಗಳಾದದ್ದು ಕನ್ನಡನಾಡಿಗೇ ಅಭಿಮಾನಾಸ್ಪದವಾದ ವಿಷಯವಾಗಿದೆ. ಕರ್ಣಾಟಕ ಮಾತೆಯು ತನ್ನ ತಪಃಪ್ರಭಾವದಿಂದ ಇಂಥ ಪುತ್ರರನ್ನೇ ಹೆಚ್ಚಾಗಿ ಪಡೆಯಲೆಂದು ಎಲ್ಲರೂ ಪ್ರಾರ್ಥಿಸತಕ್ಕದ್ದಾಗಿದೆ.

*****

## 4. ಶ್ರೀ ಸಮರ್ಥರಾಮದಾಸರ ದಾಸಬೋಧೆಯ ಮಹಿಮೆ

(ಸದ್ಗುರು ಸ್ತವನ)

ಶ್ರೀ ರಾಮದಾಸ ಕೃಪೆಯಿಂ ।
ರಾರಾಜಿಪ ದಾಸಬೋಧದಮೃತದ ಝರಿ ತಾಂ ॥
ಸೇರುತ್ತೆನ್ನೀಕೃತಿಯಂ ।
ಸಾರಮಿದೆಲ್ಲರ್ಗೆ ಮಾನ್ಯಮೆನಿಸಲಿ ಧರೆಯೊಳ್ ॥

ಈ ಸೃಷ್ಟಿಯ ವ್ಯಾಪಾರಗಳೆಲ್ಲ ಒಂದು ನಿಯಮಕ್ಕೊಳಪಟ್ಟು ನಡೆಯುತ್ತಿರುವದೆಂದು ಪ್ರತಿಯೊಬ್ಬನಿಗೂ ಪ್ರತಿಕ್ಷಣವೂ ಗೊತ್ತಾಗುತ್ತಿದೆ. ಹಗಲು ರಾತ್ರಿಗಳು ಒಂದರ ಹಿಂದೊಂದು ತಪ್ಪದೆ ಬಂದು ಹೋಗುತ್ತಿವೆ. ಋತುಮಾಸಗಳು ತಮ್ಮ ವಿಶೇಷ ಲಕ್ಷಣಗಳನ್ನು ಒಂದೇ ಸಮನಾಗಿ ತೋರಿಸುತ್ತಿವೆ. ಒಂದೊಂದು ಕಡೆಯ ಭೂಮಿಯು ಒಂದೊಂದು ಬಗೆಯ ಬೆಳೆಯನ್ನೇ ಹೆಚ್ಚಾಗಿ ಬೆಳೆಯುತ್ತಿದೆ. ಈ ವ್ಯಾಪಾರಗಳೆಲ್ಲ ಈ ರೀತಿಯಲ್ಲಿ ಒಂದು ನಿಯಮಕ್ಕೊಳಪಟ್ಟು ನಡೆಯುತ್ತಿರಬೇಕಾದರೆ ಇವುಗಳಿಗೆಲ್ಲ ಒಬ್ಬ ನಿಯಾಮಕನಿರಬೇಕೆಂದು ಎಂಥವನಿಗಾದರೂ ತನ್ನಷ್ಟಕ್ಕೆ ತಾನೇ ಮನಸ್ಸಿಗೆ ಹೊಳೆಯುವದು. ಆದರೆ ಆ ನಿಯಾಮಕನ ಸ್ವರೂಪವೆಂಥದ್ದು? ಅವನಿಗೂ ನಮಗೂ ಇರುವ ಸಂಬಂಧವೆಂಥದ್ದು? ಅವನ ಒಲುಮೆಯನ್ನು ಪಡೆಯಬೇಕಾದರೆ ನಾವೇನು ಮಾಡಬೇಕು? - ಈ ಮುಂತಾದ ವಿಷಯಗಳು ತನಗೇ ತಾನೇ ತಿಳಿಯತಕ್ಕವುಗಳಲ್ಲ. ಈ ವಿಚಾರಗಳು ಅಪಾರವಾದ ಸಮುದ್ರದ ಹಾಗೆ ಇವೆ. ನಾವೇ ನಮ್ಮ ಬುದ್ಧಿಯಿಂದ ವಿಚಾರಮಾಡಿ ಅವುಗಳ ನೆಲೆಯನ್ನು ಕಂಡುಹಿಡಿಯಬೇಕೆಂದು ಎಷ್ಟು ಹೆಣಗಿದರೂ ಅವು ದಕ್ಕುವ ಮಾತುಗಳಲ್ಲ. ಕಣ್ಣಿಗೆ ಕಾಣುವಂಥ ಪ್ರಾಪಂಚಿಕ ವಿಷಯಗಳಲ್ಲಾದರೆ ನಾವು ನಮ್ಮ ಬುದ್ಧಿಯನ್ನು ಹಾಗೂ ಹೀಗೂ ಅಷ್ಟಿಷ್ಟು ಮುಂದಕ್ಕೆ ಹಾಯಿಸಬಹುದು. ಈ ಸೃಷ್ಟಿ ನಿಯಾಮಕನೋ ಕಣ್ಣಿಗೆ ಕಾಣಿಸುವವನಲ್ಲ, ಅಷ್ಟೇ ಅಲ್ಲ, ಮನಸ್ಸಿಗೂ ಕೂಡ ನಿಲುಕುವವನಲ್ಲ. ಇಂಥವನ ನೆಲೆಯನ್ನು ಕಾಣುವದೆಂಬುದು ನಮಗೆ ಹೇಗೆ ಸಾಧ್ಯವಾದೀತು? ಒಂದು ಕಾಲುಹೊಳೆಯೆಂದರೇ ಎದೆ ಹೊಡೆದುಕೊಳ್ಳುವಂಥ ನಾವು ಎತ್ತೆತ್ತ ಹೋದರೂ ತಳವು ಸಿಕ್ಕದೆ ಇರುವಂಥ ಸಮುದ್ರದೊಳಕ್ಕೆ ಧೈರ್ಯವನ್ನು ಮಾಡಿ ನುಗ್ಗಿದ ಒಡನೆ ಅದರ ಅಲೆಗಳ ಸೆಳತಕ್ಕೆ ಸಿಕ್ಕಿ ಏಳುತ್ತ ಬೀಳುತ್ತ ಕಣ್ಣು ಕಿವಿ ಮೂಗುಗಳೊಳಗೆಲ್ಲ ನೀರುತುಂಬಿಕೊಂಡು ಗುಟುಕು ನೀರು ಕುಡಿದು ತೇಲುಗಣ್ಣು ಮೇಲುಗಣ್ಣಾಗುವದೇ ಸರಿ. ಸಮುದ್ರದ ತಳವನ್ನು ಕಾಣಬೇಕಾದರೆ ಅದನ್ನು ಕಂಡವರ

ಸಹಾಯದಿಂದ ಕಾಣುವದಕ್ಕೆ ಹೋಗಬೇಕು. ಈ ಸೃಷ್ಟಿ ನಿಯಾಮಕನ ವಿಚಾರವೆಂಬ ತಳವನ್ನು ಮುಟ್ಟಿ ನೋಡಿ ಬೇಕುಬೇಕಾದ ಹಾಗೆಲ್ಲ ಅದರಲ್ಲಿ ತಾವೂ ಈಜಾಡಿ ತಮಗೆ ಬೇಕಾದವರಿಗೂ ತಳವನ್ನು ತೋರಿಸಿ ಅವರನ್ನು ಹಾಯಾಗಿ ತೇಲಿಸಬಲ್ಲವರ ದೊಂದು ಪರಂಪರೆಯು ಹಿಂದಿನಿಂದ ನಡೆದುಕೊಂಡೇ ಬಂದಿರುವದು. ಆದ್ದರಿಂದ ಸೃಷ್ಟಿನಿಯಾಮಕನ ವಿಷಯದಲ್ಲಿ ಈ ಪರಂಪರೆಯವರ ಮಾತೇ ಪ್ರಮಾಣ. ಇವರು ಉಳಿದ ಪ್ರಪಂಚವಿಚಾರಗಳನ್ನೆಲ್ಲ ಮೂಲೆಯಲ್ಲಿ ಮುದಿರಿಟ್ಟು ಇದೊಂದಕ್ಕಾಗಿಯೇ ತಮ್ಮ ತನುಮನಧನಗಳನ್ನೆಲ್ಲ ಧಾರೆಯೆರೆದವರಾಗಿರುವರು. ಇವರಿಗೇ ಶಾಸ್ತ್ರಗಳಲ್ಲಿ ಸದ್ಗುರುಗಳೆಂಬ ಹೆಸರನ್ನು ಕೊಟ್ಟಿರುತ್ತದೆ.

ಶ್ರೀಸಮರ್ಥರಾಮದಾಸಸ್ವಾಮಿಗಳೆಂಬುವರು ಮಹಾರಾಷ್ಟ್ರ ದೇಶದಲ್ಲಿ ಜನ್ಮವನ್ನೆತ್ತಿ ಈ ಸೃಷ್ಟಿ ನಿಯಾಮಕನ ವಿಷಯವನ್ನು ತಿಳಿಯುವದಕ್ಕಾಗಿ ಪ್ರಾಪಂಚಿಕವಾದ ಸರ್ವಸುಖಗಳನ್ನೂ ತೊರೆದು ಎಷ್ಟೋ ಕಾಲ ಉಗ್ರತಪಶ್ಚರ್ಯೆಯನ್ನು ಮಾಡಿ ಸಿದ್ಧಪುರುಷರಾದಂಥ ಮಹಾಪ್ರಸಿದ್ಧರಾದ ಸಾಧುಶಿರೋಮಣಿಗಳು. ಸಂಸಾರವೆಂಬ ಭಯಂಕರವಾದ ಕನಸನ್ನು ಕಾಣುತ್ತ ಗಾಬರಿಗೊಂಡು ಕಣ್ಣುಕಣ್ಣು ಬಿಡುತ್ತಿರುವ ದೀನರ ಮೇಲಿನ ಕನಿಕರದಿಂದ ಈ ಮಹನೀಯರು ತಮ್ಮ ಸ್ವಾನುಭವಾಮೃತವನ್ನು ದಾಸಬೋಧವೆಂಬ ಗ್ರಂಥದಲ್ಲಿ ತುಂಬಿ ಬೇಕಾದವರು ಅದನ್ನು ಕುಡಿದು ಹುಟ್ಟು ಸಾವುಗಳ ಕೋಟಲೆಯನ್ನು ಕಳೆದುಕೊಳ್ಳಲೆಂದು ಮಹಾರಾಷ್ಟ್ರ ವಾಚಕರ ಮಂಡಲಿಯ ಮುಂದೆ ಇಟ್ಟಿರುವರು. **ಅದು ಕನ್ನಡಿಗರ ಪಾಲಿಗೂ ದೊರೆಯುವಂತೆ ಮಾಡ ಬೇಕೆಂಬ ಚಪಲದಿಂದ ನಾನು ಈ ನನ್ನ ಲೇಖನದಲ್ಲಿ ಅದರ ಸಾರವನ್ನು ಇಳಿಸುವ ಪ್ರಯತ್ನವನ್ನು ಮಾಡಿರುವೆನು.** ಇಷ್ಟು ಮಾತ್ರದಿಂದ ಇದು ಬರೀ ನನ್ನ ಪ್ರಯತ್ನವೆಂದು ತಿಳಿಯಬಾರದು. ಶ್ರೀಸಮರ್ಥರು ಯಾವ ಬಗೆಯ ಅಮೃತ ಕಲೆಯನ್ನು ತಮ್ಮ ಮಹಾರಾಷ್ಟ್ರ ಗ್ರಂಥದಲ್ಲಿ ತುಂಬಿರುವರೋ ಅದರ ಝರಿಯು ಈ ನನ್ನ ಕನ್ನಡದ ಬರವಣಿಗೆಗೂ ಇಳಿದುಬಂದು ಇದನ್ನು ಮುಮುಕ್ಷುಗಳಿಗೆಲ್ಲ ಮಾನ್ಯವಾದ ಸಾರ ವೆಂದೆನಿಸುವಂತೆ ನಾನು ಅವರನ್ನೇ ಪ್ರಾರ್ಥನೆ ಮಾಡಿಕೊಂಡಿರುವೆನು. ''ನರಿಯ ಕೂಗು ಗಿರಿಗೆ ಮುಟ್ಟೀತೆ?'' ಎಂಬ ಕಲ್ಪನೆಯನ್ನು ತಂದುಕೊಳ್ಳಬೇಡಿ. ಅಂಥ ಭಾವನೆಯು ಕೇವಲ ಪ್ರಾಪಂಚಿಕರ ವಿಷಯಕ್ಕಾದರೆ ಒಪ್ಪುವದು. ಏಕೆಂದರೆ ಅವರಿಗೊಂದು ಬಗೆಯಲ್ಲಿ ತಮ್ಮ ಕ್ಷುದ್ರವಾದ ಪದವಿಯಭಿಮಾನದಿಂದ ಕಿವಿ ಕಿವುಡಾಗಿರುತ್ತದೆ. ದೀನರ ಕೂಗಿಗೆ ಕಿವಿಗೊಟ್ಟರೆ ತಮ್ಮ ಪದವಿಯೇ ಅವರಿಗೆ ಸೂರೆಯಾಗಿ ಹೋಗಿ ತಮಗೆಲ್ಲಿ ಬಡತನ ಬಂದೀತೋ ಎಂದು ಯೋಚನೆ. ಸದ್ಗುರು ಪರಂಪರೆಯವರಿಗೆ ಈ ಯೋಚನೆಯಿಲ್ಲ. ಶ್ರೀಸಮರ್ಥರು ಪರಮ ಕರುಣಾಳುಗಳು. ತಾವು ಸಿದ್ಧಗೊಳಿಸಿರುವ

ಉಪದೇಶಾಮೃತವನ್ನು ಯಾರಾದರೂ ಸವಿದರೆ ಸಾಕೆಂದು ಅವರು ದಾರಿಯನ್ನು ನೋಡುತ್ತಿರುವರು. ಯಾವನಾದರೂ ಸ್ವಲ್ಪ ಇಚ್ಛೆಯನ್ನು ತೋರಿಸಿದರೂ ಸಾಕು, ಅವನ ಮೇಲೆ ಪರಮಾನುಗ್ರಹವನ್ನು ಮಾಡುವದು ಅವರ ಸ್ವಭಾವ. ಆದ್ದರಿಂದ ಈ ಗ್ರಂಥದ ಮೇಲೆ ಅವರ ಸಂಪೂರ್ಣವಾದ ಅನುಗ್ರಹ ವಿರುವದೆಂದೂ ಅವರ ಅನುಗ್ರಹ ಪ್ರಭಾವದಿಂದಲೇ ಇದರಲ್ಲಿ ಅವರ ಉಪದೇಶಾಮೃತದ ಝರಿ ಇಳಿದು ಬಂದಿರುವದೆಂದೂ ನಿಮಿತ್ತ ಮಾತ್ರಕ್ಕೆ ನಾನು ಕಾರಣನೇ ಹೊರತು ನಿಜವಾಗಿ ಶ್ರೀಸಮರ್ಥರೇ ನನ್ನ ಹೃದಯದೊಳಹೊಕ್ಕು ಈ ಗ್ರಂಥವನ್ನು ಬರೆಸಿರುವರೆಂದೂ ನಿಮಗೆ ನಾನು ಆಣೆಮಾಡಿ ಹೇಳುವೆನು. ಆದ್ದರಿಂದ ಈ ಗ್ರಂಥಕ್ಕೆ ನಮಗಿರುವ ಸಂಬಂಧವನ್ನು ಒಂದು ಮೂಲೆಯಲ್ಲಿ ಮುದುರಿಟ್ಟು ಇದೆಲ್ಲಾ ಸಾಕ್ಷಾಚ್ಛ್ರೀ ಸಮರ್ಥರ ಉಪದೇಶವೆಂಬ ಭಾವನೆಯಿಂದ ಮುಮುಕ್ಷುಗಳೆಲ್ಲರೂ ಇದನ್ನು ಆದರ ದಿಂದ ಓದಿ ಕೃತಾರ್ಥರಾಗಬೇಕೆಂದು ನನ್ನ ಪ್ರಾರ್ಥನೆ.

ಈ ಗ್ರಂಥದಲ್ಲಿ ಇಷ್ಟೇ ವಿಷಯಗಳಿರುವವೆಂದು ಬೆರಳುಮಡಿಸಿ ಹೇಳುವ ಹಾಗಿಲ್ಲ. ಜಗನ್ನಿಯಾಮಕನ ವಿಷಯವಾಗಿ ಈ ಗ್ರಂಥದಲ್ಲಿ ಹೇಳದೆಯಿರುವ ವಿಷಯ ಗಳೇ ಇಲ್ಲ. ಭಕ್ತಿಪಂಥವನ್ನು ಬೇಕಾದಷ್ಟು ಬೆಳಸಿ ಹೇಳಿದೆ. ಜ್ಞಾನ ಮಾರ್ಗವನ್ನು ಸರ್ವತೋಮುಖದಿಂದ ವಿಸ್ತರಿಸಿ ತೋರಿಸಿದೆ. ವೈರಾಗ್ಯಲಕ್ಷಣದ ಪರಮಾವಧಿಯು ಇದರಲ್ಲಿ ಸೂರೆಯಾಗಿ ಹೋಗಿದೆ.ಭಗವಂತನ ಒಲುಮೆಗೆ ಭಕ್ತಿಯೇ ಸುಲಭವಾದ ಮಾರ್ಗವೆಂಬುದನ್ನು ಅಲ್ಲಲ್ಲಿ ಅವಕಾಶ ದೊರೆತ ಹಾಗೆಲ್ಲಾ ಎಚ್ಚರಿಸುತ್ತಲೇ ಹೋಗಿದೆ. ಆತ್ಮಸ್ವರೂಪವನ್ನು ಕಣ್ಣಿಗೆ ಕಟ್ಟಿದ ಹಾಗೆ ಮನಗಾಣಿಸಿದೆ. ಬೇರೆ ಬೇರೆ ಬಗೆಯಾದ ಮುಕ್ತಿಗಳ ಆಳವಷ್ಟೆಂಬುದನ್ನು ಬಿಚ್ಚಿಟ್ಟಿದೆ. ಪ್ರಪಂಚದಲ್ಲಿ ಇದ್ದೂ ಇಲ್ಲದಹಾಗೆ ಇರುವಂಥ ಸ್ಥಿತಿಯನ್ನು ಬಗೆಬಗೆಯಾಗಿ ವರ್ಣಿಸಿದೆ. ಉಪಾಸನೆಯ ಲಕ್ಷಣವನ್ನು ಚೆನ್ನಾಗಿ ತಿಳಿಸಿಕೊಟ್ಟಿದೆ. ಮಾಯೆಯ ಸ್ವರೂಪವನ್ನು ವಿಶದಮಾಡಿದೆ. ಗುರುವಿನ ಲಕ್ಷಣವನ್ನು ಸ್ಪಷ್ಟಗೊಳಿಸಿದೆ. ಶಿಷ್ಯಲಕ್ಷಣವನ್ನು ಮಂದಟ್ಟುಮಾಡಿ ಕೊಟ್ಟಿದೆ. ಮುಖ್ಯವಾಗಿ ಮುಮುಕ್ಷುಗಳು ತಿಳಿಯಬೇಕಾದ ಸರ್ವವಿಷಯಗಳಲ್ಲಿಯೂ ಸರ್ವಸಂಶಯಗಳನ್ನೂ ಕತ್ತರಿಸಿ ಹಾಕಿದೆ. ಈ ವಿಷಯಗಳೆಲ್ಲ ಸಮಸ್ತ ಶಾಸ್ತ್ರಸಮ್ಮತ ವಾಗಿಯೂ ಅನುಭವಕ್ಕೆ ಹೊಂದತಕ್ಕವಾಗಿಯೂ ಇವೆ. ಗುರೂಪದೇಶವನ್ನೂ ಶಾಸ್ತ್ರಸಮ್ಮತಿಯನ್ನೂ ತನ್ನ ಅನುಭವವನ್ನೂ ಉಪೇಕ್ಷೆ ಮಾಡುವವರ ಮಾತೇಕೆ? ಆಸ್ತಿಕರಾದವರು ಈ ಗ್ರಂಥವನ್ನು ಸಂಪೂರ್ಣವಾಗಿ ಓದಿ ನೋಡದೆ ಇಲ್ಲಷ್ಟು ಅಲ್ಲಷ್ಟು ನಡು ನಡುವೆ ಕೆದರಿ ಓದಿ ನೋಡಿ ಇದರಲ್ಲೇನೂ ಹುರುಳಿಲ್ಲವೆಂದು ಕಡೆಗಣ್ಣಿನಿಂದ ನೋಡದೆ ಆದರದಿಂದ ಓದುವದಾದ ಪಕ್ಷದಲ್ಲಿ ಅಂಥವರಿಗೆ ಪರಮಾತ್ಮಪ್ರಾಪ್ತಿಗೆ

ಸರಳವಾದ ದಾರಿ ಸಿಕ್ಕುವದು. ಅವರಿಗೆ ಯಾವ ಸಾಧನೆಗಳೂ ಎದೆಗೆಡಿಸುವದಿಲ್ಲ. ಅವರ ಅಜ್ಞಾನವು ಹಾರಿಹೋಗುವದು. ಅವರ ಜ್ಞಾನವು ಚೆನ್ನಾಗಿ ಮೈಗೂಡಿ ಕೊಳ್ಳುವದು. ವೈರಾಗ್ಯವು ಪುಷ್ಟಿಗೊಳ್ಳುವದು. ಮೊದ ಮೊದಲು ಉಪೇಕ್ಷೆಯಿದ್ದರೂ ಬರುಬರುತ್ತಾ ಅತ್ಯಾದರವುಂಟಾಗುವದು. ಎಂಥ ವಿಷಯಾಸಕ್ತನಿಗಾದರೂ ಮುಮುಕ್ಷತ್ವ ಬುದ್ಧಿಯುಂಟಾಗುವದು. ಮಹಾ ಮಹಾನಾಸ್ತಿಕನಾದರೂ ಆಸ್ತಿಕ ಶಿರೋಮಣಿಯಾಗುವನು.

## ಶ್ರೀ ಸಮರ್ಥರಾಮದಾಸರ ದಾಸಬೋಧೆಯ ಮಹಿಮೆ

### (ಸದ್ಗುರು ಸ್ತವನ)

ಶ್ರೀಸಮರ್ಥರಾಮದಾಸರವರ ಗ್ರಂಥಮಹಿಮೆಯನ್ನು ಸ್ವಲ್ಪಮಟ್ಟಿಗೆ ಹಿಂದಿನ ಸಂಚಿಕೆಯ ಲೇಖನದಲ್ಲಿ ವರ್ಣಿಸಿದೆನು. ಗ್ರಂಥ ವರ್ಣನೆಗೋಸ್ಕರವಾಗಿ ಶ್ರೀ ಸಮರ್ಥರವರ ವಾಕ್ಕಿನಲ್ಲಿ ಇಲ್ಲದ ಗುಣವನ್ನು ಅತ್ಯುಕ್ತ್ಯತಿಶಯೋಕ್ತಿಗಳಿಂದ ಹಾಕಿ ಕೊಳ್ಳಬೇಕಾದ ಅವಶ್ಯವೇನೂ ಇರುವದಿಲ್ಲ; ಏಕೆಂದರೆ ಸಮರ್ಥರು ಸದ್ಗುರುಗಳ ಗುಂಪಿಗೆ ಸೇರಿದವರು. ಸದ್ಗುರುಗಳಾದವರಿಂದ ಹೊರಟಂಥ ವಾಕ್ಕುಗಳೆಲ್ಲ ಹೀಗೆಯೇ ಇರುತ್ತವೆ.

ಸದ್ಗುರುಗಳ ಪ್ರಭಾವವನ್ನು ವರ್ಣಿಸುವದಕ್ಕೆ ಆದಿಶೇಷನಿಗೂ ಆಳವಲ್ಲ. ಸದ್ಗುರುವಿನ ಕೃಪಾಕಟಾಕ್ಷದ್ದೊಂದು ಕಿರಣವು ನಮ್ಮ ಹೃದಯವೆಂಬ ಗುಹೆಯ ಮುಂದೆ ತನ್ನ ದಾರಿಯನ್ನು ತಾನು ಹಿಡಿದು ಹಾದುಹೋದರೂ ಸಾಕು. ಆ ಹೃದಯದಲ್ಲಿರುವ ಅಜ್ಞಾನವೆಂಬ ಕತ್ತಲೆಯೆಲ್ಲ ದಿಕ್ಕುಗೆಟ್ಟು ಓಡಿಹೋಗಿ ಅಲ್ಲೆಲ್ಲ ಬೆಳಕೇ ಬೆಳಕಾಗುತ್ತದೆ. ಸದ್ಗುರುಗಳ ಕೃಪಾಕಟಾಕ್ಷಕ್ಕೆ ಈ ಸೂರ್ಯನ ಹೋಲಿಕೆಯನ್ನು ಕೊಡುವದು ಕೂಡ ಒಂದು ಬಗೆಯ ನ್ಯೂನತೆಯೇ ಆಗುತ್ತದೆ. ಏಕೆಂದರೆ ಸೂರ್ಯನು ತಾನು ಹುಟ್ಟಿದೊಡನೆ ಕತ್ತಲೆಯನ್ನು ಓಡಿಸುವದೇನೋ ನಿಜ; ಆದರೆ ಮತ್ತೆ ಬರದ ಹಾಗೆ ಓಡಿಸುವದು ಅವನಿಂದ ಸಾಧ್ಯವಾಗಿಲ್ಲ. ರಾತ್ರಿಕಾಲವು ಬರುತ್ತಲೇ ಕತ್ತಲೆಯು ಹಿಂದಿರುಗಿ ಬಂದು ಮತ್ತೆ ಗಂಟುಬೀಳುವದು. ಸದ್ಗುರುಗಳ ಕೃಪಾಕಟಾಕ್ಷವು ಒಮ್ಮೆ ಅಜ್ಞಾನವನ್ನು ಹೊರಗೆ ಹಾಕಿಬಿಟ್ಟಿತೆಂದರೆ ಮತ್ತೆ ಅದು ಬಂದು ಕಾಣಿಸಿಕೊಳ್ಳುವದಿಲ್ಲ. ಒಂದು ಕಡೆಯಿಂದ ಇನ್ನೊಂದು ಕಡೆಗೆ ಓಡಿಸಿದ್ದರೆ ಅದು ಮತ್ತೆ ಬರುವ ಸಂಭವವುಂಟು. ಸೂರ್ಯನು ಕತ್ತಲೆಯ ಹುಟ್ಟಡಗಿಸುವದಿಲ್ಲ; ಅದನ್ನು ಪೂರ್ವಾರ್ಧಗೋಳದಿಂದ ಪಶ್ಚಿಮಾರ್ಧ

ಗೋಳಕ್ಕೂ ಪಶ್ಚಿಮಾರ್ಧ ಗೋಳದಿಂದ ಪೂರ್ವಾರ್ಧಗೋಳಕ್ಕೂ ಅಟ್ಟುತ್ತಿರುವನು. ಆದ್ದರಿಂದ ಅದು ಒಂದು ಕಡೆಯಿಂದ ಓಡಿಸಿದಾಗ ಇನ್ನೊಂದು ಕಡೆಗೆ ಬಂದು ಕಾಣಿಸಿಕೊಳ್ಳುವದು. ಸದ್ಗುರುಗಳ ಕೃಪಾಕಟಾಕ್ಷದ ಕಿರಣವು ಬಿದ್ದೊಡನೆ ಹೃದಯವೆಂಬ ಗುಹೆಯಲ್ಲಿದ್ದ ಅಜ್ಞಾನವು ಸುಟ್ಟುಹೋಗಿ ಬೂದಿ ಕೂಡ ಇಲ್ಲದಂತಾಗುವದು. ಆದ್ದರಿಂದ ಅದು ಮತ್ತೆಬರುವ ಸಂಭವವೇ ಇಲ್ಲ. ಈ ರೀತಿಯಲ್ಲಿ ಸದ್ಗುರುಗಳ ಕಟಾಕ್ಷದ ಕಿರಣವು ಸೂರ್ಯನ ಸಹಸ್ರಕಿರಣಗಳಿಗಿಂತ ಕೋಟಿಪಾಲು ಹೆಚ್ಚಿನ ಪ್ರಭಾವವುಳ್ಳದ್ದಾಗಿರುವದು.

ಸದ್ಗುರುಗಳು ಶಿಷ್ಯನನ್ನು ''ನೀನು ನನ್ನವ'' ನೆಂದರೆ ಸಾಕು. ಅವನು ಕೂಡ ಸಾಕ್ಷಾತ್ಸದ್ಗುರುವೇ ಆಗಿಬಿಡುವನು. ಈ ವಿಷಯದಲ್ಲಿ ಸದ್ಗುರುಗಳಿಗೆ ಗಂಗಾನದಿಯನ್ನು ಹೋಲಿಸಿ ನೋಡಬಹುದು. ಎಷ್ಟೋ ಕ್ಷುದ್ರವಾದ ನದಿಗಳೂ ಕೊಳಚೆಯ ನೀರುಗಳೂ ಗಂಗಾನದಿಯ ಕಡೆಗೆ ಹರಿಯುತ್ತಿರುವವಷ್ಟೆ. ಇವು ಗಂಗಾನದಿಯನ್ನು ಮುಟ್ಟುವವರೆಗೆ ಮಾತ್ರ ಕ್ಷುದ್ರವಾದದ್ದೆಂದೂ ಕೊಳಚೆಯ ನೀರೆಂದೂ ಕರೆಸಿಕೊಳ್ಳುವವು. ಒಮ್ಮೆ ಹೋಗಿ ಗಂಗಾನದಿಯೊಳಗೆ ಬಿದ್ದುಬಿಟ್ಟರೆ ಆಮೇಲೆ ಕ್ಷುದ್ರನದಿಯೂ ಗಂಗಾನದಿಯೇ, ಕೊಳಚೆಯ ನೀರೂ ಗಂಗಾನದಿಯೇ. ಆಮೇಲೆ ಕ್ಷುದ್ರವಾದ ನದಿಯನ್ನೂ ಕೊಳಚೆಯ ನೀರನ್ನೂ ಬೇರೆ ಮಾಡಿ ಬೆಟ್ಟಿಟ್ಟು ತೋರಿಸುವದಕ್ಕಾಗುವದಿಲ್ಲ. ಸದ್ಗುರುಗಳಲ್ಲಿ ಈ ಸಾಮರ್ಥ್ಯವಿರುವದರಿಂದಲೇ ಅವರಿಗೆ ಹೋಲಿಸುವದಕ್ಕೆ ಸ್ಪರ್ಶಮಣಿಯ ಯೋಗ್ಯತೆ ಸಾಲದೆಂದು ಶ್ರೀಮಚ್ಛಂಕರಭಗವತ್ಪಾದರು ಹೇಳಿರುವರು. ಸ್ಪರ್ಶಮಣಿಯೆಂಬದೊಂದು ಪದಾರ್ಥವಿದೆಯೆಂದು ಹೇಳುತ್ತಾರೆ. ಅದಕ್ಕೆ ಕಬ್ಬಿಣವನ್ನು ಚಿನ್ನವಾಗಿ ಮಾಡೀತೇಹೊರತು ಸ್ಪರ್ಶಮಣಿಯಾಗಿಯೇ ಮಾಡಲಿಲ್ಲ; ಮತ್ತು ಸ್ಪರ್ಶಮಣಿಯಿಂದಾದ ಚಿನ್ನಕ್ಕೆ ಕಬ್ಬಿಣವನ್ನು ಚಿನ್ನವಾಗಿ ಮಾಡುವ ಶಕ್ತಿ ಇಲ್ಲ. ಸದ್ಗುರುಗಳ ಕರಸ್ಪರ್ಶವಾಯಿತೆಂದರೆ ಶಿಷ್ಯನು ಸದ್ಗುರುವೇ ಆಗುವನು. ಅಲ್ಲದೆ ತನ್ನನ್ನು ಆಶ್ರಯಿಸಿದವರನ್ನೂ ಸದ್ಗುರುನನ್ನಾಗಿ ಮಾಡುವ ಸಾಮರ್ಥ್ಯವನ್ನು ಕೂಡ ಪಡೆಯುತ್ತಾನೆ.

ಲೋಕದಲ್ಲಿ ಸದ್ಗುರುವೆಂಬದೊಂದು ಸರ್ವಾತಿಶಯವಾದ ವಸ್ತು. ಸರ್ವವಿಧದಲ್ಲಿಯೂ ಅದನ್ನು ಹೋಲುವಂಥ ವಸ್ತು ಇನ್ನೆಲ್ಲಿಯೂ ಸಿಕ್ಕಲಾರದು. ಕವಿಗಳು ತಮ್ಮ ಮನಸ್ಸನ್ನು ಸರ್ವದಿಗಂತಗಳಲ್ಲಿಯೂ ನುಗ್ಗಿಸಿ ಮೂಲೆಮೂಲೆಗಳನ್ನೆಲ್ಲ ತಡಕಿ, ಒಂದೊಂದು ಗುಣದಲ್ಲಿ ಸರ್ವೋತ್ಕೃಷ್ಟವೆನಿಸಿರತಕ್ಕ ಒಂದೊಂದು ವಸ್ತುವನ್ನು ಉಪಮಾನಕ್ಕಾಗಿ ಆರಿಸಿಕೊಂಡಿರುವರು. ಅವುಗಳೆಲ್ಲ ಸದ್ಗುರುಸ್ವರೂಪದ ಮುಂದೆ ಒಂದುಂಗುಷ್ಟದ ಮೇಲೆಯೂ ನಿಲ್ಲಲಾರವು. ವಿಚಾರಮಾಡಿನೋಡಿರಿ. ಗಾಂಭೀರ್ಯಗುಣಕ್ಕೆ ಸಾಗರವನ್ನು ಹೋಲಿಸುತ್ತಾನೆ. ಸದ್ಗುರುಗಳ ಮಧುರ ಸ್ವಭಾವದ ವಾತಾವರಣ

ದಲ್ಲಿ ಒಮ್ಮೆ ಹಾದುಬಂದವರಿಗೆ ಕೂಡ ಆ ಉಪ್ಪುನೀರಿನ ಹವೆಯಿಂದ ಮನಸ್ಸನ್ನೂ ಕದಡುವ ಸಾಗರವನ್ನು ಸದ್ಗುರುಗಳಿಗೆ ಹೋಲಿಸುವದಕ್ಕೆ ಒಗ್ಗುವದಿಲ್ಲ. ಅಥವಾ ಕವಿಗಳ ಬುದ್ಧಿಯು ವಿದ್ಯುಚ್ಛಕ್ತಿಗಿಂತ ಮುಂದಾಗಿ ಓಡುವಷ್ಟು ವೇಗವುಳ್ಳದ್ದಾದ್ದರಿಂದ ಅವರು ಈ ದೋಷವನ್ನು ಹೋಗಲಾಡಿಸುವದಕ್ಕಾಗಿ ಕ್ಷೀರ ಸಮುದ್ರವನ್ನು ತಂದೊಡ್ಡಬಹುದು. ಸ್ವಲ್ಪ ವಿಚಾರಮಾಡಿದರೆ ಅದರ ಅಲ್ಪತ್ವವೂ ಎದ್ದು ಕಾಣುವದು. ಕ್ಷೀರಸಾಗರದ ಚಲ್ಲಾಟವೆಲ್ಲ ಕಲ್ಪಾಂತರದವರೆಗೆ. ಕಲ್ಪವು ಮುಗಿಯುವಾಗ ಅದರ ಹೆಸರು ಹೇಳುವದಕ್ಕೇ ಇಲ್ಲ. ಇನ್ನದರ ಗಾಂಭೀರ್ಯವೆಲ್ಲಿ? ಸದ್ಗುರುವಿನ ಕರುಣವು ಹಾಗಲ್ಲ. ಅದು ಇಂಥಾ ಕಲ್ಪನೆಗಳನ್ನೆಲ್ಲ ಲೀಲೆಯಿಂದ ಮಗುಚಿಹಾಕುತ್ತಿರುವದು. ಧೈರ್ಯಕ್ಕೆ ಕೊಡುವ ಮೇರು ಪರ್ವತದ ಹೋಲಿಕೆಗೂ ಅದೇ ಗತಿ. ಪರಮ ಕೋಮಲವಾದಂಥ ಸದ್ಗುರುಗಳ ಮನಸ್ಸಿನ ಸ್ಥಿತಿಯ ಸಾಲಿಗೆ ಮಹಾಕಠಿನವಾದ ಮೇರುಪರ್ವತವನ್ನು ತಂದಿರಿಸುವದು ಹೇಗೆ ಒಪ್ಪೀತು? ವ್ಯಾಪಕಗುಣದ ದೃಷ್ಟಿಯಿಂದ ಆಕಾಶದ ಹೋಲಿಕೆಯನ್ನು ಕೊಡುವದಕ್ಕೆ ಹೋದರೆ, ಸರ್ವಸದ್ಗುಣಗಳಿಂದ ಕೂಡಿದ ಸಗುಣಮೂರ್ತಿಗೆ ನಿರ್ಗುಣವಾದ ಆಕಾಶವು ಹೇಗೆ ಹೊಂದೀತು? ಕ್ಷಮಾಗುಣದಲ್ಲಿ ಭೂಮಿಯನ್ನು ಹೋಲಿಸೋಣವೆಂದರೆ ಕಲ್ಪಾಂತರದಲ್ಲಿ ಅದು ತನ್ನ ಗುಣವನ್ನು ಕಳೆದುಕೊಂಡು ಛಿದ್ರಛಿದ್ರವಾಗಿ ಹೋಗುವದು. ಇನ್ನು ಕವಿಗಳ ಸರ್ವಶಕ್ತಿಯನ್ನೂ ವಿನಿಯೋಗಿಸಿದರೆ ಸದ್ಗುರು ಸ್ವರೂಪದ ಜೊತೆಗೆ ಅಮೃತವನ್ನು ತುಲನಾ ಮಾಡುವದಕ್ಕೆ ಹೋಗಬಹುದು. ಅಮೃತದ್ದೇನು ಹೆಚ್ಚುಗ್ಗಾರಿಕೆ? ದೇವತೆಗಳು ಅಮೃತವನ್ನೇ ಕುಡಿದುಕುಡಿದು ದಣಿಯುವರು. ಆದರೂ ಅವರಿಗೆ ಹುಟ್ಟು ಸಾವು ಬೇರೆ ತಪ್ಪಲಿಲ್ಲ. ಸದ್ಗುರುಕೃಪೆ ಯಾಯಿತೆಂದರೆ ಹುಟ್ಟುಸಾವುಗಳ ಹುಟ್ಟೇ ಅಣಗಿಸಿ ಹೋದೀತು ! ಕಲ್ಪವೃಕ್ಷವನ್ನೂ ಕಾಮಧೇನುವನ್ನೂ ಚಿಂತಾಮಣಿಯನ್ನೂ ಸೋಲಿಸುವದಕ್ಕೆ ಹೋದರೂ ಹೊಂದು ವಂತಿಲ್ಲ; ಏಕೆಂದರೆ ಅವುಗಳೆಲ್ಲ ಮನಸ್ಸಿಗೆ ವಿಕ್ಷೇಪವನ್ನು ಮಾಡುವ ಒಂದೊಂದು ಕಲ್ಪನೆಯನ್ನು ತರತಕ್ಕವು. ಸದ್ಗುರು ಸ್ವರೂಪವು ಸಮಸ್ತ ಕಲ್ಪನೆಗಳನ್ನೂ ಹೋಗ ಲಾಡಿಸಿ ಅಖಂಡವಾದ ಸ್ವರೂಪ ಸ್ಥಿತಿಯಲ್ಲಿರುವಿಕೆಯನ್ನು ಮೈಗೂಡಿಸಿಕೊಡುವದು. ಅಷ್ಟಸಿದ್ಧಿಗಳ ಇರುವಿಕೆಯಿಂದ ಕೂಡ ಅವರ ಸ್ವರೂಪಕ್ಕೊಂದು ಹೆಚ್ಚುಗಾರಿಕೆ ಇಲ್ಲ. ಈ ಸಿದ್ಧಿ ಮೊದಲಾದವುಗಳೆಲ್ಲ ಇಂದಿಲ್ಲದಿದ್ದರೆ ನಾಳೆ ಮೈಗರೆಯತಕ್ಕವುಗಳು; ಸದ್ಗುರು ಸ್ವರೂಪವು ಹರಿಹರಸ್ವರೂಪಗಳೆಲ್ಲ ಅಳಿಸಿಹೋದರೂ ಅಚ್ಚಳಿಯದೆ ಇರ ತಕ್ಕದ್ದು. ಇಂಥ ಸರ್ವೋತ್ಕೃಷ್ಟಸ್ವರೂಪದ ಗುಣಾತಿಶಯಗಳನ್ನು ಪ್ರಶಂಸೆ ಮಾಡುವದೆಂದರೆ ನಿರತಿಶಯವಾದ ಇದನ್ನು ವರ್ಣಿಸುವದಾಗುವದಿಲ್ಲವೆಂಬದೊಂದು ರೂಪವೇ ಹೊರತು ಬೇರೆ ಇಲ್ಲ.

ಯಾರು ಇಂಥ ಮಹಾಮಹಿಮರ ಚರಣ ಕಮಲಗಳಲ್ಲಿ ತಮ್ಮ ತನು ಮನಧನಗಳನ್ನು ಸಮರ್ಪಿಸಿ ಈ ವಿಚಾರವನ್ನಾರಂಭಿಸುವರೋ ಅವರಿಗೆ ಪರಮಾತ್ಮ ವಿಷಯವಾದ ಪರಮಾರ್ಥಜ್ಞಾನವು ಕರತಲಾಮಲಕವಾಗುವದು. ಅತ್ಯಂತ ಕಷ್ಟಸಾಧ್ಯ ವಾಗಿ ಕಾಣುವಂಥ ಆ ಪರಮಾತ್ಮತತ್ತ್ವವು ಸಾಧುಗಳ ಸಾನ್ನಿಧ್ಯ ಬಲದಿಂದ ಅತ್ಯಂತ ಸುಲಭವಾಗಿ ಗೋಚರವಾಗುವದು. ಎಲ್ಲೆಲ್ಲಿಯೂ ಯಾವಾಗಲೂ ಇರುವಂಥ ದ್ದಾಗಿಯೂ ಎಷ್ಟು ಪ್ರಯತ್ನ ಮಾಡಿದರೂ ಯಾರಿಗೂ ಎಂದೂ ಕಾಣದಂಥ ಆ ಭಗವತ್ಸ್ವರೂಪವು ಸಾಧುಗಳ ಕೃಪಾಬಲದಿಂದ ಅನಾಯಾಸವಾಗಿ ಕಣ್ಣಿಗೆ ಕಟ್ಟಿದಹಾಗೆ ಆಗುವದು. ಮಹಾಮಹಾಪ್ರತಿಭಾಶಾಲಿಗಳೆಲ್ಲರೂ ತಮ್ಮ ಬುದ್ಧಿಶಕ್ತಿಗೆ ನಿಲುಕಿಸಿ ಕೊಳ್ಳಬೇಕೆಂದು ಹೆಣಗಿ ತಮ್ಮ ಸ್ವತಂತ್ರ ವಿಚಾರದೃಷ್ಟಿಯನ್ನು ಮುಂದಕ್ಕೆ ಹಾಯಿಸಿ ಹಾಯಿಸಿ ಕಣ್ಣು ಕತ್ತಲೆ ಹಿಡಿದು ಕೈಸೋಲು ಬಿಟ್ಟಂಥ ರಹಸ್ಯಾರ್ಥಗಳೆಲ್ಲ ಸಾಧುಗಳ ಸಾನ್ನಿಧ್ಯಪ್ರಭಾವದಿಂದ ತಮ್ಮಷ್ಟಕ್ಕೆ ತಾವೇ ನಮ್ಮ ಹೃದಯಾಂಗಣದಲ್ಲಿ ತಾಂಡವ ವಾಡುವವು. ಷೋಡಶ ಕಲಾಪೂರ್ಣನಾದ ಚಂದ್ರನೂ ಸಹಸ್ರಕಿರಣನಾದ ಸೂರ್ಯನೂ ಕೂಡ ತಮ್ಮ ಸರ್ವಸಾಹಸಗಳಿಂದಲೂ ಜನರಿಗೆ ತೋರಿಸಿಕೊಡಲಾರದಂಥ ಅರ್ಥ ವಿಶೇಷಗಳನ್ನು ಸಾಧು-ಜನರು ಮನಗಾಣಿಸುವರು. ಮನುಷ್ಯ ಬುದ್ಧಿಯ ಪರಮಾವಧಿ ಯು ಎಲ್ಲಿ ಮುಂದೆ ಸಾಗಲಾರದೆ ಸೋತು ಸೊರಗುವದೋ ಅಲ್ಲಿ ಸಾಧುಸಂತರ ಪ್ರಭಾವಾತಿಶಯವು ರಾಜಮಾರ್ಗವನ್ನು ತೋರಿಸಿಕೊಡುವದು. ಆದಿಶೇಷನು ತನ್ನ ಸಹಸ್ರಮುಖಗಳಿಂದ ಹೇಳುವದಕ್ಕಾರಂಭಿಸಿದರೂ ಯಾವ ಅಭಿಪ್ರಾಯವನ್ನು ಪೂರ್ಣ ವಾಗಿ ಪ್ರಕಟಗೊಳಿಸಲಾರನೋ ಆ ಅಭಿಪ್ರಾಯವನ್ನು ಸಜ್ಜನರು ಲೀಲಾಜಾಲವಾಗಿ ಆಡಿ ತಿಳಿಸುವರು. ಸರ್ವಾರ್ಥಗಳನ್ನೂ ಪ್ರಕಾಶಗೊಳಿಸುವ ವೇದವೂ ಕೂಡ ಯಾವದನ್ನು ಬೆಟ್ಟಿಟ್ಟು ತೋರಿಸಲಾರದೆ ''ಅದಲ್ಲ, ಇದಲ್ಲ'' ವೆಂದು ರೂಪಾಂತರ ಗಳಿಂದ ಹೇಳಿರುವದೋ, ಅದರ ಗುರಿಯನ್ನು ಸಾಧುಸಂತರು ನೇರವಾಗಿ ತೋರಿಸುವರು.

ಸಾಧುಗಳೆಂದರೆ ಧರ್ಮಗಳಿಗೆಲ್ಲ ಧರ್ಮಕ್ಷೇತ್ರ, ಪುಣ್ಯಗಳಿಗೆಲ್ಲ ಪುಣ್ಯ ಭೂಮಿ, ಸಮಾಧಿಸುಖಕ್ಕೆ ತೌರುಮನೆ, ವಿವೇಕದ ಭಂಡಾರ. ಈ ಸೃಷ್ಟಿಯಲ್ಲಿ ಜನ್ಮವೆತ್ತಿದವರಲ್ಲಿ ಮಹಾರಾಜರಾಗಿಯೂ ಚಕ್ರವರ್ತಿಗಳಾಗಿಯೂ ಹಿಂದೆ ಎಷ್ಟೋ ಜನಗಳಾಗಿರ ಬಹುದು. ಮುಂದೆ ಎಷ್ಟೋ ಜನಗಳಾಗಬಹುದು. ಆದರೆ ಪರಮಾತ್ಮನೊಡನೆ ಒಂದಾಗುವಂಥ ಸ್ಥಿತಿಯನ್ನು ಕೊಡುವ ಯೋಗ್ಯತೆ ಮಾತ್ರ ಅವರಿಗಿಲ್ಲ. ಅದನ್ನು ಕೊಡುವ ಯೋಗ್ಯತೆಯೆಂಬುದು ಸಂತರಿಗೆ ಮಾತ್ರ ಮೀಸಲಾಗಿರುವದು. ಸೃಷ್ಟಿಕಾಲ ದಿಂದ ನಮಗೆ ಆ ಸೃಷ್ಟಿನಿಯಾಮಕನು ಕಾಣಬರುವಂತೆ ಅಡ್ಡಲಾಗಿ ಇಳಿಯ ಬಿದ್ದಿರುವ ಮಾಯೆಯೆಂಬ ಪರದೆಯನ್ನು ಹಾರಹೊಡೆಯುವದಕ್ಕೆ ಸಾಧುಗಳ ಹೊರತು

ಇನ್ನೊಬ್ಬರು ಸಮರ್ಥರಲ್ಲ. ಆದ್ದರಿಂದ ಪರಮಾತ್ಮ ವಿಷಯಕವಾದ ಕಲ್ಪನೆಯನ್ನು ಬಯಸುವವರೆಲ್ಲರೂ ಮೊಟ್ಟಮೊದಲು, ಸಾಧುಜನರಿಗೆ ಶರಣು ಹೋಗಬೇಕು.

## (ತತ್ತ್ವಜ್ಞಾನ)

ಹಿಂದೆ ಸದ್ಗುರುಗಳ ಪ್ರಭಾವವನ್ನು ಕುರಿತು ಬರೆದಿದ್ದೆನಷ್ಟೆ. ಇಂತ ಮಹಾ ಮಹಿಮರಾದ ಸದ್ಗುರುಗಳಿಂದ ನಾವು ಪಡೆಯಬೇಕಾದ ಮುಖ್ಯ ಪ್ರಯೋಜನ ವೆಂದರೆ ತತ್ತ್ವಜ್ಞಾನವು. ಸೃಷ್ಟಿನಿಯಾಮಕನ ವಿಷಯಕವಾದ ತತ್ತ್ವಜ್ಞಾನವಿಚಾರವು ಹಿಂದೆ ಹೇಳಿದಂಥಾ ಸಾಧುವರ್ಯರ ಅನ್ಯಗ್ರಹದ ಹೊರತು ನಮ್ಮ ನಮ್ಮ ಕ್ಷುದ್ರ ಬುದ್ಧಿಗೇ ದಕ್ಕುವಮಾತಲ್ಲ. ಈ ಜ್ಞಾನವೆಂಬುದು ಎಲ್ಲಿಂದಲೂ ಹೊಸದಾಗಿ ಬರ ಬೇಕಾಗಿಲ್ಲ; ಅದು ನಮ್ಮಲ್ಲಿ ಸಿದ್ಧವಾಗಿಯೇ ಇದೆ. ಆದರೂ ಸ್ಫೂರ್ತಿಯಾಗುವದು ಕಠಿನವಾಗಿದೆ. ಸಾಧುಸಂತರ ಸಮಾಗಮವಾದ ಹೊರತು ಅದು ಕಾಣಿಸಿಕೊಳ್ಳುವದಿಲ್ಲ.

ಈ ಪರಮಾತ್ಮತತ್ತ್ವವೆಂಬುದು ಸರ್ವವೇದಾಂತಸಾರವಾಗಿದೆ ಮತ್ತು ಎಲ್ಲೆಲ್ಲಿಯೂ ತುಂಬಿಕೊಂಡಿರತಕ್ಕದ್ದಾಗಿದೆ. ಇಷ್ಟಾದರೂ ಎಷ್ಟು ನೋಡಿದರೂ ಕಣ್ಣಿಗೆ ಬೀಳುವದಿಲ್ಲ. ಈ ಬ್ರಹ್ಮಾಂಡದಲ್ಲೆಲ್ಲಾ ಎಷ್ಟು ವಸ್ತುಗಳು ಸಾರವತ್ತಾದವುಗಳೆನಿಸಿಕೊಂಡಿವೆಯೋ ಅವುಗಳಿಗೆಲ್ಲ ಆ ಸಾರವೆಂಬುದು ಈ ತತ್ತ್ವದ ಬೆಂಬಲದಿಂದಲೇ ಬಂದಿರುವದು. ಪರಮಾರ್ಥತತ್ತ್ವವು ಇಂಥಾ ಸಾರವಾದದ್ದಾರೂ ಇದನ್ನು ಕಳ್ಳರು ತಮ್ಮ ಸರ್ವ ಪ್ರಯತ್ನಗಳನ್ನೂ ನಡೆಸಿದರೂ ಕದ್ದುಕೊಂಡು ಹೋಗುವದಕ್ಕೆ ಆಗುವಹಾಗಿಲ್ಲ; ಬೆಂಕಿ ಸುಟ್ಟೀತೆಂಬ ಹೆದರಿಕೆಯಿಲ್ಲ; ಗಾಳಿ ಹಾರಿಸಿಕೊಂಡು ಹೋದೀತೆಂಬ ಅಂಜಿಕೆಯಿಲ್ಲ. ಎಷ್ಟು ಕಾಲವಾದರೂ ಇದು ಒಂದೇ ಸಮನಾಗಿ ಇದ್ದಂತೆಯೇ ಇರುವದು; ಎಂದಿಗೂ ಸವೆಯತಕ್ಕದ್ದಲ್ಲ; ಕಾಣದೇ ಹೋಗತಕ್ಕದ್ದೂ ಅಲ್ಲ. ಆದರೂ ಇದು ಸದ್ಗುರುಗಳು ಹಾಕಿದ ಅಂಜನದ ಪ್ರಭಾವದಿಂದ ಮಾತ್ರ ಕಾಣತಕ್ಕದ್ದು.

ಈ ರೀತಿಯಲ್ಲಿ ಇದು ಒಮ್ಮೆ ಗೋಚರವಾದರೆ ಸಾಕು, ಎಂದೆಂದಿಗೂ ತೋರದೇ ಇದ್ದಂಥ ಅಖಂಡಾನಂದವು ಅಭಿವ್ಯಕ್ತವಾಗುವದು; ಹುಟ್ಟುಸಾವುಗಳ ಸೆಲೆಯೇ ಸೀದುಹೋಗುವದು; ಸಾಯುಜ್ಯಮುಕ್ತಿಯೆಂಬುವದು ತನ್ನಲ್ಲಿ ಸಿದ್ಧವಾಗಿಯೇ ಇರುವದು. ಅದು ಈ ತತ್ತ್ವಜ್ಞಾನದಿಂದ ತೋರಿಕೊಳ್ಳುವದು. ಆಗ ನಿಜವಾಗಿ ಯಾವಾಗಲೂ ಇರುವ ವಸ್ತು ಇಂಥಾದ್ದೆಂದೂ ಬರಿಯ ತೋರಿಕೆಯ ವಸ್ತುವಿಂಥ ದ್ದೆಂದೂ ಗೊತ್ತಾಗಿಬಿಡುವದರಿಂದ ತಪ್ಪು ತಿಳಿವಳಿಕೆಯನ್ನು ಕೊಡುತ್ತಿದ್ದ ಮಾಯೆಯೇ ಮಾಯವಾಗಿ ಹೋಗುವದು. ನಾವು ಮನಸ್ಸಿನಲ್ಲಿ ಊಹಿಸಬಹುದಾದ ಬ್ರಹ್ಮಾಂಡ

ವೆಂಬುದೆಲ್ಲ ಆ ತತ್ತ್ವಜ್ಞಾನದೊಳಗೆ ಎಲ್ಲಿಯೋ ಅಡಗಿಕೊಂಡಂತೆ ಕಾಣುವದರಿಂದ ಪಂಚಭೂತಗಳ ಯಾವ ಚೆಲ್ಲಾಟವೂ ಸೋಜಿಗವೆನಿಸುವದಿಲ್ಲ. ಆತ್ಮಸ್ವರೂಪ ಜ್ಞಾನವು ಒಳಗೆ ಮೈದೋರುತ್ತಲೇ ಹೊರಗಣ ಪ್ರಪಂಚವೆಲ್ಲ ಬಹುಕ್ಷುದ್ರವಾಗಿ ಕಾಣ ಬರುವದು. ಸಂಸಾರವೆಂಬ ಸಾಗರದಲ್ಲಿ ಜಾರಿಬಿದ್ದುಮುಳುಗಿ ತೇಲುತ್ತ ಕಂಗಾಲಾಗಿ ಸಾಯಲಾರದೆ ಕಣ್ಣು ಕಣ್ಣು ಬಿಡುತ್ತಿರುವವರನ್ನು ದಡಕ್ಕೆ ತಂದು ಹಾಕಿ ಜೀವದಾನ ವನ್ನು ಮಾಡುವಂಥಾ ಸಾಮರ್ಥ್ಯವು ಈ ಆತ್ಮಜ್ಞಾನಕ್ಕೊಂದಕ್ಕೆ ಮಾತ್ರ ಉಂಟು. ಯಾವನು ಈ ಪರಮಾರ್ಥ ಸಂಪತ್ತನ್ನು ಸಂಪಾದನೆಮಾಡಿಕೊಳ್ಳುವನೋ ಅವನು ಅಖಂಡ ಬ್ರಹ್ಮಾಂಡಕ್ಕೂ ರಾಜಾಧಿರಾಜನೆನಿಸುವನು. ಅಂಥ ಜ್ಞಾನವಿಲ್ಲದಿದ್ದರೆ ಎಲ್ಲಿಯೋ ಬರಿಯ ಒಂದು ಚೋಟುಭೂಮಿಯ ಒಡೆಯರೆನಿಸಿಕೊಳ್ಳುವರು ಎಂಥಾ ರಾಜರು? ಅನೇಕ ಜನ್ಮಗಳಲ್ಲಿ ಮಾಡಿದ ಪುಣ್ಯಪುಂಜವೆಲ್ಲ ಪರಿಪಕ್ವವಾದಾಗ ಮಾತ್ರ ಈ ಜ್ಞಾನವು ಮನಸ್ಸಿಗೆ ಹೊಳೆದೀತು. ಈ ಭೂಮಿಯ ಮೇಲೆ ಜನ್ಮವೆತ್ತಿದ ಯಾವನು ಈ ತತ್ತ್ವಜ್ಞಾನವನ್ನು ಪಡೆಯುತ್ತಾನೋ ಅವನು ಮಾತ್ರ ಹುಟ್ಟಿದ್ದಕ್ಕೆ ಸಾರ್ಥಕವಾಯಿತು. ಮನುಷ್ಯ ಜನ್ಮವನ್ನು ಪಡೆದೂ ಕೂಡ ಆತ್ಮಜ್ಞಾನದ ಕಡೆಗೆ ಮನಸ್ಸು ಒಲಿಯದೆ ಯಾವನು ಸಂಸಾರದ ರುಚಿಯನ್ನೇ ಚಪ್ಪರಿಸುತ್ತಿರುವನೋ ಅಂಥವನ ಮುಖವನ್ನು ಕೂಡ ನೋಡಬಾರದೆನಿಸುವದು. ಹುಟ್ಟಿದ್ದಕ್ಕೆ ಸಾರ್ಥಕವಾಗಿ ಭಗವತ್ಸ್ವರೂಪದ ಜ್ಞಾನವನ್ನು ಪಡೆಯಬೇಕು ಮತ್ತು ಹರಿಭಕ್ತಿಯನ್ನು ಮಾಡಿ ತಾನೂ ಉದ್ಧಾರವಾಗಿ ತನ್ನ ಕುಲಕೋಟಿಯನ್ನು ಉದ್ಧಾರಮಾಡಬೇಕು.

*****

## (ನರಜನ್ಮ)

ತತ್ತ್ವಜ್ಞಾನವನ್ನು ಸೂರೆ ಮಾಡಿಕೊಳ್ಳುವದಕ್ಕೆ ಮನುಷ್ಯ ಜನ್ಮವೊಂದೇ ಸರ್ವ ವಿಧದಲ್ಲಿಯೂ ಅನುಕೂಲವಾಗಿರುವ ಕಾರಣ ಜನ್ಮಗಳೊಳಗೆಲ್ಲಾ ಮನುಷ್ಯ ಜನ್ಮವೇ ಧನ್ಯವಾದದ್ದು. ಹೀಗೆ ನರಜನ್ಮದಲ್ಲಿ ಸರ್ವಸೌಕರ್ಯಗಳೂ ಇರುವದರಿಂದಲೇ ಒಬ್ಬನು ಭಕ್ತಿಮಾರ್ಗವನ್ನು ಹಿಡಿದುಹೋಗುವನು; ಒಬ್ಬನು ಪ್ರಾಪಂಚಿಕ ವಿಷಯಗಳನ್ನೆಲ್ಲಾ ಕಸಕ್ಕಿಂತ ಕಡೆಯಾಗಿ ಕಂಡು ತಾನೊಂದು ಪರ್ವತದ ಗುಹೆಯನ್ನಾಶ್ರಯಿಸುವನು; ಒಬ್ಬನು ತೀರ್ಥಕ್ಷೇತ್ರಗಳನ್ನೆಲ್ಲಾ ಸುತ್ತುವನು; ಒಬ್ಬನು ಒಂದು ಕಡೆ ಏಕಾಸನದಲ್ಲಿ ಕುಳಿತು ಯಾವದಾದರೊಂದು ಮಂತ್ರವನ್ನು ಪುರಶ್ಚರಣೆ ಮಾಡುವನು; ಒಬ್ಬನು ಅಖಂಡನಾಮಸ್ಮರಣೆಯನ್ನು ಮಾಡುವನು; ಒಬ್ಬನು ಒಂದೊಂದು ಬಗೆಯ ತಪಸ್ಸಿನಲ್ಲಿ ನಿಲ್ಲುವನು; ಒಬ್ಬನು ಯೋಗವನ್ನು ಸಾಧಿಸುವನು; ಒಬ್ಬನು ವೇದಶಾಸ್ತ್ರಗಳನ್ನೆಲ್ಲಾ ಅಧ್ಯಯನಮಾಡಿ ಅರ್ಥಗ್ರಹಣ ಮಾಡುವನು; ಒಬ್ಬನು ಮನಸ್ಸನ್ನು ಗಟ್ಟಿಮಾಡಿ ಕೊಂಡು ದೇಹದಂಡನೆ ಮಾಡುವನು; ಒಬ್ಬನು ಅಣಿಮಾದಿ ಸಿದ್ಧಿಗಳನ್ನು ಪಡೆಯುವನು; ಒಬ್ಬನು ಬ್ರಹ್ಮಲೋಕಕ್ಕೆ ಹೋಗುತ್ತಾನೆ; ಇಷ್ಟೆಲ್ಲಾ ಪಡೆಯಲಾಗುವಂಥ ನರದೇಹವನ್ನು ಎಷ್ಟು ಹೊಗಳಿದರೆತಾನೇ ತೀರೀತು!

ಈ ನರದೇಹವಿರುವದರಿಂದ ಮನುಷ್ಯನು ಬುದ್ಧಿಯಿಂದ ಸಾರಾಸಾರ ವಿಚಾರವನ್ನು ಮಾಡುವದಕ್ಕಾಗುತ್ತದೆ. ನರಜನ್ಮವನ್ನು ಪಡೆದವರೆಷ್ಟೋ ಜನರು ಸದ್ಗತಿಗಳನ್ನು ಪಡೆದರು. ಪಶುದೇಹದಲ್ಲಿ ಈ ಸೌಕರ್ಯವಿಲ್ಲ. ಆದ್ದರಿಂದಲೇ ನರದೇಹಕ್ಕೆ ಇಷ್ಟು ಪ್ರಾಶಸ್ತ್ಯ. ನರದೇಹದಲ್ಲಿ ಮಾತ್ರ ಸಾಧುಗಳೂ, ಋಷಿಗಳೂ, ಮುನಿಗಳೂ, ಸಿದ್ಧರೂ, ಬ್ರಹ್ಮಜ್ಞಾನಿಗಳೂ ವಿರಕ್ತರೂ, ಯೋಗಿಗಳೂ, ತಪಸ್ವಿಗಳೂ, ಬ್ರಹ್ಮಚಾರಿಗಳೂ, ದಿಗಂಬರರೂ, ಸಂನ್ಯಾಸಿಗಳೂ, ಮೊದಲಾದವರೆಲ್ಲಾ ಇರುವದನ್ನು ನಾವು ನೋಡುತ್ತಿರುವೆವು. ಯಮಯಾತನೆಯನ್ನು ತಪ್ಪಿಸಿಕೊಳ್ಳುವ ಉಪಾಯವು ನರದೇಹ ದಿಂದ ಮಾತ್ರ ಸಾಂಗವಾಗಿ ನಡೆಯುವದು.

ಈ ನರದೇಹವೆಂಬ ಗಡಿಗೆಯು ಯಾವಾಗ ಒಡೆದುಕೊಂಡು ಹೋಗು ವದೋ ಏನೋ ! ಇದರ ಬಾಳು ನೀರಮೇಲಣ ಗುಳ್ಳೆಯಬಾಳು. ಇದು ನಂಬತಕ್ಕ ವಸ್ತುವಲ್ಲ; ಅದು ನಮ್ಮ ಸ್ವಾಧೀನದ್ದಲ್ಲ. ಎಂದಿಗೂ ಪರಾಧೀನವಾದದ್ದೇ. ಆದರೂ ಅದು ನಮ್ಮನ್ನು ಹತ್ತಿಕೊಂಡಿರುವವರೆಗೂ ಮಾಡಿಕೊಳ್ಳಬಹುದು. ಹೀಗೆ ನರದೇಹವನ್ನು ಪರಮಾರ್ಥಸಾಧನೆಗೆ ಉಪಯೋಗಮಾಡಿಕೊಳ್ಳದೆ ಸುಮ್ಮನೆ ಅದು

ನಾನೆಂದು ಅಥವಾ ನನ್ನದೆಂದು ಅದಕ್ಕೆ ಕಂಡಕಂಡ ಉಪಚಾರಗಳನ್ನು ಮಾಡುವ ಮನುಷ್ಯನಿಗೆ ಅಜ್ಞಾನವೆಂಬ ಬಲೆಯಲ್ಲಿ ಸುತ್ತಾಡಿಕೊಂಡಿರುವದೇ ಗತಿ.

ದೇಹವನ್ನು ನಾನೆಂದು ತಿಳಯಬಾರದು. ದೇಹವೆಂಬುದು ನಮ್ಮ ಮನೆ. ಅದನ್ನು ನಮ್ಮದೆಂದು ತಿಳಿಯುವದು ಕೂಡ ಯೋಗ್ಯವಲ್ಲ. ಏಕೆಂದರೆ ನೋಡಿ; ನಾವು ಒಂದು ಮನೆಯನ್ನು ಕಟ್ಟಿ ಅದರಲ್ಲಿ ವಾಸಮಾಡಿಕೊಂಡು ನಮ್ಮ ಮನೆಯೆಂದು ಗರ್ವವನ್ನು ವಹಿಸುತ್ತೇವೆ. ಯಾವ ಮನೆಯನ್ನು ನಮ್ಮದೆಂದು ನಾವು ಅಭಿಮಾನ ಮಾಡುವೆವೋ ಆ ಮನೆಯನ್ನು ಇಲಿಗಳೂ ಹೆಗ್ಗಣಗಳೂ ಹಾವುಗಳೂ ಚೇಳುಗಳೂ ತಿಗಣೆಗಳೂ ಇವೇ ಮೊದಲಾದ ಎಷ್ಟೋ ಪ್ರಾಣಿಗಳೂ ತಮ್ಮದಾಗಿ ಮಾಡಿಕೊಂಡು ವಾಸಮಾಡುತ್ತಿರುವವು. ಈ ನರದೇಹದಲ್ಲಿಯೂ ಹಾಗೆಯೇ. ಇದು ನಮ್ಮ ದೇಹವೆಂದು ನಾವು ತಿಳಿದರೂ ಆ ದೇಹದಲ್ಲಿ ತಲೆಯಲ್ಲಿ ಹೇನು ಕೂರೆಗಳೂ ರೋಮಕೂಪಗಳಲ್ಲಿ ಸಣ್ಣಸಣ್ಣ ಕ್ರಿಮಿಗಳೂ ವಾಸಮಾಡುತ್ತವೆ. ಹೊಟ್ಟೆಯಲ್ಲಿ ಜಂತುಗಳಿರುತ್ತವೆ. ಹಲ್ಲುಗಳಲ್ಲಿ ಹುಳು ಬೀಳುತ್ತವೆ. ಹಾವು ಚೇಳುಗಳು ಬಂದು ದೇಹವನ್ನು ಕಡಿಯುತ್ತವೆ. ನಾವು ನಮ್ಮ ದೇಹವೆಂದು ಸಂರಕ್ಷಿಸಿಕೊಳ್ಳುತ್ತಿರುವಾಗಲೇ ಹುಲಿ ಬಂದು ಬಲಾತ್ಕಾರವಾಗಿ ಆ ದೇಹವನ್ನು ತಿಂದು ತೇಗಿಬಿಡುತ್ತದೆ. ನಾಯಿ ನರಿಗಳು ಆ ದೇಹದ ಪಾಲಿಗೆ ಕಾದಿರುವವು. ಅದನ್ನು ಕಂಡರೆ ಆನೆ ಸೀಳಿಹಾಕುತ್ತದೆ. ಎತ್ತು ಹಾಯುವದಕ್ಕೆ ಬರುತ್ತದೆ. ಕಳ್ಳನು ಹೊಡೆಯುವದಕ್ಕೆ ಬರುತ್ತಾನೆ. ಈ ದೇಹದ ಸ್ಥಿತಿ ಹೀಗಿರುವಾಗ ಇದನ್ನು ನಮ್ಮದೆಂದು ಹೇಳುವದು ಎಂಥ ದಡ್ಡತನ !

ಹೀಗೆಲ್ಲಾ ಬಗೆಬಗೆಯಾದ ಅಪತ್ತುಗಳಿಗೆ ಬಲಿಯಾಗುವ ಸ್ವಭಾವದ ಈ ದೇಹದ ಮೇಲೆ ನಮ್ಮ ಆಟವು ನಡೆಯುವಾಗಲೇ ನಾವು ಅದನ್ನು ಆತ್ಮೋನ್ನತಿಗೆ ಸಾಧನವಾಗಿ ಉಪಯೋಗಮಾಡಿಕೊಳ್ಳಬೇಕು. ಹಾಗೆ ಮಾಡಿಕೊಂಡರೆ ಮಾತ್ರ ಈ ದೇಹವು ನಮ್ಮ ಪಾಲಿಗೆ ಬಂದದ್ದಕ್ಕೆ ಸಾರ್ಥಕವಾಗುವದು.

*****

# 5. ಸದ್ಗುರುವಿನ ಮಹತ್ತ್ವ

ಅಧ್ಯಾತ್ಮಪ್ರಕಾಶದಂಥ ವಿಚಾರಪ್ರಧಾನವಾದ ಪತ್ರಿಕೆಯನ್ನು ಒಂದು ವರ್ಷ ಕಾಲ ನಿರಂತರವಾಗಿ ಮನನಮಾಡಿದಂಥ ವಾಚಕರಿಗೆ ಸದ್ಗುರುವಿನ ಮಹತ್ತ್ವದಂಥ ಶ್ರದ್ಧಾಪ್ರಧಾನವಾದ ವಿಷಯವು ವಿಲಕ್ಷಣವಾಗಿ ತೋರುವ ಸಂಭವವುಂಟು. ಆದರೆ ಆ ವಿಚಾರ ಸರಣಿಯನ್ನೇ ಸ್ವಲ್ಪ ಮುಂದುವರಿಸಿದರೆ ಅಧ್ಯಾತ್ಮವಿಚಾರಕ್ಕೆ ಸದ್ಗುರುವಿನ ಆಶ್ರಯವೇ ಜೀವಕಲೆಯೆಂಬ ಪರಿಸ್ಥಿತಿಯು ಎದ್ದು ಕಾಣುವದು. ಆ ಪರಿಸ್ಥಿತಿಯನ್ನು ಎತ್ತಿ ತೋರಿಸುವದೇ ಈ ಲೇಖನದ ಉದ್ದೇಶವು.

ಸದ್ಗುರುವಿನ ಮಹತ್ತ್ವವನ್ನು ವಿಚಾರಕ್ಕೆ ತೆಗೆದುಕೊಳ್ಳುವದಕ್ಕಿಂತ ಮೊದಲು ಸದ್ಗುರುವೆಂದರೇನೆಂಬುದನ್ನು ಗೊತ್ತುಮಾಡಿಕೊಳ್ಳಬೇಕು. ಏಕೆಂದರೆ ಮೊದಲು ಪದಾರ್ಥದ ಸ್ವರೂಪವನ್ನು ತಿಳಿದುಕೊಂಡರೆ ಆಮೇಲೆ ಅದರ ಮಹತ್ತ್ವವು ನಿರ್ಣಯ ವಾದೀತು. ಸದ್ಗುರುವಿನ ವಿಚಾರವು ನಮ್ಮಲ್ಲಿ ಅಷ್ಟೊಂದು ಪ್ರಚಾರದಲ್ಲಿಲ್ಲ. ಆದ್ದರಿಂದಲಂತು ನಾವು ಅದನ್ನು ವಿಚಾರಕ್ಕೆ ತೆಗೆದುಕೊಳ್ಳುವದು ಹೆಚ್ಚು ಅಗತ್ಯವು. ಏಕೆಂದರೆ ತಿಳಿಯದ ವಿಷಯಗಳನ್ನು ಹುಡುಕಿ ಹುಡುಕಿ ತಿಳಿಯುವದು ನಾಗರಿಕರಿಗೆ ಭೂಷಣಪ್ರಾಯವಾದದ್ದು. ಪ್ರಕೃತ ಸದ್ಗುರುವಿನ ವಿಚಾರವು ನಮ್ಮಲ್ಲಿ ಬಳಕೆ ಯಲ್ಲಿಲ್ಲದಿದ್ದರೂ ಗುರುವಿನ ವಿಚಾರವು ಅಷ್ಟಿಷ್ಟಾದರೂ ನಮ್ಮ ಪರಿಚಯದಲ್ಲಿದೆ. ಆದ್ದರಿಂದ ಆ ಗುರುಶಬ್ದವನ್ನವಲಂಬಿಸಿಕೊಂಡು ಸದ್ಗುರು ಶಬ್ದದ ಬಳಿಗೆ ಹೋಗಿ ಮುಟ್ಟೋಣ.

ಗುರುವೆಂದರೇನು? ಸಾಮಾನ್ಯವಾಗಿ ನಮಗೆ ತಿಳಿಯದ ವಿಚಾರಗಳನ್ನು ತಿಳಿಸಿಕೊಡುವವರನ್ನು ಗುರುಗಳೆಂದು ಕರೆಯುತ್ತೇವೆ. ಇಲ್ಲಿ ನಮಗೆ ತಿಳಿಯದೆ ಇರುವ ಜ್ಞಾನವು ಅವರಲ್ಲಿರುವದರಿಂದ ಅವರು ಗುರುಗಳೆನಿಸಿಕೊಳ್ಳುವರೆಂದು ಸ್ಪಷ್ಟವಾಗುತ್ತದೆ. ಗುರುವೆಂಬ ಶಬ್ದಕ್ಕೆ ಭಾರವೆಂದರ್ಥ, ಎಂದರೆ ಹೆಚ್ಚು ತೂಕವಾದದ್ದೆಂದು ತಾತ್ಪರ್ಯ. ಒಂದು ತಕ್ಕಡಿಯಲ್ಲಿ ಅಂಥ ಗುರುಗಳನ್ನೊಂದು ತಟ್ಟೆಯಲ್ಲಿಯೂ ಸಾಮಾನ್ಯ ನನ್ನಿನ್ನೊಂದು ತಟ್ಟೆಯಲ್ಲಿಯೂ ಕೂಡಿಸಿ ತೂಗಿದರೆ ಎಷ್ಟೋ ಸಂದರ್ಭಗಳಲ್ಲಿ ಗುರುಗಳ ತೂಕವು ಬಹು ಕಡಿಮೆಯಾಗಿಯೇ ಇರಬಹುದು. ಏಕೆಂದರೆ ಅವರ ಲಕ್ಷ್ಯವೆಲ್ಲ ಮನಸ್ಸಿನ ಉತ್ತಮಸ್ಥಿತಿಯ ಕಡೆಗೇ ಇರುವದರಿಂದ ಶರೀರಸ್ಥಿತಿಯು ಉದಾಸೀನತೆಗೆ ಪಾತ್ರವಾಗಿ ಬಡವಾಗಿರಬಹುದು. ಸಾಮಾನ್ಯ ಮನುಷ್ಯನಿಗೆ ಶರೀರದ ಉತ್ತಮಸ್ಥಿತಿಯ ಕಡೆಗೇ ಲಕ್ಷ್ಯವಿರುವದರಿಂದ ಆತನ ಶರೀರವು ತೂಕದಲ್ಲಿ ಏರಬಹುದು. ಹೀಗೆ

ಶರೀರವನ್ನು ತೂಗಿ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳುವ ಪದ್ಧತಿಯು ಈಗ ಆಚರಣೆಯಲ್ಲಿಯೇ ಇದೆ. ಆದರೆ ಅವನು ಶರೀರದೃಷ್ಟಿಯಿಂದ ಗುರುಶಬ್ದಕ್ಕೆ ಯೋಗ್ಯನಾದರೂ ನಮ್ಮ ಪೂರ್ವಿಕರು ಅವನನ್ನು ಗುರುವೆನ್ನುವದಿಲ್ಲ. ಏಕೆಂದರೆ ನಮ್ಮ ಪೂರ್ವಿಕರು ಬಹಿರ್ದೃಷ್ಟಿಯವರಲ್ಲ. ಶರೀರದ ತೂಕದ ಬೆಲೆಯ ಕಡೆಗೆ ಅವರು ಕಡೆಗಣ್ಣನ್ನು ಕೂಡ ಹಾಕುತ್ತಿರಲಿಲ್ಲ. ಅವರು ಅಂತರ್ದೃಷ್ಟಿಯವರು. ಅವರಿಗೆ ಮನಸ್ಸಿನ ತೂಕವೇ ಹೆಚ್ಚು ಮಹತ್ತ್ವದ್ದು. ಏಕೆಂದರೆ ಶರೀರದ ತೂಕವು ಪಶುಗಳಿಗೂ ಕೂಡ ಮನುಷ್ಯನಿಗಿಂತ ಹೆಚ್ಚಿರುವದು; ಆದರೆ ಅವುಗಳಲ್ಲಿ ಮನಸ್ಸಿನ ತೂಕವು ಸೊನ್ನೆಯಾಗಿರುವದು. ಅಂಥ ಮನಸ್ಸಿನ ತೂಕವನ್ನು ಹೆಚ್ಚಿಸಿಕೊಳ್ಳುವದೇ ಮನುಷ್ಯತ್ವ. ಆದಕಾರಣ ನಮ್ಮವರು ತಿಳಿವಳಿಕೆಯುಳ್ಳ ಮನಸ್ಸಿನವರನ್ನು ಅವರ ಮನಸ್ಸಿನಲ್ಲಿರುವ ತಿಳಿವಳಿಕೆಯ ತೂಕಕ್ಕೆ ಬೆಲೆಯನ್ನು ಕೊಟ್ಟು ಗುರುಗಳೆಂದು ಕರೆದಿರುತ್ತಾರೆ. ಒಬ್ಬ ಅವಧೂತನು ತನಗೆ ಇಪ್ಪತ್ತುನಾಲ್ಕು ಗುರುಗಳೆಂದು ಹೇಳಿರುವ ಭಾಗವತದ ಕಥೆಯನ್ನು ನೋಡಿದರೆ ಹೆಚ್ಚಿನ ತಿಳಿವಳಿಕೆಗೆ ಗುರುತ್ವವೆನ್ನುವದು ಸ್ಪಷ್ಟವಾಗುತ್ತದೆ.

ಹೀಗೆನ್ನುತ್ತಲೇ ಶರೀರದ ಉತ್ತಮಸ್ಥಿತಿಗೆ ಮಹತ್ತ್ವವನ್ನು ಹೇಳಬೇಕೆಂಬುದನ್ನು ಸಹಿಸದೆ ಬಹಿರ್ದೃಷ್ಟಿಗಳಾದ ಕೆಲವರು ಆಧುನಿಕರು ಕಣ್ಣು ಕೆಂಪಗೆ ಮಾಡಬಹುದು. ಅದನ್ನು ಸ್ವಲ್ಪ ತೆಗೆದುಕೊಂಡು ನಮ್ಮ ವಿಚಾರ ಕಿವಿಗೊಟ್ಟರೆ, ನಾವು ಅವರನ್ನೂ ಚೆನ್ನಾಗಿ ಸಮಾಧಾನಗೊಳಿಸಬಹುದು. ಮನಸ್ಸಿನ ಉತ್ತಮ ಸ್ಥಿತಿಗೇ ಮಹತ್ತ್ವವನ್ನು ಹೇಳುವದರಲ್ಲಿ ಶರೀರಸ್ಥಿತಿಯನ್ನು ಉಪೇಕ್ಷಿಸುವ ಉದ್ದೇಶವೇನೂ ಇಲ್ಲ. ಶರೀರಸ್ಥಿತಿಯ ಕಡೆಗೆ ಸ್ವಭಾವವಾಗಿಯೇ ಲಕ್ಷ್ಯವು ಹರಿಯುವದರಿಂದ ಅದರ ಮಹತ್ತ್ವವನ್ನು ಅಟ್ಟಕ್ಕೇರಿಸುವದು ಉಪಯೋಗಕರವಲ್ಲವೆಂದು ಹಿರಿಯರ ಮತ. ಮನಶ್ಶಿಕ್ಷಣೆಯ ಕಡೆಗೆ ಜನರ ಲಕ್ಷ್ಯವನ್ನು ಹೊಸದಾಗಿ ತಿರುಗಿಸಬೇಕಾದ್ದರಿಂದ ಶಾಸ್ತ್ರಜ್ಞರು ಮನಸ್ಸಿನ ಉನ್ನತಿಯ ಬೆಲೆಗೆ ಹೆಚ್ಚು ಮಹತ್ತ್ವವನ್ನು ಕೊಟ್ಟು ಗುರುವೆಂಬ ಶಬ್ದವನ್ನು ತಿಳಿವಳಿಕೆಯುಳ್ಳವರಿಗೆ ಮೀಸಲಾಗಿ ಮಾಡಿದ್ದು ಯೋಗ್ಯವಾಗಿದೆ. ಹೀಗೆ ಮನಸ್ಸಿಗೆ ಮಹತ್ತ್ವವನ್ನು ಕೊಟ್ಟಿದ್ದರೂ ಇದರಿಂದ ಶರೀರದ ಮೇಲಿನ ಉಪೇಕ್ಷೆಯೇನೊ ತೋರುವದಿಲ್ಲವಷ್ಟೇ ಅಲ್ಲ; ಶರೀರಸ್ಥಿತಿಗೆ ಹೆಚ್ಚು ಉಪಕಾರವೇ ಆಗಿರುವದು. ಹೇಗೆಂದರೆ ಸಾಮಾನ್ಯನು ಶರೀರವನ್ನು ಎಷ್ಟು ಸೊಕ್ಕುವ ಹಾಗೆ ಬೆಳೆಸಿದರೂ ಅವನ ಮನಸ್ಸು ಸಮಾಧಾನವಾಗಿಲ್ಲದೆ ಹೊರಹೊರಗೆ ಹರಿದಾಡಿದಷ್ಟೂ ಅದರ ಆರೋಗ್ಯಕ್ಕೆ ಧಕ್ಕೆಬರುವದು. ಗುರು ಬಡಮಯ್ಯವನಾಗಿದ್ದರೂ ಶಿಕ್ಷಣದಿಂದ ಮನಸ್ಸನ್ನು ಸಮಾಧಾನಕ್ಕೆ ತಂದುಕೊಂಡರೆ ಅದರ ಪ್ರಭಾವದಿಂದ ಅವನ ದೇಹವು

ಆರೋಗ್ಯವಾಗಿರುವದು. ರೋಗಗ್ರಸ್ತವಾದ ಸೊಕ್ಕಿದ ದೇಹಕ್ಕಿಂತಲೂ ಆರೋಗ್ಯ ವಾದ ಬಡದೇಹವು ಎಷ್ಟೋ ಮೇಲೆಂಬುದನ್ನು ವಿವೇಕಿಗಳೆಲ್ಲರೂ ಒಪ್ಪುವರು.

''ಶರೀರಮಾದ್ಯಂ ಖಲು ಧರ್ಮ ಸಾಧನಮ್''

ಎಂದು ನಮ್ಮವರು ಶರೀರಕ್ಕೆ ಮಹತ್ತ್ವವನ್ನು ಕೊಟ್ಟು ಹೇಳುವಾಗ ಅವರ ಉದ್ದೇಶವು ಬರೀ ಸೊಕ್ಕಿದ ಶರೀರವಲ್ಲ. ತಮೋಗುಣ ಪ್ರಧಾನವಾದ ಆ ದೇಹವು ಧರ್ಮಕ್ಕೆ ಸಾಧನವಾಗಲಾರದು. ಧರ್ಮಕ್ಕೆ ಸಾಧನವಾಗಬೇಕಾದರೆ ಆರೋಗ್ಯ ದೃಢಕಾಯವಾಗಬೇಕು. ಅದು ವಿಶೇಷವಾಗಿ ಮನಸ್ಸಿನ ಸ್ಥಿತಿಯನ್ನು ಅವಲಂಬಿಸಿ ಕೊಂಡಿರುವದು. ಸಾಮಾನ್ಯವಾಗಿ ಯೋಗಿಗಳು ಯಾವಾಗಲೂ ಆರೋಗ್ಯದಿಂದ ಇರುವದಕ್ಕೆ ಅದು ಮನಸ್ಸಿನ ಸುಶಿಕ್ಷಿತತ್ವವೇ ಕಾರಣ. ಹೀಗೆ ಮನಸ್ಸಿನ ಉತ್ತಮಸ್ಥಿತಿಯಲ್ಲಿ ತಾನು ತನ್ನ ಆನಂದವನ್ನನುಭವಿಸುವದಲ್ಲದೇ ತನ್ನ ಪ್ರಭಾವದಿಂದ ಗುರುವನ್ನು ಕೂಡ ಆನಂದಗೊಳಿಸುವದರಿಂದ ಗುರುವೆಂಬ ಶಬ್ದವು ಚೆನ್ನಾಗಿ ಒಪ್ಪುತ್ತದೆ.

ಹೆಚ್ಚಿನ ತಿಳಿವಳಿಕೆಯುಳ್ಳ ಮನಸ್ಸೆಲ್ಲ ಗುರುವೆಂಬ ಶಬ್ದಕ್ಕೆ ಅರ್ಹವಾಗುವ ದಾದರೆ ವ್ಯವಹಾರದ ಸರ್ವ ಸಾಮಾನ್ಯವಿಷಯಗಳಲ್ಲಿ ಒಬ್ಬನಿಗಿಂತ ಇನ್ನೊಬ್ಬನಿಗೆ ಏನಾದ ರೊಂದು ತಿಳಿವಳಿಕೆಯು ಹೆಚ್ಚಾಗಿದ್ದೇ ಇರುವದರಿಂದ ಪ್ರತಿಯೊಬ್ಬನೂ ಗುರುವೆನಿಸಿ ಕೊಳ್ಳುವದಕ್ಕೆ ಯೋಗ್ಯನಾಗಿ ಲೋಕವೆಲ್ಲಾ ಗುರು ಮಯವೇ ಆಗಿಬಿಡುವದು. ತಿಳಿವಳಿಕೆಯ ದೃಷ್ಟಿಯಿಂದ ನಿಷ್ಪಕ್ಷಪಾತವಾಗಿ ನೋಡಿದರೆ ಗುರುತ್ವವನ್ನೊಪ್ಪಿ ಕೊಳ್ಳಬೇಕಾಗುವದು.

''ಯುಕ್ತಿಯುಕ್ತಂ ವಚೋ ಗ್ರಾಹ್ಯಂ ಬಾಲಾದಪಿ ಶುಕಾದಪಿ''

ಎಂಬ ವಾಕ್ಯದಂತೆ ಯುಕ್ತಿಗೊಪ್ಪುವಂಥ ಮಾತನ್ನು ಹುಡುಗರಿಂದಾದರೂ ಕೊನೆಗೆ ಗಿಳಿಗಳಿಂದಾದರೂ ಗ್ರಹಿಸಬೇಕಾದ್ದರಿಂದ ಗುರುತ್ವವು ಅವರ ಪಾಲಿಗೂ ಬರುವದು. ಹೀಗೆ ಎಲ್ಲರೂ ಗುರುಗಳಾಗುವದಾದರೆ ಗುರುಶಬ್ದದ ವೈಶಿಷ್ಟ್ಯವೇ ಉಳಿಯುವುದಿಲ್ಲ. ಆದ್ದರಿಂದ ನಮ್ಮ ಹಿರಿಯರು ಸರ್ವಸಾಮಾನ್ಯವಾದ ಸ್ಥೂಲ ವಿಚಾರಗಳ ತಿಳಿವಳಿಕೆಗೂ ಹೆಚ್ಚು ಮಹತ್ತ್ವವನ್ನು ಕೊಡುವದಿಲ್ಲ. ಒಳ್ಳೇ ಪ್ರತಿಭಾ ಶಾಲಿಗಳಾದವರು ಒಂದೊಂದು ವಿಚಾರದ ಸಣ್ಣಸಣ್ಣ ಕೀಲುಗಳನ್ನು ಕೂಡ ಬಿಡಿಸಿ ಸೂಕ್ಷ್ಮದೃಷ್ಟಿಯಿಂದ ಅದರ ಮರ್ಮಗಳನ್ನೆಲ್ಲಾ ಧಾರಾದತ್ತವಾಗಿ ನಮ್ಮ ಮುಂದಿಟ್ಟಿರು ವರಷ್ಟೆ. ಆ ಶಬ್ದಸಾಗರದಲ್ಲಿ ಮುಳುಗಿ ತಲವನ್ನು ಕೂಡ ಕಲಕಿ ಅಮೌಲ್ಯವಾದ ವಿಚಾರ ವಿಶೇಷಗಳೆಂಬ ಅಣಿಮುತ್ತುಗಳನ್ನು ಮೇಲಕ್ಕೆತ್ತಿತಂದು ಅಪೇಕ್ಷಿಸಿದವರ ಕಂಠಕ್ಕೆ

ಹಾರವಾಗಿ ಉದಾರಬುದ್ಧಿಯಿಂದ ಅರ್ಪಣಮಾಡುವಂಥ ಬುದ್ಧಿಶಾಲಿಗಳಾದ ವಿದ್ಯಾವಂತರು ವ್ಯವಹಾರದಲ್ಲಿ ನಮ್ಮಿಂದ ಗುರುಗಳೆನಿಸಿಕೊಳ್ಳುತ್ತಿರುವರು. ಸಾಮ್ಯಾನ ಜನರಲ್ಲಿ ಸ್ಥೂಲವಿಚಾರಗಳು ಹೆಚ್ಚುಹೆಚ್ಚಾಗಿ ಸೇರಿಕೊಳ್ಳುವದಕ್ಕೆ ಅವರ ಪ್ರಯತ್ನವೇನೂ ಅಷ್ಟು ಹೆಚ್ಚಾಗಿ ನಡದಿರುವದಿಲ್ಲ; ಅವರವರ ಸ್ವಾಭಾವಿಕವಾದ ಅನುಭವದಿಂದಲೇ ಅವು ಅವರಲ್ಲಿ ಕಾಣಿಸಿಕೊಂಡಿರುವವು. ಹೀಗೆ ಅಪ್ರಯತ್ನದಿಂದ ಬಂದ ತಿಳಿವಳಿಕೆಗೆ ಮನವಾದರೂ ಹೇಗೆ ಒಪ್ಪೀತು? ಇಂಥ ತಿಳಿವಳಿಕೆಯನ್ನು ಇತರರಿಗೆ ತಿಳಿಸುವದ ರಲ್ಲಾದರೂ ಏನು ಮಹತ್ತ್ವವಿದೆ? ಆದ್ದರಿಂದಲೇ ಸ್ಥೂಲ ವಿಚಾರ ತಿಳಿಸುವವರು ಗುರು ಶಬ್ದಕ್ಕೆ ಪಾತ್ರರಲ್ಲ. ವಿದ್ಯಾವಂತರು ಸಂಪಾದಿಸಿದ ತಿಳಿವಳಿಕೆಯಾದರೂ ಬಹು ಪ್ರಯತ್ನದಿಂದ ಪಡೆದದ್ದಾಗಿರುವದು. ತಮಗಾದ ಅನುಭವಕ್ಕೆ ಬೆಲೆಯನ್ನು ಕಟ್ಟುವದಕ್ಕೂ ಒಂದು ಬಗೆಯ ಯೋಗ್ಯತಾವಿಶೇಷವುಬೇಕು. ಅನುಭವಗಳು ಸಾಮಾನ್ಯ ರಿಗೂ ವಿಶೇಷರಿಗೂ ಒಂದೇಆದರೂ ಸಾಮಾನ್ಯರು ಅದನ್ನು ಸ್ಥೂಲದೃಷ್ಟಿಯಿಂದ ನೋಡುವರು; ವಿಶೇಷರು ಅದನ್ನು ಸೂಕ್ಷ್ಮದೃಷ್ಟಿಯಿಂದ ನೋಡುವರು. ಸ್ಥೂಲದೃಷ್ಟಿಗೆ ಗೋಚರವಾದದ್ದು ಯಾವಾಗಲೂ ಅಬಾಧಿತವಾಗಿಯೇ ಇರುವದೆಂಬ ನಿಯಮ ವಿಲ್ಲ; ಸೂಕ್ಷ್ಮದೃಷ್ಟಿಯಿಂದ ನೋಡಿದ್ದು ಅಬಾಧಿತವಾಗಿರುವದು. ಗ್ರಂಥದಲ್ಲಿರುವ ವಿಚಾರಗಳು ಸೂಕ್ಷ್ಮದೃಷ್ಟಿಗೆ ಗೋಚರವಾದವುಗಳಾದ್ದರಿಂದ ಅವುಗಳಿಗೆ ಮಹತ್ತ್ವವು ಹೆಚ್ಚು. ಒಂದು ಗ್ರಂಥದಲ್ಲಿ ಸ್ಥೂಲದೃಷ್ಟಿಯ ಮಾತುಗಳೇ ಇದ್ದರೆ ಅದಕ್ಕೆ ಗ್ರಂಥವೆಂಬ ಮಾತೇ ಒಪ್ಪುವದಿಲ್ಲ. ಎಲ್ಲರೂ ಕಂಡದ್ದನ್ನು ಕಿವಿಯಲ್ಲಿ ಹೇಳುವದಕ್ಕೆ ಹೋದಂತೆ. ಎಲ್ಲರಿಗೂ ತಿಳಿಯುವ ಮಾತನ್ನು ಹೇಳುವ ಗ್ರಂಥದ್ದೇನು ಹೆಚ್ಚುಗಾರಿಕೆ ? ಎಲ್ಲರೂ ಬಹುಮಾನಿಸುವ ಗ್ರಂಥದಲ್ಲಿ ಸೂಕ್ಷ್ಮವಿಚಾರಗಳೇ ತುಂಬಿ ತುಳುಕುತ್ತಿರುವವು. ವಿದ್ಯಾವಂತರು ಬಹುಶ್ರಮಪಟ್ಟು ತಾವು ಅದನ್ನೆಲ್ಲಾ ತಿಳಿದುಕೊಂಡು ಅಂಥ ಬಹುಬೆಲೆಯುಳ್ಳ ಅರ್ಥವನ್ನು ಇತರರಿಗೆ ಹೇಳಿಕೊಡುವದರಿಂದ ಬೋಧಕರಾದ ವಿದ್ಯಾವಂತರಿಗೇ ಗುರುಶಬ್ದವು ಚೆನ್ನಾಗಿ ಅನ್ವಯಿಸುವದು ಮತ್ತು ಅದು ರೂಢಿಗೂ ಬಂದಿರುವದು.

ವಿಚಾರಪ್ರಿಯರಾದ ನಮ್ಮವರು ಸೂಕ್ಷ್ಮವಿಚಾರಗಳಿಗೆ ಎಷ್ಟು ಪ್ರಾಶಸ್ತ್ಯವನ್ನು ಕೊಟ್ಟಿರುವರೆಂಬುದನ್ನು ಗುರುಶಬ್ದದ ಉಪಯೋಗದಿಂದ ನಾವು ಕಂಡು ಹಿಡಿಯ ಬಹುದು. ಶರೀರದ ಪರಿಪುಷ್ಟಿಯು ಗುರುಶಬ್ದಕ್ಕೆ ಪಾತ್ರವಾಗಲಾರದೆಂಬುದನ್ನು ಹಿಂದೆಯೇ ಹೇಳಿದೆಯಷ್ಟೇ. ಒಬ್ಬನು ಧನಕನಕವಸ್ತುವಾಹನಗಳ ಸಮೃದ್ಧಿಯಲ್ಲಿ ಮುಗಿಲುಮುಟ್ಟಿ ಮೆರೆಯುತ್ತಿದ್ದರೂ ಅವನನ್ನು ಯಾರೂ ಗುರುವೆನ್ನುವದಿಲ್ಲ.

ಒಬ್ಬನು ಬೇಕಾದಷ್ಟು ದಾನ ಧರ್ಮಗಳನ್ನುಮಾಡಿ ಯಶಸ್ಸಿನಲ್ಲಿಯೇ ಮುಳುಗಿ ಹೋಗಿದ್ದರೂ ಅವನು ಗುರುವೆಂದು ಕರೆಸಿಕೊಳ್ಳಲಾರನು. ಒಬ್ಬನು ಕೈಗೆಲಸದಲ್ಲಿ ಎಲ್ಲರ ತಲೆಯನ್ನೂ ಮೆಟ್ಟಿ ಹಾರಿದರೂ ಅವನ ಮೇಲೆ ಗುರುಪದ ಪ್ರಯೋಗ ವಾಗುವದಿಲ್ಲ. ಆದ್ದರಿಂದ ಬುದ್ಧಿಶಕ್ತಿಯಿಂದ ಸೂಕ್ಷ್ಮ ವಿಚಾರಗಳನ್ನು ಗ್ರಹಿಸಿ ತನ್ನ ಜಾಣ್ಮೆಯಿಂದ ಇತರರ ಬುದ್ಧಿಶಕ್ತಿಯನ್ನು ಅರಳಿಸಿ ಅದರೊಳಕ್ಕೆ ತನ್ನ ವಿಚಾರ ಗಳನ್ನು ತುಂಬುವಂಥ ವಿದ್ಯಾವಂತನು ಶರೀರಸಂಪತ್ತು , ಕೈಗಾರಿಕೆಯ ಸಂಪತ್ತು ಮೊದಲಾದ ಎಲ್ಲ ಸಂಪತ್ತುಗಳನ್ನು ಮೀರಿಸಿದ ಸಂಪತ್ತಿನವನೆಂದು ಒಪ್ಪಿಕೊಂಡ ಹಾಗಾಯಿತು.

ಈಗ **ಗುರುಶಬ್ದದ** ವ್ಯಾಖ್ಯಾನವು ಮುಗಿದದ್ದರಿಂದ ಇನ್ನು ಸದ್ಗುರುಶಬ್ದದ ಕಡೆಗೆ ಹೆಜ್ಜೆಯನ್ನಿಡಬಹುದು.

ಸದ್ಗುರುಶಬ್ದದಲ್ಲಿಯೂ ಗುರುಶಬ್ದವಿರುವದರಿಂದ ಆ ಗುರುಶಬ್ದದ ಎಲ್ಲ ಮಹತ್ತ್ವಗಳೂ ಅದರಲ್ಲಿ ಅಡಕವಾಗಿರುವದಲ್ಲದೆ ಗುರುಶಬ್ದದ ಜೊತೆಗೆ ಸತ್ ಎಂಬ ಶಬ್ದವೊಂದೂ ಸೇರಿರುವದರಿಂದ ಗುರುಶಬ್ದಕ್ಕಿಂತ ಹೆಚ್ಚಿನ ಮಹತ್ತ್ವವು ಅದರಲ್ಲಿದ್ದೇ ತೀರಬೇಕಾಗಿರುವುದು. ಆ ಹೆಚ್ಚಿನ ಮಹತ್ತ್ವವೇನೆಂಬುದನ್ನು ತಿಳಿಯಬೇಕಾದರೆ ಸತ್ ಎಂಬ ಶಬ್ದದ ಅರ್ಥದ ಕಡೆಗೆ ಗಮನಿಸಬೇಕು. ಸತ್ ಎಂದರೆ ಇರುವದೆಂದರ್ಥ. ಸತ್ ಎಂಬುದು ಜಗತ್ತಿಗೆ ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾದ ಬ್ರಹ್ಮದ ಹೆಸರು. ಇರುವದೆಂಬರ್ಥದ ಮಾತು ಬ್ರಹ್ಮಕ್ಕೆ ಏಕೆ ಬಂತೆಂದರೆ ಬ್ರಹ್ಮವು ಮೂರು ಕಾಲಕ್ಕೂ ಇರುವಂಥದ್ದು. ಹಿಂದೆ ಅದು ಎಂದೂ ಇಲ್ಲದೇ ಇಲ್ಲ; ಇಂದೂ ಇದೆ; ಮುಂದೆಯೂ ಇಲ್ಲದೇ ಹೋಗುವದಿಲ್ಲ. ಆದ್ದರಿಂದ ಬ್ರಹ್ಮಕ್ಕೆ ಆ ಹೆಸರು. ಅದ್ವೈತ ಶಾಸ್ತ್ರವೆಂಬ ಕನ್ನಡಕವನ್ನಿಟ್ಟುಕೊಂಡು ನೋಡಿದರಂತು ಇರುವಿಕೆಯು ಬ್ರಹ್ಮ ವೊಂದಕ್ಕೇ ಹೊರತು ಉಳಿದವುಗಳೆಲ್ಲಾ ಕನಸಿನ ಅಥವಾ ಮಾಯೆಯ ಜಗತ್ತಿನಂತೆ ಬರೀತೋರಿಕೆ. ಮಾಯಾವಿಯು ತಾನು ಕಾಣಿಸಿಕೊಳ್ಳದೆ ತನ್ನ ಮಾಯೆಯಿಂದ ಅನೇಕ ವಸ್ತುಗಳ ಅಂಗಡಿಯನ್ನಿಟ್ಟಾಗ ಆ ವಸ್ತುಗಳೆಲ್ಲಾ ನಿಜವಾಗಿ ಇರುವವುಗಳೆನಿಸಿಕೊಳ್ಳದೆ ಬರೀ ತೋರಿಕೆಯವುಗಳಾಗಿರುವದನ್ನು ಎಲ್ಲರೂ ಮನಗಂಡಿರಬಹುದು.ಆ ಮಾಯಾವಿಯು ತನ್ನ ಮಾಯೆಯನ್ನು ತೆಗೆಯುತ್ತಲೇ ತೋರಿಕೆಯ ಮಾತ್ರದ ಆ ವಸ್ತುಗಳೆಲ್ಲ ಮಾಯ ವಾಗುವವು. ಮಾಯೆಯನ್ನು ಹಾಕಿದಾಗಲೂ ತೆಗೆದಾಗಲೂ ನಿಜವಾಗಿರುವವನು ಅವನೊಬ್ಬನೆ. ಅದರಂತೆ ಸೃಷ್ಟಿಯನ್ನು ಮಾಡಿರುವಾಗಲೂ ಲಯವನ್ನು ಮಾಡಿದ ಮೇಲೆಯೂ ನಿಜವಾಗಿರುವದು ಬ್ರಹ್ಮವಸ್ತು ಒಂದೆ. ಆದ್ದರಿಂದ ಅದಕ್ಕೆ **ಸತ್** ಎಂದು ಹೆಸರು. ಇನ್ನು ದ್ವೈತಶಾಸ್ತ್ರ ವೆಂಬ ಕನ್ನಡಕವನ್ನು ಹಾಕಿಕೊಂಡರೆ ಅಥವಾ ಸರ್ವ

ಸಾಮಾನ್ಯವಾದ ಲೋಕ ದೃಷ್ಟಿಯಿಂದ ನೋಡಿದರೆ ಕೂಡ, ಜಗತ್ತಿನಲ್ಲಿರುವ ಪ್ರತಿಯೊಂದು ವಸ್ತುವೂ ಕ್ಷಣ ಕ್ಷಣಕ್ಕೂ ನಾಶವಾಗುತ್ತ ರೂಪಾಂತರವನ್ನು ಪಡೆಯುತ್ತಿರುವದು. ಈ ಅಭಿಪ್ರಾಯವನ್ನು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ

**''ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಮ್''**

ಎಂಬ ವಾಕ್ಯದಿಂದ ನೆನಪುಗೊಟ್ಟಿರುವನು. ಅನಿತ್ಯವಾದ ಮತ್ತು ಅಸುಖವಾದ, ಈ ಲೋಕದಲ್ಲಿ ಹುಟ್ಟಿದ ಮೇಲೆ ಪರಮಾತ್ಮನಿಗೆ ಶರಣು ಹೋಗ ಬೇಕೆಂದು ಮೇಲಿನ ವಾಕ್ಯದ ಅರ್ಥ. ಜಗತ್ತು ಅಸತ್ಯವಾದದ್ದೆಂದು ಎಂದರೆ ಸುಳ್ಳಾಗಿ ಕಾಣುವದೆಂದು ಅದ್ವೈತಿಗಳು ಮಾತ್ರ ಹೇಳಿದರೂ ಅದು ಅನಿತ್ಯವೆಂಬ, ಎಂದರೆ ಕ್ಷಣಕ್ಕೊಂದೊಂದು ಬಗೆಯ ರೂಪಾಂತರವನ್ನು ಪಡೆಯುತ್ತ ಹೋಗುವದೆಂಬ, ಅಭಿಪ್ರಾಯವನ್ನು ಎಲ್ಲ ಪಂಥದವರೂ ಒಪ್ಪುತ್ತಾರೆ. ಎಲ್ಲರಿಗೂ ಕಣ್ಣಿಗೆ ಕಟ್ಟಿದಹಾಗೆ ತಾನಾಗಿ ಎದ್ದು ಕಾಣುವಂಥ ಅನುಭವಸಿದ್ಧವಾದ ಈ ಅಭಿಪ್ರಾಯವನ್ನು ಯಾರು ತಾನೇ ಅಲ್ಲಗಳೆಯುವದಕ್ಕಾದೀತು ! ಜಗತ್ತು ಸತ್ಯವೊ, ಅಸತ್ಯವೋ- ಆ ಮಾತು ಹಾಗಿರಲಿ. ಈಗ ಅನಿತ್ಯವೆಂಬುದೇ ಸಾಕು. ಈಗ ಒಂದು ಬಗೆಯಾಗಿಯೂ, ಇನ್ನೊಂದು ಗಳಿಗೆಗೆ ಇನ್ನೊಂದು ಬಗೆಯಾಗಿಯೂ ಕಾಣುವ ಈ ಜಗತ್ತಿಗೆ 'ಸತ್' ಇರುವದು ಎಂಬ ಹೆಸರನ್ನು ಹೇಳುವದಕ್ಕೆ ಯಾರಿಗೆ ಮನಸ್ಸು ಒಪ್ಪೀತು? ಆದ್ದರಿಂದ ಜಗತ್ತು ಕಂಡರೂ ಇದ್ದಹಾಗಿಲ್ಲ. ನಿಜವಾಗಿರುವದೆಂದರೆ ಬ್ರಹ್ಮವೆ. ಆದ್ದರಿಂದ ಅದಕ್ಕೆ ಸತ್ ಎಂಬ ಮಾತು ಒಪ್ಪುತ್ತದೆ. ಸದ್ಗುರುವೆಂಬ ಮಾತಿನಲ್ಲಿರುವ ಸತ್ ಶಬ್ದಕ್ಕೆ ಬ್ರಹ್ಮವೆಂಬ ಅರ್ಥವನ್ನು ಇಟ್ಟುಕೊಂಡರೆ ಬ್ರಹ್ಮಸ್ವರೂಪನಾದ ಗುರುವೆಂದರ್ಥವಾಗುತ್ತದೆ. ಇದರಿಂದ ಅವನು ಎರಡನೆಯ ದೇವರೆಂದೇ ಹೇಳಿದಂತಾಯಿತು. ಲೌಕಿಕ ವಿಚಾರಗಳನ್ನು ತಿಳಿಸಿ ಕೊಡುವ ಗುರುವಿನಲ್ಲಿ ನಮಗೆ ಎಷ್ಟೇ ಪೂಜ್ಯಬುದ್ಧಿ ಇದ್ದರೂ ಅವನು ದೇವರ ಸ್ವರೂಪವೆಂಬ ಭಾವನೆ ಹುಟ್ಟುವದಿಲ್ಲ. ಆದ್ದರಿಂದ ಸದ್ಗುರುವೆಂದರೆ ಲೌಕಿಕ ವಿಚಾರಗಳನ್ನು ತಿಳಿಸಿಕೊಡುವ ಗುರುವಂತು ಅಲ್ಲ. ಇದಲ್ಲದೆ,

**''ಸದ್ಭಾವೇ ಸಾಧುಭಾವೇ ಚ ಸದಿತ್ಯೇತತ್ಪ್ರಯುಜ್ಯತೇ''**

ಎಂಬ ಗೀತೋಕ್ತಿಯಂತೆ ಸತ್ ಎಂಬ ಶಬ್ದವು ''ಯಾವಾಗಲೂ ಇರುವದು'' ಎಂಬ ಅರ್ಥದಲ್ಲಿಯೂ ಯೋಗ್ಯವಾದದ್ದೆಂಬ ಅರ್ಥದಲ್ಲಿಯೂ ಪ್ರಯೋಗವಾಗುವದು. ಇವುಗಳಲ್ಲಿ ಯಾವಾಗಲೂ ಇರುವದೆಂಬ ಮೊದಲನೆ ಅರ್ಥವನ್ನಿಟ್ಟುಕೊಂಡರೆ ಯಾವಾಗಲೂ ಇರುವ ಗುರುವೆಂದರ್ಥವಾಗುವದು. ಯಾವಾಗಲೂ ಇರುವ ಗುರುವೆಂದರೆ ಕ್ಷಣಕ್ಕೊಂದೊಂದು ಬಗೆಯಾಗದೆ ಇರುವ ಗುರುವೆಂದರ್ಥ.

ಲೌಕಿಕ ವಿಚಾರಗಳನ್ನು ತಿಳಿಸಿಕೊಡತಕ್ಕವರ ಅಭಿಪ್ರಾಯಗಳು ಮೇಲೆ ಮೇಲೆ ಬದಲಾಗುತ್ತಿರುವದನ್ನು ನಾವು ನೋಡುತ್ತೇವೆ. ಇದು ಅವರ ತಪ್ಪಲ್ಲ. ಅವರ ವಿಚಾರಕ್ಕೆ ಆಧಾರವಾದ ವಿಷಯಗಳ ಸ್ವಭಾವವೇ ಹಾಗೆ, ವಿಷಯಗಳು ಎಂದರೆ ಹೊರಗೆ ಕಾಣುತ್ತಿರುವ ವಸ್ತುಗಳು, ಕ್ಷಣಕ್ಕೊಂದೊಂದು ವಿಕಾರವನ್ನು ಪಡೆಯುತ್ತಲೇ ಇರುವದರಿಂದ ಅವುಗಳನ್ನು ತಿಳಿಸಿಕೊಡುವಾಗ ಅವುಗಳ ಸಂಬಂಧವಾದ ತಿಳಿವಳಿಕೆಯೂ ವಿಕಾರವನ್ನು ಪಡಯಲೇಬೇಕು. ಆದ್ದರಿಂದಲೂ ಸದ್ಗುರುಶಬ್ದವು ಲೌಕಿಕವಿಚಾರಗಳನ್ನು ಹೇಳಿಕೊಡುವವರಿಗೆ ಒಪ್ಪುವದಿಲ್ಲ. ಇನ್ನು ಯೋಗ್ಯವಾದದ್ದೆಂಬ ಎರಡನೇ ಅರ್ಥವನ್ನಿಟ್ಟುಕೊಂಡರೂ ಲೌಕಿಕವಿಚಾರ ಬೋಧಕರನ್ನು ಸದ್ಗುರುಪದವಿಯಿಂದ ಹೊರಗೆ ಹಾಕಬೇಕಾಗುವದು. ಏಕೆಂದರೆ ಬರೀ ತೋರಿಕೆಯ ಅಥವಾ ಕ್ಷಣಕ್ಷಣಕ್ಕೊಂದು ವಿಕಾರವಾಗುವ ವಿಷಯಗಳ ವಿಚಾರದಲ್ಲೇನು ಹುರುಳಿದೆ? ಅರಳ ಹಿಟ್ಟಿನಂಥ ಆ ತಿಳಿವಳಿಕೆಯನ್ನು ಆತುರದಿಂದ ಮುಕ್ಕುವಾಗ ಅದು ಅಂಗಳಿಗೆ ಹತ್ತಿ ಸಾವು ಬರುವದೇ ಸರಿ. ಸ್ಥೂಲ ದೃಷ್ಟಿಯಿಂದ ನೋಡಿದರೆ ಈ ವಿಚಾರಗಳಿಗೆ ಎಷ್ಟೇ ಮಹತ್ತ್ವವಿದ್ದರೂ ಸೂಕ್ಷ್ಮ ದೃಷ್ಟಿಯಿಂದ ನೋಡಿದರೆ ಅಷ್ಟು ಲಘುತ್ವವೆ. ಆದ್ದರಿಂದ ಈ ತಿಳಿವಳಿಕೆಯು ಯೋಗ್ಯವೆನಿಸಿಕೊಳ್ಳಲಾರದು. ಯಾವದು ನಮ್ಮ ನಿತ್ಯ ಸುಖಕ್ಕೆ ಸಾಧನವೋ ಅದು ಯೋಗ್ಯವಿಚಾರವು. ವಿಷಯಗಳು ಕ್ಷಣಕ್ಕೊಂದೊಂದು ವಿಕಾರವಾಗುವದರಿಂದ ಅವುಗಳಿಗೇ ನಿತ್ಯತ್ವವಿಲ್ಲ. ಅವು ನಿತ್ಯಸುಖವನ್ನು ಕೊಡುವದೆಂತು !

ಹಾಗಾದರೇನು - ಗತಿ! ಸದ್ಗುರು ಯಾರು? ಎಂದರೆ ಇದ್ದಾರೆ, ಅವರು ಗುರುಗಳಷ್ಟು ಅಗ್ಗವಾಗಿಲ್ಲ. ಈಗಿನ ಕಾಲದಲ್ಲಿ ಅವರನ್ನು ಕೇಳುವವರು ತುಟ್ಟಿಯಾಗಿರುವದರಿಂದ ಅವರು ಬಯಲಿಗೆ ಬಂದು ನಿಲ್ಲುವ ಅವಕಾಶವು ತಮಗೇಕೆಂದು ಪರದೆಯ ಹಿಂದೆ ವಿಶ್ರಮಿಸಿಕೊಂಡಿದ್ದಾರೆ. ನಾವು ವಿಷಯಗಳ ವಿಚಾರವನ್ನೇ ಬಯಸುವದರಿಂದ ಎಲ್ಲೆಲ್ಲಿಯೂ ನಮಗೆ ಬರೀ ಗುರುಗಳೇ ಸಿಕ್ಕುತ್ತಿದ್ದಾರೆ. ಈ ವಿಚಾರದಿಂದ ನಿತ್ಯಸುಖವು ಸಿಕ್ಕಲಾರದೆಂದು ನಮ್ಮ ಮನಸ್ಸು ಸ್ವಲ್ಪವಾದರೂ ತಳಮಳವನ್ನು ತಂದುಕೊಂಡೊಡನೆ ಸದ್ಗುರು ಮೈದೋರುವನು. ಅವನು ತಿಳಿಸಿಕೊಡುವಷ್ಟು ನಿತ್ಯಸುಖಕ್ಕೆ ಸಾಧನವಾದ ಪರಮಾತ್ಮವಿದ್ಯೆ. ನಿತ್ಯ ಸುಖವು ಬ್ರಹ್ಮಜ್ಞಾನದ ಹೊರತು ಎರಡನೆಯ ಯಾವುದರಿಂದಲೂ ಬರುವದಿಲ್ಲ. ಏಕೆಂದರೆ ಎರಡನೆಯ ಯಾವುದೂ ನಿತ್ಯವೇ ಅಲ್ಲ. ಅನಿತ್ಯವಾದ ಬ್ರಹ್ಮದ ಪರಿಚಯವನ್ನು ಮಾಡಿಕೊಡುವದೇ ಸದ್ಗುರುವಿನ ಸದ್ಗುರುತ್ವ.

ಈಗ ಸತ್ ಎಂಬ ಶಬ್ದದ ಮೂರು ಅರ್ಥಗಳನ್ನೂ ಸದ್ಗುರುವಿಗೆ ಅನ್ವಯಿಸಿ ನೋಡಿ. ಸತ್ ಶಬ್ದಕ್ಕೆ ಬ್ರಹ್ಮವೆಂಬ ಅರ್ಥವನ್ನಿಟ್ಟುಕೊಂಡರೆ ಬ್ರಹ್ಮವನ್ನು ತಿಳಿಸಿ ಕೊಡುವ ಗುರುವೆಂದಾಗುತ್ತದೆ. ಆ ಬ್ರಹ್ಮಸ್ವರೂಪವನ್ನು ಇತರರಿಗೆ ತಿಳಿಸಿಕೊಡ ಬೇಕಾಗಿದ್ದರೆ ಅದು ಅವನಲ್ಲಿ ಮಯ್ಯುಂಡುಕೊಂಡಿರಬೇಕಾಗುತ್ತದೆ. ಇದರಿಂದಲೇ ಅವನು ಬ್ರಹ್ಮಸ್ವರೂಪನಾದ ಗುರುವೆಂದರೂ ಶೋಭಿಸುತ್ತದೆ. ಸತ್ ಶಬ್ದಕ್ಕೆ ಯಾವಾಗಲೂ ಇರುವದೆಂಬ ಅರ್ಥವನ್ನಿಟ್ಟುಕೊಂಡರೆ ಯಾವಾಗಲೂ ಏಕರೂಪವಾಗಿರುವ ಜ್ಞಾನ ವನ್ನು ಎಂದಿದ್ದರೂ ಒಂದುದಿನ ಸಾಯುವಂಥವರಾದ್ದರಿಂದ, ಇವನು ತನ್ನ ಜ್ಞಾನ ಸ್ವರೂಪದಲ್ಲಿ ಯಾವಾಗಲೂ ಏಕರೂಪವಾಗಿ ಇದ್ದೇ ಇರುವ ಮಹಿಮೆಯುಳ್ಳ ಗುರು ಎನ್ನಬಹುದು. ಇನ್ನು ಯೋಗ್ಯವಾದ ಎಂಬ ಕೊನೆಯ ಅರ್ಥವನ್ನಿಟ್ಟುಕೊಂಡರೆ ಬ್ರಹ್ಮಜ್ಞಾನವೇ ಮನುಷ್ಯನು ಪಡೆಯಬೇಕಾದ ಪರಮಾರ್ಥವಾದ್ದರಿಂದ ಯೋಗ್ಯವೆಂಬ ಶಬ್ದಕ್ಕೆ ಅರ್ಹವಾಗುವದು. ಲೌಕಿಕವಿಚಾರಗಳನ್ನು ಪಡೆಯಬಾರದಂತ ಅಲ್ಲ; ಪಡೆಯ ಬಹುದು. ವಿಷಯಗಳೆಲ್ಲ ಕ್ಷಣಕ್ಕೊಂದೊಂದು ವಿಕಾರವಾಗುವವುಗಳೆಂಬರ್ಥವನ್ನು ಮನಗಾಣುವ ಪ್ರಯೋಜನವನ್ನು ಪಡೆಯುವುದಕ್ಕಾಗಿ ಅವುಗಳನ್ನು ಸಂಗ್ರಹಿಸಬಹುದು. ಈ ಉಪಯೋಗವನ್ನು ಮಾಡಿಕೊಳ್ಳದೆ ಆ ವಿಷಯಗಳಿಂದಲೇ ಸುಖವನ್ನು ಪಡೆಯ ಬೇಕೆಂದು ತಿಳಿದು ಕೈ ತುಡುಕುವದು ನೆಲಗುದ್ದಿ ಮೈನೋಯಿಸಿಕೊಂಡ ಹಾಗೆಯೇ ಸರಿ. ಎಲ್ಲಾ ವಿಷಯಜ್ಞಾನಗಳೂ ಬ್ರಹ್ಮಜ್ಞಾನದಲ್ಲಿ ಪರ್ಯವಸಾನವಾದರೆ ಮಾತ್ರವೇ ಸುಖದ ಆಸೆ. ಸದ್ಗುರು ಅಂಥ ಬ್ರಹ್ಮಜ್ಞಾನವನ್ನುಪದೇಶ ಮಾಡುವದರಿಂದ ಅವನ ಬೋಧನೆಗೆ ಯೋಗ್ಯವೆಂಬ ವಿಶೇಷಣವು ಸಾರ್ಥಕವಾಗುವದು. ಹೀಗೆ ಸರ್ವವಿಧ ದಿಂದಲೂ ಸದ್ಗುರು ಸ್ವರೂಪದಲ್ಲಿ ಮಹತ್ತ್ವವು ಎದ್ದು ಕಾಣುತ್ತಿರುವದು.

## ಗುರುವಿನ ಗುರ್ತನ್ನು ತಿಳಿಯುವ ಅವಶ್ಯಕತೆ

ಈ ಸದ್ಗುರುಗಳ ಮಹತ್ತ್ವದ ವಿಷಯವನ್ನು ಮನಗಾಣಿಸಿದ್ದಾಗಿದೆಯಷ್ಟೆ. ಅದರ ಮುಂದೆಯೇ ಸದ್ಗುರುಗಳ ಲಕ್ಷಣದ ವಿಚಾರ ವನ್ನು ಮಾಡಬೇಕಾಗುವದು. ಏಕೆಂದರೆ ಯಾವದಾದರೊಂದು ಪದಾರ್ಥದ ಹೆಚ್ಚುಗಾರಿಕೆಯು ನಮಗೆ ತಿಳಿದೊಡನೆಯೇ ಸ್ವಭಾವವಾಗಿಯೇ ನಾವು ಅದನ್ನು ಪಡೆಯುವ ಪ್ರಯತ್ನವನ್ನು ಮನಸ್ಸಿಗೆ ತಂದುಕೊಂಡು ಅದನ್ನು ಗುರ್ತಿಸುವದು ಹೇಗೆಂದು ಮೊದಲು ತಿಳಿದುಕೊಳ್ಳುತ್ತೇವೆ. ಅದನ್ನು ಗುರ್ತಿಸುವದಕ್ಕೆ ಬೇಕಾದ ಲಕ್ಷಣಗಳು ನಮಗೆ ತಿಳಿಯದೆ ಇದ್ದರೆ ನಮಗೆ ಅದನ್ನು ಹುಡುಕಿಕೊಂಡು ಹೋಗುವ ಧೈರ್ಯವೂ ಬರುವದಿಲ್ಲ. ಒಂದು ಪಕ್ಷ ನಾವುಹುಡುಕುವ ವಸ್ತುವಿನ ಹೆಸರನ್ನೇ ಹೇಳಿ ಯಾರಾದರೂ

ಒಂದು ಪದಾರ್ಥವನ್ನು ನಮ್ಮ ಮುಂದಿಟ್ಟರೆ ನಮಗೆ ಬೇಕಾದ ಪದಾರ್ಥವು ಅದೇ ಅಹುದೋ ಅಲ್ಲವೋ ಎಂಬುದನ್ನು ತಿಳಿಯುವ ಯೋಗ್ಯತೆಯು ನಮ್ಮಲ್ಲಿಲ್ಲದ್ದರಿಂದ ನಾವು ಕ್ಷುದ್ರವಾದ ಪದಾರ್ಥವನ್ನೇ ಮಹತ್ತ್ವದ್ದೆಂದು ನಂಬಿ ಮೋಸ ಹೋಗಲೂ ಬಹುದು ಅಥವಾ ಅದು ನಿಜವಾಗಿ ಮಹತ್ತ್ವದ ಪದಾರ್ಥವಾಗಿದ್ದರೂ ಕ್ಷುದ್ರವೆಂಬ ಸಂಶಯದಿಂದ ಅದನ್ನು ಉಪೇಕ್ಷಿಸಲೂಬಹುದು. ಈ ಅನರ್ಥವು ಆಗದೆ ಇರ ಬೇಕಾದರೆ ನಮಗೆ ಬೇಕಾದ ಪದಾರ್ಥದ ಲಕ್ಷಣವನ್ನು ನಾವು ಚೆನ್ನಾಗಿ ತಿಳಿದು ಕೊಂಡಿರಬೇಕು. ಈ ನಡವಳಿಕೆಯು ಸದ್ಗುರುಗಳ ವಿಷಯಕ್ಕೂ ಅನ್ವಯಿಸುವದು.

ಹೇಗೆಂದರೆ, ಸದ್ಗುರುಗಳ ಮಹತ್ತ್ವವನ್ನು ನಾವು ಮನಗಂಡೊಡನೆಯೇ ಸ್ವಭಾವವಾಗಿಯೇ ನಾವು ಅವರ ಆಶ್ರಯವನ್ನು ಪಡೆಯುವ ಪ್ರಯತ್ನವನ್ನು ಮನಸ್ಸಿಗೆ ತಂದುಕೊಳ್ಳಲೇಬೇಕಾಗುತ್ತದೆ. ಸದ್ಗುರುಗಳ ಮಹತ್ತ್ವವನ್ನು ಕೇಳುವಷ್ಟೆಲ್ಲಾ ಕೇಳಿ ಹೂಗುಟ್ಟಿ ಅದನ್ನು ಮನಸ್ಸಿಗೆ ಅಂಟಿಸಿಕೊಳ್ಳದೆ ನಿರ್ಲೇಪರಾಗಿ ಎದ್ದು ಹೋಗು ವವರು ಕೆಲವರಿರಬಹುದು. ಅಂಥವರು ಇಲ್ಲಿ ಉದಾಹರಣೆಗೆ ಯೋಗ್ಯರಲ್ಲ. ಅಧ್ಯಾತ್ಮ ವಿಚಾರವು ವಿನೋದ ಕಾಲಕ್ಷೇಪವಲ್ಲ. ವೇದಾಂತವು ಹೊತ್ತು ಹೋಗದವರಿಗೆ ಹೇಳುವ ಮಾತುಗಳಲ್ಲ. ಇದನ್ನರಿತೇ ಕೆಲವು ವೇದಾಂತ ಗ್ರಂಥಗಳಲ್ಲಿ ಇದನ್ನು ಇಂಥಿಂಥವರಿಗೆ ಹೇಳಬಾರದೆಂದು ಉಲ್ಲೇಖವಿರುತ್ತದೆ. ಪರಮಕಾರುಣಿಕ ನಾದ ಭಗವಂತನು ಕೂಡ ಭಗವದ್ಗೀತೆಯಲ್ಲಿ

**‘‘ಇದಂ ತೇ ತನಾತಪಸ್ಕಾಯ ನಾಭಕ್ತಾಯ ಕದಾಚನ।**
**ನ ಚಾಶುಶ್ರೂಷವೇ ವಾಚ್ಯಂ ನ ಚ ಮಾಂ ಯೋಽಭ್ಯ ಸೂಯತಿ ॥’’**

ಎಂದರೆ ಅರ್ಜುನ, ನಿನಗೆ ನಾನು ಇಷ್ಟು ಹೊತ್ತಿನವರೆಗೂ ಹೇಳಿದಂಥ ಈ ಉಪದೇಶವನ್ನು ತಪಸ್ವಿಯಲ್ಲದವನಿಗೂ ಭಕ್ತನಲ್ಲದವನಿಗೂ ಕೇಳಲಿಚ್ಛೆಯಿಲ್ಲದವನಿಗೂ ದೇವರ ವಿಷಯದಲ್ಲಿ ಅಸೂಯೆಯುಳ್ಳವನಿಗೂ ಎಂದಿಗೂ ಹೇಳಬೇಡ - ಎಂದು ಎಚ್ಚರಿಕೆಯನ್ನು ಕೊಟ್ಟಿದ್ದಾನೆ. ಯೋಗ್ಯರಾದವರು, ಅನಧಿಕಾರಿಗಳಿಗೆಂದಿಗೂ ಉಪದೇಶವನ್ನು ಮಾಡುವದಿಲ್ಲ. ಇನ್ನೇನು ! ಯೋಗ್ಯರಾದವರನ್ನು ಕುರಿತು ಉಪದೇಶವನ್ನು ಮಾಡುವಾಗ ಸಂದಿಯಲ್ಲಿ ಹೇಗೋ ಅದು ಅಯೋಗ್ಯರ ಕಿವಿಗೂ ಬೀಳಬಹುದು. ಅದು ಅವರ ಪೂರ್ವಜನ್ಮದ ಯಾವದೋ ಒಂದು ಪುಣ್ಯದ ಫಲ. ಅಧಿಕಾರಿಗಳಾದವರಂತು ಸದ್ಗುರುಗಳ ಮಹತ್ತ್ವವನ್ನು ಕೇಳುತ್ತಲೇ ಸದ್ಗುರುಗಳನ್ನು ಹುಡುಕಿಕೊಂಡೇ ಹೊರಡುವರು. ಹೀಗೆ ಹೊರಡುವದೇ ಸದ್ಗುರುಗಳ ಮಹತ್ತ್ವವನ್ನು ಮನಗಂಡದ್ದಕ್ಕೆ ಗುರ್ತು. ಇದಕ್ಕೆ ಇತಿಹಾಸದಲ್ಲಿ ಅನೇಕ ಉದಾಹರಣೆಗಳುಂಟು.

ಶಿವಾಜಿ ಮಹಾರಾಜನಿಗೆ ಬಾಲ್ಯದಲ್ಲಿ ಪುರಾಣಕಾಲಕ್ಷೇಪವೆಂದರೆ ಪಂಚಪ್ರಾಣವಾಗಿತ್ತು. ಒಂದು ದಿವಸ ಪುರಾಣವನ್ನು ಕೇಳುತ್ತಿದ್ದಾಗ ಪುರಾಣಿಕನು ಸದ್ಗುರುಗಳ ಮಹತ್ತ್ವವನ್ನು ಕುರಿತು ಒಳ್ಳೇ ಅಧಿಕಾರಯುಕ್ತವಾಣಿಯಿಂದ ಪ್ರತಿಪಾದನೆಯನ್ನು ಮಾಡಿದನು. ಈ ಉಪದೇಶವು ಶಿವಾಜಿಯ ಅಂತಃಕರಣವನ್ನು ಕಚ್ಚಿ ಹಿಡಿಯಿತು. ಅಂದಿನಿಂದಲೂ ಸದ್ಗುರುಗಳನ್ನು ಹುಡುಕುವ ಯತ್ನವನ್ನು ಮಾಡಿಯೇ ಮಾಡಿದನು. ಶಿವಾಜಿಯು ಎಷ್ಟೇ ದೈವಿಕ ಸಂಪತ್ತಿನ ಮನುಷ್ಯನಾದರೂ ಅವನ ಮನಸ್ಸು ಬಾಹ್ಯ ಸ್ಥಿತಿಯ ಉದ್ಧಾರದ ಕಡೆಗೆ ಹೆಚ್ಚು ಹರಿದಾಡುತ್ತಿದ್ದುದರಿಂದ ಸದ್ಗುರುಗಳನ್ನು ಹುಡುಕುವ ಕೆಲಸದ ತೀವ್ರತೆಯು ಮುಗಿಲುಮುಟ್ಟಲಿಲ್ಲ. ಆದರೂ ಶಿವಾಜಿಯು ಸಾಮಾನ್ಯನೇನೂ ಆಗಿರಲಿಲ್ಲ. ಉಳಿದವರಿಗಿಂತ ಎಷ್ಟೋ ಪಾಲು ಮೇಲೆನ್ನುವ ಹಾಗೆ ತನ್ನ ಸರ್ವಸಾಹಸವನ್ನೂ ಮಾಡಿ ಗುರುಗಳ ಅನುಗ್ರಹಕ್ಕೆ ಪಾತ್ರನಾದನು. ಆತ್ಮೋನ್ನತಿಯೇ ಮುಖ್ಯವಾದ ಲಕ್ಷ್ಯವಾಗಿ ಉಳ್ಳವರ ಮನಸ್ಸಿನಲ್ಲಿ ಇಂಥ ಉಪದೇಶವು ಬಹು ಚೆನ್ನಾಗಿ ಒಡೆದು ಮೂಡುವದು. ಈ ಪರಿಸ್ಥಿತಿಗೆ ಏಕನಾಥಾಸಾಧುಗಳನ್ನು ಉದಾಹರಿಸಬಹುದು. ಏಕನಾಥರಿಗೂ ಪುರಾಣ ಕಾಲ ಕ್ಷೇಪವು ಜೀವನಸರ್ವಸ್ವವಾಗಿತ್ತು. ಅದನ್ನೆಲ್ಲಾ ಕೇಳಿದ್ದು ಮುಗಿಯುತ್ತಲೇ ಅವರು ಮನಗೆ ಹೊರಡಲೇ ಇಲ್ಲ. ಸಾಧುಶಿರೋಮಣಿಗಳಾದ ಜನಾರ್ದನಸ್ವಾಮಿಗಳ ಹೆಸರುವಾಸಿಯು ಚಿತ್ರವು ಅವರ ಹೃದಯವೆಂಬ ಕನ್ನಡಿಯಲ್ಲಿ ಚೆನ್ನಾಗಿ ಪ್ರತಿಬಿಂಬಿಸಿತ್ತು. ಆಗ ಅವರಿಗೆ ಇನ್ನೂ ಎಂಟೇ ವರ್ಷ ವಯಸ್ಸು. ಆಗ ತಾನೇ ಉಪನಯನವಾಗಿದೆ. ಅವರ ಶರೀರವು ಬಾಲ್ಯದಲ್ಲಿದ್ದರೂ ಹೃದಯವು ಬಾಲ್ಯದಲ್ಲಿರಲಿಲ್ಲ. ಪೂರ್ವಸಂಸ್ಕಾರದಿಂದ ಅದು ಪರಿಪಕ್ವಸ್ಥಿತಿಗೆ ಬಂದಿತ್ತು. ಆ ಚಿಕ್ಕ ವಯಸ್ಸಿನಲ್ಲಿ ಏಕನಾಥರು ತಮ್ಮ ಉದ್ದೇಶವನ್ನು ಕುರಿತು ಯಾರ ಮುಂದೆಯೂ ಬಾಯಿಬಿಡದೆ,

**''ದೇಹಂ ವಾ ಪಾತಯಾಮಿ ಕಾರ್ಯಂ ವಾ ಸಾಧಯಾಮಿ''**

ಎಂದರೆ ಸಾಯುತ್ತೇನೆ ಅಥವಾ ಉದ್ದೇಶವನ್ನು ಸಾಧಿಸುತ್ತೇನೆ ಎಂದು ಹಠವನ್ನು ತೊಟ್ಟು ಆ ದಿವಸವೇ ದಾರಿಯನ್ನು ಹಿಡಿದು ತಮ್ಮ ಪ್ರಯತ್ನವನ್ನು ಕೊನೆಗಾಣಿಸಿಯೇಬಿಟ್ಟಿದ್ದಾರೆ. ಬಾಲ್ಯದಲ್ಲಿ ಧ್ರುವನು ದೇವರನ್ನು ಹುಡುಕಿಕೊಂಡು ಹೋದ ಕಥೆಯು ಪುರಾಣದಲ್ಲಿದೆ. ಅದು ಕಟ್ಟುಕಥೆ ಇರಬಹುದೆಂದು ಕಿಸುಗಣ್ಣಿನಿಂದ ನೋಡುವವರು ಈ ಇತಿಹಾಸದ ಕಡೆಗೊಂದು ಕಣ್ಣು ಹಾಕಿ ನೋಡಲಿ. ತನ್ನ ಕಾರ್ಯವು ದೇವರಿಂದ ಸಾಧ್ಯವಾಗತಕ್ಕದ್ದೆಂದು ತಿಳಿದೊಡನೆಯೇ ಧ್ರುವನು ಹೇಗೆ ದೇವರನ್ನು ಕಾಣುವದಕ್ಕೆ ಹೊರಟನೋ ತನ್ನ ಆತ್ಮೋನ್ನತಿಯು ಜನಾರ್ದನಪಂತ

ರಿಂದಾಗತಕ್ಕದ್ದೆಂದು ತಿಳಿದೊಡನೆಯೇ ಏಕನಾಥರು ಹಾಗೆಯೇ ಸದ್ಗುರುವನ್ನು ಕಾಣುವದಕ್ಕೆ ಹೊರಟರು. ತನ್ನ ಕಾರ್ಯವು ದೇವರಿಂದಲೇ ಸಾಧ್ಯವಾಗತಕ್ಕದ್ದೆಂಬ ಮಾತು ಬಹುಜನರ ಕಿವಿಗೆ ಬಿದ್ದಿರಬಹುದು. ಅದನ್ನು ನಿಜವಾಗಿ ತಿಳಿದುಕೊಂಡವನು ಧ್ರುವನೊಬ್ಬನೆ. ಆತ್ಮೋನ್ನತಿಯು ಸದ್ಗುರುವಿನಿಂದಾಗುವದೆಂದು ಎಲ್ಲರೂ ಶ್ರವಣ ಮಾಡಿರಬಹುದು. ಅದನ್ನು ಮನಗಂಡವರು ಏಕನಾಥರೊಬ್ಬರೆ. ಅವರಿಬ್ಬರೂ ಒಡನೆಯೇ ತಮ್ಮ ಪ್ರಯತ್ನವನ್ನು ಮುಂದುವರಿಸಿದರು. ಉಳಿದವರೆಲ್ಲ ಒಂದು ಕಿವಿಯಲ್ಲಿ ಕೇಳಿ ಇನ್ನೊಂದು ಕಿವಿಯಲ್ಲಿ ಬಿಟ್ಟವರು.

ಇಂಥ ಉಪದೇಶಗಳನ್ನು ಉಪೇಕ್ಷೆ ಮಾಡುವವರೇ ಬಹುಜನಗಳಿರುವದರಿಂದ ಇದರ ಪ್ರಸಾರಕ್ಕೆ ಯತ್ನವನ್ನು ಮಾಡುವದು ಉಪಯೋಗವಿಲ್ಲವೆಂದು ಕೆಲವರು ಭಾವಿಸಬಹುದು. ಒಂದುಪಕ್ಷ ಈ ಮಾತನ್ನು ಈಗ ಪಶ್ಚಿಮದೇಶಕ್ಕೆ ಅಂಟಿಸಬಹುದು. ಧರ್ಮಭೂಮಿಯಾದ ಭರತಖಂಡವು ಇನ್ನೂ ಅಷ್ಟು ನಿರ್ವೀರ್ಯವಾಗಿಲ್ಲ. ದ್ರೌಪದಿಯ ಸ್ವಯಂವರಕಾಲದಲ್ಲಿ ಮತ್ಸ್ಯಯಂತ್ರವನ್ನು ಭೇದಿಸಲಾರದೆ ರಾಜಾಧಿರಾಜರೆಲ್ಲರೂ ಕೈಸಾರಿ ಕುಳಿತಿದ್ದಾಗ ಬ್ರಾಹ್ಮಣರ ಗುಂಪಿನಿಂದಲೇ ಅರ್ಜುನನು ಎದ್ದು ತನ್ನ ಕೈಚಳಕವನ್ನು ತೋರಿಸಿ ತನ್ನ ಯಶಸ್ಸನ್ನೂ ಸುವರ್ಣಾಕ್ಷರಗಳಲ್ಲಿ ಮೂಡಿಸಿರುವನು. ಆ ಸಭೆಯಲ್ಲಿ ವೇಷಾಂತರದಲ್ಲಿದ್ದ ಅರ್ಜುನನಂತೆ ಈಗಲೂ ಸಮರ್ಥರಾದ ಜನರು ತಮ್ಮ ಪ್ರತಿಭೆಯನ್ನು ಹೊರಕ್ಕೆ ತೋರಗೊಡದೆ ಇರಬಹುದು. ಅರ್ಜುನನೊಬ್ಬನಿಂದ ಆಗ ಭರತ ಭೂ ದೇವಿಯು ಹೇಗೆ ವೀರಮಾತೆಯೆನಿಸಿಕೊಂಡಳೋ ಹಾಗೆ ಪರಮಾರ್ಥದಲ್ಲಿ ನಿಜ ವಾದ ಬಾಯಾರಿಕೆಯುಳ್ಳವನೊಬ್ಬನಿದ್ದರೂ ಸಾಕು, ಧರ್ಮ ಪುರುಷನಿಗೆ ತಕ್ಕ ಪ್ರತಿಷ್ಠೆಯುಂಟಾಗುವದು. ಆದ್ದರಿಂದ ವೇದಾಂತದ ಉಪದೇಶವೆಲ್ಲ ಅಂಥ ಒಬ್ಬನನ್ನು ಕುರಿತೇ ಇರುವದು. ಹೀಗೆಂದು ಎಲ್ಲರೂ ತಮ್ಮನ್ನು ಅದಕ್ಕೆ ಹೊರತು ಮಾಡಿಕೊಳ್ಳಬಾರದು. ಅದು ಹೇಡಿತನ. ಪ್ರತಿಯೊಬ್ಬನೂ ಆ ಒಬ್ಬನಾಗುವದಕ್ಕೆ ತನ್ನ ಸರ್ವಸಾಹಸವನ್ನೂ ಮಾಡಬೇಕು. ಭರತಖಂಡದ ಖ್ಯಾತಿಯೇ ಧರ್ಮ ಮೂಲಕವಾದದ್ದು. ಪಶ್ಚಿಮದೇಶವು ಭೌತಿಕ ಶಾಸ್ತ್ರದ ವಿಮರ್ಶೆಯಿಂದ ಜನರ ಪ್ರಾಣಾಪಹಾರಕವಾದ ಮದ್ದುಗುಂಡುಗಳ ಹೊಸಹೊಸ ಬಗೆಗಳನ್ನು ಕಂಡು ಹಿಡಿಯುತ್ತಿರುವಾಗಲೂ ಭರತಖಂಡವು ಧರ್ಮಪ್ರಿಯರಾದ ತನ್ನ ಮಕ್ಕಳನ್ನು ಎಲ್ಲ ಕಡೆಗೂ ಕಳುಹಿಸಿ ಸಮಸ್ತರಿಗೂ ಮರಣದ ಭಯವು ತಪ್ಪುವಂಥ ದೇಹಾತಿರಿಕ್ತಾತ್ಮ ಜ್ಞಾನವನ್ನು ಸೂರೆಮಾಡುತ್ತಿದೆ. ಮೊನ್ನೆಮೊನ್ನೆ ತಾನೆ ಸ್ವಾಮಿ ವಿವೇಕಾನಂದರೂ ಸ್ವಾಮಿ ರಾಮತೀರ್ಥರೂ ಈ ಬಗೆಯ ಬೆಳಕನ್ನು ಹತ್ತು ದಿಕ್ಕುಗಳಿಗೂ ಬೀರಿರುತ್ತಾರೆ. ಈ ಉದ್ಯೋಗವನ್ನು ಮಾಡುವದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವು. ಆದ್ದರಿಂದ

ತೀರ್ಥರೂಪವಾದ ಧರ್ಮಾಮೃತವನ್ನು ಕೊಡುವಂಥ ಸದ್ಗುರುವನ್ನು ಹುಡುಕಿ ಅದರಿಂದ ತಾನೂ ಕೃತಾರ್ಥನಾಗಿ ಇತರರನ್ನೂ ಕೃತಾರ್ಥರನ್ನಾಗಿ ಮಾಡುವದಕ್ಕೆ ಪ್ರತಿಯೊಬ್ಬನೂ ಬದ್ಧನಾಗಿದ್ದಾನೆ. ಆದ್ದರಿಂದ ಈ ಉಪದೇಶವನ್ನು ಯಾರೂ ಉಪೇಕ್ಷೆಮಾಡಬಾರದು. ಪ್ರತಿಯೊಬ್ಬನೂ ತನ್ನ ಧರ್ಮಾಭಿಮಾನಪ್ರಭಾವದಿಂದ ತನ್ನ ಭಾರತ ಪುತ್ರತ್ವ ಸಾರ್ಥಕಮಾಡಿಕೊಳ್ಳುವದಕ್ಕೆ ಹೆಣಗಬೇಕು. ಯಾವನು ಇಂತಹ ಪ್ರಯತ್ನದಲ್ಲಿ ಮುಂದುವರಿಯುವನೋ ಅವನ ಜನ್ಮವು ಮಾತ್ರ ಸಾರ್ಥಕವು.

ನಾವು ಸದ್ಗುರುವಿನ ಮಹತ್ತ್ವವನ್ನು ಮನಗಂಡದ್ದಕ್ಕೆ ಗುರ್ತೇನೆಂದರೆ ಸದ್ಗುರುವಿನ ಲಕ್ಷಣವನ್ನು ತಿಳಿದುಕೊಳ್ಳಬೇಕೆಂಬ ಉತ್ಸಾಹವುಳ್ಳವರಾಗುವದು. ಸದ್ಗುರುವಿನ ಲಕ್ಷಣವನ್ನು ತಿಳಿದುಕೊಂಡರೆ ಅವರನ್ನು ಹುಡುಕಿಕೊಂಡು ಹೊರಡುವದಕ್ಕೆ ನಮಗೆ ಧೈರ್ಯವಾಗುತ್ತದೆ. ಸದ್ಗುರುವಿನ ಲಕ್ಷಣವೇ ತಿಳಿಯದಿದ್ದರೆ ನಾವು ಹೋದ ಕಡೆ ಸದ್ಗುರುಲೋಕದಲ್ಲಿ ರತ್ನವನ್ನೂ ಇಲ್ಲೆಂದು ಕರೆಯುವದುಂಟು. ಅದು ನಿಜವಾಗಿಯೂ ಕಲ್ಲೆ; ಕಾಡುಗಲ್ಲನ್ನೂ ಕಲ್ಲೆಂದು ಕರೆಯುವದುಂಟು. ಆದಂತು ಕಲ್ಲೆ. ಆದರೆ ರತ್ನಗಳು ಕಾಡುಕಲ್ಲಿನಷ್ಟು ಅಗ್ಗವಾಗಿರುವದಿಲ್ಲ. ರತ್ನದ ಕಲ್ಲನ್ನು ಬಯಸುವವನೊಬ್ಬನು ಅದನ್ನು ಹುಡುಕಿಕೊಂಡು ಹೊರಟರೆ ಕಲ್ಲಿನ ಪರೀಕ್ಷೆ ತಿಳಿಯದ್ದರಿಂದ ಏನೋ ಒಂದು ಹೊಳಪುಳ್ಳ ಕಾಡುಗಲ್ಲನ್ನೇ ರತ್ನವೆಂದು ಕೊಂಡುಕೊಂಡು ಮೋಸ ಹೋಗುವಂಥವರೇ ಹೆಚ್ಚಾಗಿರುವಂತೆ ಸದ್ಗುರುವನ್ನು ಬಯಸುವನು ಅವರನ್ನು ಹುಡುಕಿ ಕೊಂಡು ಹೊರಟರೆ ಅವನಿಗೆ ಸದ್ಗುರುವಿನ ಲಕ್ಷಣವು ತಿಳಿಯದಿದ್ದರೆ ಸದ್ಗುರುವೆಂಬ ಹೆಸರಿಂದ ವ್ಯವಹರಿಸುತ್ತಿರುವ ಯಾವನೋ ಒಬ್ಬ ಮೂಢನನ್ನೇ ಸದ್ಗುರುವೆಂದು ನಂಬಿ ಮೋಸಹೋಗುವ ಸಂಭವವು ಹೆಚ್ಚಾಗಿರುವದು. ಅಥವಾ ಒಂದುಪಕ್ಷ ನಿಜವಾದ ಸದ್ಗುರು ದೊರೆತರೂ ಅವನ ಲಕ್ಷಣಗಳು ತಿಳಿಯದ್ದರಿಂದ ಸಂಶಯ ಬುದ್ಧಿಯಿಂದ ಅವನ ಸಹಾಯವನ್ನು ಕಳೆದುಕೊಳ್ಳಲೂಬಹುದು. ಈ ಅನರ್ಥವು ಆಗದೆ ಇರಬೇಕಾದರೆ ನಾವು ಸದ್ಗುರುವಿನ ಲಕ್ಷಣವನ್ನು ಚೆನ್ನಾಗಿ ತಿಳಿದುಕೊಂಡಿರಬೇಕು.

*****

# 6. ಜಗತ್ತಿನಲ್ಲಿರುವ ದೇವರ ಸ್ವರೂಪ

ದೇವರೊಬ್ಬನಿರುವನೆಂದೂ ಅವನು ಎಲ್ಲೆಲ್ಲಿಯೂ ತುಂಬಿರುವನೆಂದೂ ಹೇಗೋ ಜನರಲ್ಲೆಲ್ಲ ನಂಬಿಕೆಯೇ ಎಷ್ಟೋ ಹಿಂದಿನಿಂದ ಇದ್ದುಬಿಟ್ಟಿದೆ. ಆ ದೇವರ ಸ್ವರೂಪವೇನೆಂದೂ ಅವನಿಗೂ ತಮಗೂ ಇರುವ ಸಂಬಂಧವೆಂಥದ್ದೆಂದೂ ವಿಚಾರಮಾಡಿ ಮನಗಾಣುವದಕ್ಕೆ ಹೊರಡುವವರು ಬಹು ಕಡಿಮೆ. ಏಕೆಂದರೆ ದೇವರನ್ನು ಕಾಣುವದೆಂಬುದು ಸಾಮಾನ್ಯವಾಗಿ ನಿರಾಶೆಯ ಮಾತಾಗಿ ಪರಿಣಮಿಸುತ್ತ ಬಂದಿದೆ. ನಮ್ಮ ಜನಾಂಗದ ತೀರ ಬುಡಕಟ್ಟಿಗೆ ಹೋದರೆ ಆಗಿನವರು ಒಂದೇದೇವರ ವಿಚಾರದಲ್ಲಿಯೇ ಮುಳುಗಿ ತೇಲುತ್ತಿದ್ದವರಾಗಿದ್ದರು. ಆದ್ದರಿಂದ ದೇವರು ಅವರ ಮುಂದೆ ಕಾಣಿಸಿಕೊಂಡು ಅವರ ತಾಳಕ್ಕೆ ಸರಿಯಾಗಿ ಬೇಕುಬೇಕಾದ ಹಾಗೆ ಕುಣಿದಾಡಿರಬಹುದು. ಆದ್ದರಿಂದಲೇ ಆಗಿನಿಂದ ದೇವರೊಬ್ಬನಿರುವನೆಂಬ ನಂಬಿಕೆಯು ನಮ್ಮಲ್ಲಿ ಚೆನ್ನಾಗಿ ಬೇರುಬಿಟ್ಟುಕೊಂಡಿದೆ. ಅದು ಈಗ ಬರೀ ನಂಬಿಕೆಯಾಗಿ ಮಾತ್ರವೇ ಉಳಿದುಕೊಂಡಿರುವದಕ್ಕೆ ನಾವು ಆ ವಿಷಯದಲ್ಲಿ ಮುಂದುವರಿದಿರುವದೇ ಕಾರಣ. ನಾವು ದೇವರನ್ನು ಕಾಣಬೇಕೆಂದು ಸರಿಯಾದ ದೃಷ್ಟಿಯನ್ನು ಹಾಕಿ ಹುಡುಕಿದರೆ ಈ ದಿನವೇ ಈಗಲೇ ಅವನನ್ನು ಕಂಡು ಆ ಸುಖದಲ್ಲಿ ಓಲಾಡುತ್ತಿರುವವರು ಈ ಕ್ಷಣಕ್ಕೂ ಬದುಕಿದ್ದಾರೆ. ಅವರು ಎಲ್ಲರಿಗೂ ಅವನನ್ನು ತೋರಿಸುತ್ತೇವೆಂಬ ಕೆಚ್ಚೆದೆಯವರಾಗಿದ್ದಾರೆ. ಬಹು ಹಿಂದಿನ ಕಾಲದಂತೆ ಅವರು ಸಮೃದ್ಧಿಯಾಗಿಲ್ಲವೇ ಹೊರತು ತೀರ ಇಲ್ಲವೇ ಇಲ್ಲವೆನ್ನುವ ಹಾಗಿಲ್ಲ. ದೇವರನ್ನು ನೋಡಬೇಕೆಂಬ ಬಯಕೆಯುಳ್ಳವರೇ ಇಲ್ಲದ ಬರಗಾಲವಾದ್ದರಿಂದ ಈಗ ಅವರ ಹೆಸರುವಾಸಿ ಹೆಚ್ಚಿಗೆ ಹರಿದಿಲ್ಲ. ಇರಲಿ.

ದೇವರು ಎಲ್ಲೆಲ್ಲಿಯೂ ತುಂಬಿರುವನೆಂಬ ಒಂದು ಬಗೆಯ ಕುರುಡುನಂಬಿಕೆ ನಮ್ಮಲ್ಲಿ ಇದ್ದುಕೊಂಡಿರುವದಷ್ಟೆ? ಅದನ್ನು ಚೆನ್ನಾಗಿ ಕೆದಕಿ ಅದರಮೇಲೆ ಕುಳಿತಿರುವ ಧೂಳನ್ನು ಹಾರತೊಡೆದು ನೋಡಿದರೆ ಅಲ್ಲಿಯೇ ನಮಗೆ ದೇವರ ಇರುವಿಕೆ ಕಾಣಬೇಕು. ನಮಗೆ ಉಂಟಾಗಿರುವ ನಂಬಿಕೆಗೆ ಬುಡವಿಲ್ಲದೆ ಇಲ್ಲ. ಆ ಕಡೆಗೆ ನಾವು ಬಹುಕಾಲದಿಂದ ಕಣ್ಣುಹಾಕದೆ ಇರುವದರಿಂದ ಅದನ್ನು ನಾವು ಕುರುಡು ನಂಬಿಕೆಯೆಂದು ಕರೆಯಬಹುದಾಗಿದೆಯೇ ಹೊರತು ಅದಕ್ಕೆ ಸತ್ಯದ ಆಧಾರವಿಲ್ಲದೇ ಇಲ್ಲ. ನಾವು ನಮ್ಮ ಸಾಮಾನ್ಯ ದೃಷ್ಟಿಯನ್ನು ಹಾಕಿದರೆ ಎಲ್ಲೆಲ್ಲಿಯೂ ದೇವರು ತುಂಬಿರುವನೆಂಬುದು ಕಾಣುವದಿಲ್ಲವೆಂಬುದಿಷ್ಟೇ ಅಲ್ಲ; ಎಲ್ಲೆಲ್ಲಿಯೂ ಜಗತ್ತು ತುಂಬಿರುವದೆಂದೇ ಕಾಣುವದು. ಜಗತ್ತೇ ದೇವರೊ? ಎಂದಿಗೂ ಅಲ್ಲ. ಗಳಿಗೆ ಗಳಿಗೆಗೂ ಬದಲಾವಣೆಯನ್ನು ಹೊಂದುತ್ತ ತನಗೆ ಶರಣೆಂದವರಿಗೆ ಸುಖದ ಮೇಲೆ

ದುಃಖವನ್ನೂ ದುಃಖದ ಮೇಲೆ ಸುಖವನ್ನೂ ಕೊಡುತ್ತ ಸ್ವತಂತ್ರನಾಗಿ, ನಿತ್ಯಶುದ್ಧನಾಗಿ, ಸರ್ವಜ್ಞನಾಗಿ, ಸರ್ವಶಕ್ತನಾಗಿರುವ ದೇವರ ಲಕ್ಷಣದ ಯಾವ ಗಂಧವೂ ತನಗೆ ಇಲ್ಲದೆ ಪರತಂತ್ರವಾಗಿ ಅಶುಚಿಯಾಗಿ ಜಡವಾಗಿರುವದು ದೇವರಾಗಲಾರದು. ಆ ಮುಖ್ಯದೇವರ ಅಧೀನದೇವರುಗಳಲ್ಲಿಯೇ ಈ ದುರ್ಲಕ್ಷಣಗಳೆಷ್ಟೋ ಕಡಿಮೆಯಾಗಿರುವಾಗ ಈ ಜಗತ್ತು ದೇವರೆನಿಸಿಕೊಳ್ಳಲಾರದು. ಜಗತ್ತು ದೇವರಲ್ಲ; ಜಗತ್ತೆಂಬುದು ದೇವರ ಮಹಿಮೆಯಿಂದ ಹುಟ್ಟಿರುವ ವಸ್ತುಸಮುದಾಯ. ಆದ್ದರಿಂದ ದೇವರು ಎಲ್ಲೆಲ್ಲಿಯೂ ತುಂಬಿರುವನೆಂಬ ನಂಬಿಕೆಯ ಮೇಲಿನ ಧೂಳನ್ನು ಹಾರಹೊಡೆಯುವರು ನಮ್ಮ ಸಾಮಾನ್ಯದೃಷ್ಟಿಗೆ ಸಾಗದ ಮಾತೆಂದು ಸಿದ್ಧವಾಯಿತು.

ನಮ್ಮ ಸಾಮಾನ್ಯದೃಷ್ಟಿಯ ಶಕ್ತಿಯು ಸಣ್ಣ ಪರಿಮಿತಿಯುಳ್ಳದ್ದು. ಇದು ಬಹು ಸ್ಥೂಲವಾದ ವಸ್ತುಗಳನ್ನು ನೋಡಬಲ್ಲದೇ ಹೊರತು ಸೂಕ್ಷ್ಮವಸ್ತುಗಳನ್ನು ನಿಲುಕಿಸಿಕೊಳ್ಳಲಾರದು. ಸೂಕ್ಷ್ಮವಸ್ತುಗಳನ್ನು ನೋಡುವಾಗ ಭೂತಗನ್ನಡಿಯನ್ನು ಉಪಯೋಗಿಸುವದುಂಟು. ಆ ಭೂತಗನ್ನಡಿಯು ತೋರಿಸುವ ವಸ್ತುಗಳು ಕೂಡ ನಮ್ಮ ಸಾಮಾನ್ಯದೃಷ್ಟಿಗೆ ಸೂಕ್ಷ್ಮವೇ ಹೊರತು ಅವುಗಳ ನಿಜಸ್ಥಿತಿಯಿಂದ ಸ್ಥೂಲವೆ. ಸ್ಥೂಲ, ಸೂಕ್ಷ್ಮ ಎಂಬ ಯಾವ ಭೇಧಭಾವಗಳೂ ಕಾಣದೆ ಇರುವಷ್ಟು ಸೂಕ್ಷ್ಮವಾದ ದೇವರು ಭೂತಗನ್ನಡಿಗೂ ಒಳಗಾಗುವದಿಲ್ಲ. ಹಾಗಾದರೆ ನಾವು ಅವನನ್ನು ಕಾಣುವದಕ್ಕೆ ಮಾರ್ಗವೇನೆಂದರೆ ಯಾವ ನಮ್ಮ ಪೂರ್ವಿಕರು ತಾವು ಆ ದೇವರ ಸ್ವರೂಪವನ್ನು ಕಂಡುಕೊಂಡು ಅದರ ಸುಖದ ಸುಗ್ಗಿಯನ್ನು ಅನುಭವಿಸುತ್ತ ಅದರ ಆನಂದದ ಭರದಲ್ಲಿ ದುಃಖಮಯವಾದ ಜಗತ್ತನ್ನು ಸುಖಮಯವಾಗಿ ಮಾರ್ಪಡಿಸಿಕೊಂಡರೊ ಆ ದೇವತಾಸ್ವರೂಪರಾದ ಮಹರ್ಷಿಗಳು ತಮ್ಮ ಅನುಭವವನ್ನೆಲ್ಲ ಅವರ ಮಡಿಲಿನ ಕೂಸುಗಳಾದ ನಮ್ಮ ಮೇಲಿನ ಕನಿಕರದಿಂದ ವೇದಗಳಲ್ಲಿ ತುಂಬಿಟ್ಟು ಪರದೆಯ ಹಿಂದಕ್ಕೆ ಸರಿದು ವಿಶ್ರಮಿಸಿಕೊಳ್ಳುತ್ತಿರುವರು. ಅವರು ಇಂಥ ಕಾಮಧೇನುವನ್ನು ಕೊಟ್ಟು ಹೋಗಿದ್ದರೂ ನಾವು ಅಮೃತಪ್ರಾಯವಾದ ಅದರ ಹಾಲಿನ ಒಂದು ಗುಟುಕನ್ನೂ ಹಿಂಡಿಕೊಳ್ಳದೆ ಅದನ್ನು ಕಡೆಗಂಡು ಹುಳಿಮಜ್ಜಿಗೆಯಂಥ ದುಃಖಮಿಶ್ರಿತ ಸುಖವನ್ನು ಕೊಡುವ ಹೊರವಿಷಯಗಳ ಮುಂದೆ ನಾಲಿಗೆಯ ನೀರನ್ನು ಸುರಿಸುತ್ತಿರುವೆವು. ನಾವು ನಮ್ಮ ಪೂರ್ವಿಕರನ್ನು ನೋಡಲಾರದಿದ್ದರೂ ದಿವ್ಯಜ್ಞಾನಸಂಪನ್ನರಾದ ಮತ್ತು ಅಮೃತಸ್ವರೂಪರಾದ ನಮ್ಮ ಪೂರ್ವಿಕರು ನಮ್ಮನ್ನು ನೋಡಬಲ್ಲರು. ನಮ್ಮ ದುಃಸ್ಥಿತಿಯನ್ನು ಕುರಿತು ನಮಗೆ ನಾಚಿಗೆಯುಂಟಾಗದಿದ್ದರೂ ನಮ್ಮನ್ನು ನೋಡುವ ಅವರಿಗೆ ಕಣ್ಣೀರು ಬರದೆ ಇರಲಾರದು. ಯಾವ ತಂದೆಯೂ ತನ್ನ ಮಕ್ಕಳು ತನಗಿಂತ ಕೀಳಾಗಿ ಬಾಳುವದನ್ನು ನೋಡಿ ಬೇಗುದಿಗೊಳ್ಳದೆ ಇರುವದಿಲ್ಲ. ಆದುದರಿಂದ ನಮ್ಮ ಬಾಳು :-

**'ಮಾತುಃ ಕೇವಲಮೇವ ಯೌವನವನಚ್ಛೇದೇ ಕುಠಾರಾವಯಮ್'**

(ನಾವು ತಾಯ ಯೌವನವೆಂಬ ಕಾಡನ್ನು ಕತ್ತರಿಸುವ ಕೊಡಲಿಯಂತೆ ಮಾತ್ರ)

ಎಂಬಂತಾಗಿದೆ. ಈಗಲಾದರೂ ನಾವು ಎಚ್ಚತ್ತುಗೊಳ್ಳಬೇಕು. ಬಹು ಕಾಲದಿಂದ ಅಜ್ಞಾನವೆಂಬ ನಿದ್ರೆಯಲ್ಲಿ ಭಯಂಕರವಾದ ಗೊರಕೆಯನ್ನು ಹಾಕಿದ್ದು ಸಾಕು. ಇನ್ನು ನಾವು ನಮ್ಮ ಅಪ್ಪಅಮ್ಮಂದಿರ ಮಕ್ಕಳಾಗಬೇಕು. ನಮ್ಮ ಅಪ್ಪ ಅಮ್ಮಂದಿರಂತೆ ಪವಿತ್ರವಾದ ಬಾಳನ್ನು ಬಾಳಬೇಕು; ನಮ್ಮ ಅಪ್ಪ ಅಮ್ಮಂದಿರಂತೆ ದಿವ್ಯವಾದ ಸುಖವನ್ನು ಸೂರೆಗೊಳ್ಳಬೇಕು; ನಮ್ಮ ಅಪ್ಪಅಮ್ಮಂದಿರಂತೆ ನಮ್ಮ ಯಶಸ್ಸೆಂಬ ಪೂರ್ಣಚಂದ್ರನನ್ನು ಆಕಾಶದ ನಟ್ಟನಡುವೆ ನಿಲ್ಲಿಸಬೇಕು. ಈ ಉದ್ದೇಶವನ್ನು ಸಾಧಿಸಿಕೊಳ್ಳುವದಕ್ಕೆ ಸರಿಯಾದ ಸಾಧನವೇನೆಂದರೆ ವೇದದ ಕಡೆಗೆ ಕಣ್ಣು ಹಾಕುವದು. ನಮ್ಮ ಉನ್ನತಿ ಹೇಗಾದೀತೆಂಬುದನ್ನು ತಿಳಿದುಕೊಳ್ಳುವ ಇಚ್ಛೆಯಿಂದ ವೇದವನ್ನು ತೆಗೆದುನೋಡಿದರೆ ಅದು ನಮ್ಮ ಕಣ್ಣಿನ ಪರದೆಯನ್ನು ತೆಗೆದು ಜಗತ್ತಿನಲ್ಲಿ ದೇವರನ್ನು ಕಾಣುವ ದೃಷ್ಟಿಯನ್ನು ಕೊಡುವದು. ಮೊದಲು ಇರುವದೆಲ್ಲ ಜಗತ್ತೇ ಹೊರತು ದೇವರಲ್ಲವೆಂದು ಕಾಣಬರುತ್ತಿತ್ತಷ್ಟೆ; ವೇದದಿಂದ ದೃಷ್ಟಿ ಬದಲಾದಮೇಲೆ ಇರುವದೆಲ್ಲ ದೇವರೇ ಹೊರತು ಜಗತ್ತಲ್ಲವೆಂದು ಕಾಣಬರುವದು. ಈ ಬಗೆಯ ನೋಟಕ್ಕೆ 'ಶಾಸ್ತ್ರದೃಷ್ಟಿ' ಯೆಂದು ಹೆಸರು. ಇಂಥ ಪರಮ ರಹಸ್ಯವಾದ ದೃಷ್ಟಿಯನ್ನು ತೋರಿಸುವದರಿಂದಲೇ ಶಾಸ್ತ್ರಕ್ಕೆ ಹೆಚ್ಚುಗಾರಿಕೆ.

ಈ ಶಾಸ್ತ್ರದೃಷ್ಟಿಯನ್ನು ನಾವು ಜಗತ್ತಿನ ಮೇಲೆ ಬೀರಬೇಕು. ಆಗ ಆಗುವ ಚಮತ್ಕಾರವನ್ನು ನೋಡಿ. ದೇವರು ಎಲ್ಲೆಲ್ಲಿಯೂ ತುಂಬಿರುವನೆಂಬ ಮಾತಿನಲ್ಲಿ ಅವನು ಎಂದೆಂದಿಗೂ ಬದಲಾವಣೆಯನ್ನು ಹೊಂದದೆ ಇರುವನೆಂಬರ್ಥವೂ ಸೇರಿರುವದು. ಜಗತ್ತಿನಲ್ಲಿ ಇಂಥ ವಸ್ತು ಯಾವದೆಂಬುದನ್ನು ಹುಡುಕಿ ಕಾಣಬೇಕು. ಬದಲಾವಣೆಯನ್ನು ಹೊಂದದೆ ಯಾವಾಗಲೂ ಎಲ್ಲೆಲ್ಲಿಯೂ ಇರುವ ಒಂದು ತತ್ತ್ವವು ಕಾಣಬಂದರೆ ಅದು ದೇವರಲ್ಲದೆ ಮತ್ತೇನು? ಈಗ ಅಂಥದ್ದನ್ನು ನಿಟ್ಟಿಸೋಣ. 'ಮನೆಯಿದೆ, ಮಠವಿದೆ; ದನವಿದೆ, ಕರುವಿದೆ; ಕಲ್ಲಿದೆ, ಮಣ್ಣಿದೆ; ನೀರಿದೆ, ನೆರಳಿದೆ- ಎಂದು ಮುಂತಾಗಿ ನಮಗೆ ಜಗತ್ತಿನಲ್ಲಿ ಅನೇಕ ಬಗೆಯ ವಸ್ತುಗಳ ಕಲ್ಪನೆಯು ತೋರುತ್ತದೆಯಷ್ಟೆ. ಈ ಎಲ್ಲ ಕಲ್ಪನೆಗಳನ್ನೂ ಒಟ್ಟುಗೂಡಿಸಿ ಸಮಾಲೋಚನೆ ಮಾಡುವದಕ್ಕಾಗಿ ವಿಂಗಡಿಸಿ ನೋಡಿದರೆ ಇವೆಲ್ಲವುಗಳಲ್ಲಿಯೂ ನಮಗೆ ಉಂಟಾಗುವ ಬುದ್ಧಿಗಳನ್ನು ಮೂರು ಬಗೆಯಾಗಿ ವಿಂಗಡಿಸಬಹುದು. ಉದಾಹರಣೆಗೆ- 'ಮನೆಯಿದೆ' ಎಂಬುದರಲ್ಲಿ ಮನೆಯೆಂಬ ಹೆಸರು, ಮನೆಯೆಂಬ ಆಕಾರ, ಅವರೆಡೂ

ಇರುವವೆಂಬ ಒಂದು ಧರ್ಮ- ಹೀಗೆ ಮೂರು. ಜಗತ್ತಿನಲ್ಲಿ ನಾವು ಆಕಾರವಿಲ್ಲದ್ದನ್ನೂ ಕಂಡಿಲ್ಲ; ನಾಮವಿಲ್ಲದ್ದನ್ನೂ ಕಂಡಿಲ್ಲ; ಇರುವಿಕೆಯಂಬ ಧರ್ಮವಿಲ್ಲದ್ದನ್ನೂ ಕಂಡಿಲ್ಲ. ಸ್ಥೂಲವಾಗಿ ನಾವು ನೋಡುವದು ಹೆಸರು ಮತ್ತು ಆಕಾರ ಎರಡನ್ನೆ; ಆದರೆ ಅವರೆಡೂ ಇರುವಿಕೆಯಿಂದ ಹೂರಣವನ್ನು ತುಂಬಿಕೊಂಡೇ ಇರುವವು. ಇರುವಿಕೆಯೆಂಬ ಧರ್ಮವಿಲ್ಲದ್ದನ್ನು ನಾವು ಕಾಣುವದೆಂಬುದು ಅಸಂಭವದ ಮಾತು; ಏಕೆಂದರೆ ಇರುವಿಕೆಯೆಂಬ ಧರ್ಮವಿಲ್ಲದ್ದೆಂದರೆ ಇಲ್ಲದ ವಸ್ತು; ಅದು ಹೇಗೆ ಕಂಡೀತು? ಮೊಲದ ಕೊಂಬು ಕಂಡೀತೆ? ಬಂಜೆಯ ಮಗ ಕಂಡಾನೆ? ಜಗತ್ತಿನಲ್ಲಿ ಇರುವಿಕೆಯೆಂಬ ಧರ್ಮವಿಲ್ಲದ ವಸ್ತುವೇ ಇಲ್ಲ. ಆದರೆ ಇದು ನಮಗೆ ಎಲ್ಲಿಯೂ ಎದ್ದುಕಂಡಿಲ್ಲ. ಅದನ್ನು ಕಣ್ಣಿಗೆ ತೋರಿಸುವದೇ ಈ ಶಾಸ್ತ್ರದೃಷ್ಟಿಯ ಪ್ರಭಾವ.

ಅಂತು ಜಗತ್ತಿನಲ್ಲಿ ನಮಗೆ ಹೆಸರು ಆಕಾರ, ಇರುವಿಕೆ ಎಂಬ ಮೂರು ಬಗೆಯ ಬುದ್ಧಿಗಳುಂಟಾಗುವವು. ಈ ಮೂರಕ್ಕೆ ಹೊರತಾದ ಜಗತ್ತಿಲ್ಲ. ದೇವರಿದ್ದರೆ ಈ ಮೂರರಲ್ಲಿಯೇ ಇರಬೇಕು. ಆದ್ದರಿಂದ ಇವುಗಳನ್ನು ಒರೆಗೆ ಹಚ್ಚಿ ನೋಡೋಣ. ಹೆಸರು ಮತ್ತು ಆಕಾರ ಎರಡನ್ನೂ ಸ್ಥೂಲ ದೃಷ್ಟಿಯಿಂದ ಮಾಡಿದ ವಿವೇಚನೆ ಯಲ್ಲಿಯೇ ದೇವರಲ್ಲವೆಂದು ತೋರಿಸಿದ್ದಾಗಿದೆ. ಆದರೂ ಈಗ ಇನ್ನೂ ಬಲವಾದ ಕಾರಣವನ್ನು ಕೊಟ್ಟು ಅವುಗಳ ನಿಃಸಾರತೆಯನ್ನು ತೋರಿಸಲಾಗುತ್ತದೆ. ಅದೇನೆಂದರೆ ಹೆಸರೂ ಮತ್ತು ಆಕಾರವೂ ಇರುವಿಕೆಯೆಂಬ ಧರ್ಮದ ಬೆಂಬಲವು ದೊರೆತರೆ ಮಾತ್ರ ತಮ್ಮ ಅಂಗಡಿಯನ್ನು ಹೂಡಬಲ್ಲವೆ ಹೊರತು ಸ್ವತಂತ್ರವಾಗಿ ತಲೆ ಎತ್ತುವ ಸಾಮರ್ಥ್ಯವಿಲ್ಲದವುಗಳೆಂದಾಯಿತು. ಅವರೆಡೂ ಇರುವಿಕೆಗಿಂತ ಬೇರೆಯಾದವು ಗಳಾದ್ದರಿಂದಲೇ ಹುಸಿಯಾದವುಗಳೆಂದಾಯಿತು. ಆದ್ದರಿಂದ ಇವರೆಡೂ ದೇವರ ಸ್ವರೂಪವಲ್ಲವೆಂಬುದಿಷ್ಟೇ ಅಲ್ಲ, ಇವಕ್ಕೆ ಸ್ವರೂಪವೇ ಇಲ್ಲವೆಂದು ಈಗ ಸಿದ್ಧವಾಯಿತು.

ಹೀಗೆ ಅವುಗಳನ್ನು ಹಾರಿಸುವದಾದರೆ ಹೆಸರನ್ನೂ ಆಕಾರವನ್ನೂ ಬಿಟ್ಟು ತಾನೇ ಸ್ವತಂತ್ರವಾಗಿ ತಲೆಎತ್ತುವ ಯೋಗ್ಯತೆಯೂ ಇರುವಿಕೆಯೆಂಬ ಧರ್ಮಕ್ಕೂ ಇಲ್ಲವಾದ್ದರಿಂದ ಅದೂ ಹುಸಿಯೆನ್ನಬೇಕಾಗುವದೆಂದರೆ ಆದಾಗುವದಿಲ್ಲ. ಇರುವಿಕೆ ಎಂಬುದು ನಾಟಕದ ದೀಪದಂತೆ ಅಖಂಡವಾಗಿ ಬೆಳಗುತ್ತಿರುವದು; ಆ ದೀಪದ ಸ್ವಭಾವವೇನೆಂದರೆ ರಂಗಸ್ಥಲಕ್ಕೆ ಯಾರಾದರೂ ಬಂದು ಅಭಿನಯಿಸಿದರೆ ಅದನ್ನು ತೋರಿಸುವದು; ಯಾರೂ ಬರದಿದ್ದರೆ ತನ್ನಷ್ಟಕ್ಕೆ ತಾನು ಉರಿಯುತ್ತಿರುವದು. ಆದ್ದರಿಂದ ಯಾರನ್ನೂ ತೋರಿಸದೆ ಇರುವದು ಅದರ ನ್ಯೂನತೆಯಲ್ಲ . ಅದರಂತೆ ಮನೆ, ಮಠ, ದನ, ಕರು ಮೊದಲಾದ ವಿಷಯಗಳಿರುವಾಗ ಇರುವಿಕೆಯ ಧರ್ಮವು

ಅವುಗಳೊಡನೆ ಕೂಡಿಕೊಂಡು ಅವುಗಳನ್ನು ಬೆಳಗುವದು; ಯಾವ ವಿಷಯವೂ ಇಲ್ಲದಿದ್ದರೆ ಅದು ತನ್ನಷ್ಟಕ್ಕೆ ತಾನಿರುವದು. ತನಗೆ ಲೋಪವಿಲ್ಲ. ಹೆಸರೂ ಆಕಾರವೂ ಲೋಪವಾಗುವದನ್ನು ಕಂಡವರುಂಟು. ಇರುವಿಕೆಯ ಲೋಪವನ್ನು ಕಂಡವರಿಲ್ಲ. ಯಾರಾದರೂ ಕಂಡೆನೆನ್ನುವದಾದರೆ ಅವರು ಇದ್ದು ತಾನೆ ಹೇಳಬೇಕಾಗುತ್ತದೆ? ಆಗ ವಿಷ್ಣು ತನ್ನನ್ನು ಇಲ್ಲವೆನಿಸಬೇಕೆಂದು ಬಂದ ಹಿರಣ್ಯಕಶಿಪುವಿನೊಳಹೊಕ್ಕೇ ಇದ್ದಂತೆ ಇರುವಿಕೆಯು ತನ್ನ ನಾಶವನ್ನು ಹೇಳ ಬರುವವನ ಒಳಹೊಕ್ಕೇ ಇರುವದು. ಇರುವಿಕೆಯ ಲೋಪವನ್ನು ಕಂಡೆನೆನ್ನುವದು ಹೊಂದದಮಾತು. ಅದಕ್ಕೆ ನಾಶವೇ ಇಲ್ಲವಾದ್ದರಿಂದ ಅದು ಎಂದೆಂದಿಗೂ ಇರುವದೆಂದಾಯಿತು. ಎಲ್ಲವೂ ಇರುವಿಕೆ ಯೆಂಬ ಧರ್ಮವನ್ನು ಆಶ್ರಯಿಸಿಕೊಂಡೇ ತೋರುವವಾದ್ದರಿಂದ ಅದು ಎಲ್ಲೆಲ್ಲಿಯೂ ಇರುವದೆಂದೂ ಆಯಿತು.

ಇನ್ನು ಬದಲಾವಣೆಯ ವಿಷಯವನ್ನು ಕುರಿತು ಯೋಚಿಸಿದರೆ ಹೆಸರೂ ಮತ್ತು ಆಕಾರವೂ ಲೆಕ್ಕವಿಲ್ಲದಷ್ಟು ಬದಲಾವಣೆಗಳನ್ನು ಹೊಂದುವವೆಂಬುದು ನಮ್ಮ ಅನುಭವದಲ್ಲಿ ಕಂಡುಬಂದಿದೆ. ಇರುವಿಕೆಯೆಂಬ ಧರ್ಮಕ್ಕೆ ಬದಲಾವಣೆಯನ್ನು ಮನಸ್ಸಿನಿಂದ ಕಲ್ಪಿಸುವದಕ್ಕೆ ಕೂಡ ಅಸಾಧ್ಯ. ಏಕೆಂದರೆ ಇರುವಿಕೆಯು ಬದಲಾಯಿಸ ಬೇಕಾದರೆ ತಾನು ಇಲ್ಲದ್ದಾಗಬೇಕು. ಎಂದೆಂದಿಗೂ ಇರುವಂಥ ವಸ್ತು ಎಂದಿಗೂ ಇಲ್ಲದ್ದಾಗಲಾರದು. ಬಿಳೀನಾಯಿ ಎಂದಿಗೂ ಕರೀನಾಯಿಯಾಗಲಾರದು. ಆದ್ದರಿಂದ ಜಗತ್ತಿನಲ್ಲಿ ತೋರುವ ಇರುವಿಕೆಯೆಂಬ ಧರ್ಮವೇ ದೇವರ ಸ್ವರೂಪ. ಇದು ನಮಗೆ ಶಾಸ್ತ್ರದೃಷ್ಟಿಯ ಹೊರತು ಕಾಣುವದಿಲ್ಲ. ಜಗತ್ತಿನಲ್ಲಿ ದೇವರನ್ನು ನೋಡ ಹೇಳುವ ಉಪದೇಶಕ್ಕೆಲ್ಲ ಇದೇ ಅರ್ಥ. ಕೈಲಾಸಾಧಿಪತಿಯಾದ ಶಿವನೂ ವೈಕುಂಠಾಧಿ ಪತಿಯಾದ ಮಹಾವಿಷ್ಣುವೂ ಈ ಜಗತ್ತಿನೊಳಗೆ ತೂರಿಕೊಂಡಿರುವವರಲ್ಲ; ಇರುವಿಕೆ ಯೆಂಬುದೇ ಜಗತ್ತಿನಲ್ಲಿರುವ ದೇವರ ಸ್ವರೂಪವು. ಈ ತತ್ತ್ವವನ್ನರಿತರೆ ದೇವರಿಲ್ಲದೆ ಜಗತ್ತಿಲ್ಲವೆಂದೂ ಜಗತ್ತಿಲ್ಲದಿದ್ದರೂ ದೇವರಿರುತ್ತಾನೆಂದೂ ಮನುಷ್ಯನು ಮನಗಾಣುವನು. ಹೀಗೆ ಎದುರಿಗೆ ಕಾಣುವ ಜಗತ್ತಿನಿಂದಲೇ ದೇವರಸ್ವರೂಪದ ಸುಳಿವನ್ನರಿತರೆ ಅದು ತನ್ನ ವೈಭವದ ಜ್ಞಾನವನ್ನುಂಟುಮಾಡಿ ಕೊಡುವದಕ್ಕೆಂದು ಒಡನೆ ತನ್ನ ಬಿರುಬೆಳಕನ್ನು (search-light) ಮುಂದೆ ಮುಂದೆ ಬೀರುವದು. ಬೆಳಕು ಹರಿದ ಮೇಲೆ ದಾರಿ ಸಾಗುವದು ಸುಲಭ.

*****

# 7. ರಂತಿ ದೇವ

## (ಪುರಾಣದ ಝರಿ) - (ಭಾಗವತ 9-21)

ಜಗತ್ತಿನಲ್ಲಿ ನಮ್ಮೆದುರಿಗೆ ಅನೇಕ ದೇವರು ಕಾಣಬರುತ್ತಾರಷ್ಟೆ. ಕಂಡದ್ದನ್ನು ಕಂಡಂತೆ ಅವರನ್ನು ಬೇರೆಬೇರೆಯಾದ ಅನೇಕರೆಂದು ತಿಳಿಯುವದಕ್ಕೆ ಯಾರೂ ಏನೂ ಹೇಳಿಕೊಡಬೇಕಾದದ್ದೂ ಇಲ್ಲ; ಹಾಗೆ ತಿಳಿದುಕೊಳ್ಳುವದಕ್ಕೆ ಯಾರೂ ಏನೂ ಕಷ್ಟಪಡಬೇಕಾದದ್ದೂ ಇಲ್ಲ. ಎಲ್ಲರಿಗೂ ಸ್ವಭಾವವಾಗಿಯೇ ಆ ತಿಳಿವಳಿಕೆ ಯುಂಟಾಗಿಯೇ ಆಗುವುದು. ಈ ಬಗೆಯ ತಿಳಿವಳಿಕೆಯನ್ನು ಭಗವದ್ಗೀತೆಯು ರಾಜಸವೆಂದು ಕರೆದಿರುವದು. ರಾಜಸವೆಂದರೆ ಹರಿದಾಟದ ಮನಸ್ಸಿನ ತಿಳಿವಳಿಕೆ. ಅದರ ಸ್ವರೂಪವೇನೆಂದರೆ :-

**''ಪೃಥಕ್ತ್ವೇನ ತು ಯಜ್ಜ್ಞಾನಂ ನಾನಾಭಾವಾನ್ಪೃಥಗ್ವಿಧಾನ್ ।**
**ವೇತ್ತಿ ಸರ್ವೇಷು ಭೂತೇಷು ತಜ್ಜ್ಞಾನಂ ವಿದ್ಧಿ ರಾಜಸಮ್ ॥''**

**(ಭ.ಗೀ.18-21)**

**(ತಾ॥ ಎಲ್ಲ ಪ್ರಾಣಿಗಳಲ್ಲಿಯೂ ಪ್ರತಿ ಶರೀರಕ್ಕೂ ಬೇರೆ ಬೇರೆ ಲಕ್ಷಣವುಳ್ಳ ಬೇರೆ ಬೇರೆ ಆತ್ಮರಿರುವರೆಂದು ತಿಳಿಯುವ ತಿಳಿವು ರಾಜಸ.)**

ಈ ತಿಳಿವನ್ನು ಪಡೆಯುವಾಗ ಮನುಷ್ಯನು ತನ್ನ ಬುದ್ಧಿಶಕ್ತಿಯನ್ನೆಳ್ಳಷ್ಟೂ ಉಪಯೋಗಿಸಬೇಕಾದ್ದಿಲ್ಲವಾದ್ದರಿಂದ ಅವನು ಸ್ಥೂಲವಾದ ಇಷ್ಟರಿಂದಲೆ ತೃಪ್ತನಾದರೆ ದೇವರು ದಯಮಾಡಿ ಅವನಿಗೆ ಬುದ್ಧಿಯನ್ನು ಕೊಟ್ಟದ್ದು ವ್ಯರ್ಥವಾಗುತ್ತದೆ. ಬುದ್ಧಿಯನ್ನುಪಯೋಗಿಸಿ ವಿಚಾರಮಾಡಿ ಸೂಕ್ಷ್ಮವಾದ ತತ್ತ್ವವನ್ನು ತಿಳಿದುಕೊಂಡಾಗ ಮಾತ್ರ ಅವನ ಬುದ್ಧಿಶಕ್ತಿಯು ಸಾರ್ಥಕವಾಗುವುದು. ಎದುರಿಗೆ ಕಾಣುವ ಬಗೆ ಬಗೆಯ ಜೀವರ ವಿಷಯದಲ್ಲಿಯೇ ಒಳಮುಖವಾದ ಮನಸ್ಸಿನ ತಿಳಿವಳಿಕೆ ಹೇಗಿರುವದೆಂಬುದನ್ನು ನೋಡಿ : -

**''ಸರ್ವಭೂತೇಷು ಯೇನೈಕಂ ಭಾವಮವ್ಯಯಮೀಕ್ಷತೇ ।**
**ಅವಿಭಕ್ತಂ ವಿಭಕ್ತೇಷು ತಜ್ಜ್ಞಾನಂ ವಿದ್ಧಿ ಸಾತ್ತ್ವಿಕಮ್ ॥'' (ಭ.ಗೀ.18-20)**

**ತಾ॥ ಎಲ್ಲ ಪ್ರಾಣಿಗಳಲ್ಲಿಯೂ ಬೇರೆಬೇರೆಯಾಗಿರುವುದರಲ್ಲಿ ನಾಶ ರಹಿತವಾಗಿ ಅಖಂಡವಾಗಿರುವ ಒಬ್ಬನೇ ಆತ್ಮನನ್ನು ತಿಳಿಯುವ ತಿಳಿವು ಸಾತ್ತ್ವಿಕ.**

ಈ ಸಾತ್ತ್ವಿಕಜ್ಞಾನವು ನಮ್ಮ ಭರತಖಂಡಕ್ಕೆ ಮಾತ್ರ ಮೀಸಲಾದದ್ದು. ದರ್ಭೆಯ ತುದಿಯಷ್ಟು ಮೊನೆಯಾದ ಬುದ್ಧಿಯುಳ್ಳವರು ಪ್ರಪಂಚದ ಉಳಿದ ಕಡೆಗಳಲ್ಲಿಯೂ ಬೇಕಾದಷ್ಟು ಇರಬಹುದು. ಅವರೆಲ್ಲರೂ ಬಹುಮಟ್ಟಿಗೆ ಹೊರಗಣ ವಿಷಯಗಳ ತೂಕಬಣ್ಣಗಳನ್ನು ಗೊತ್ತುಮಾಡುವದರ ಕಡೆಗೇ ಮುಂದುವರಿದಿರುವರು. ಹಿಂದಿನ ಜನ್ಮದ ವಾಸನೆಯ ಬಲದಿಂದಲೋ ಏನೋ, ಕೆಲವರು ಒಳಗಣ ವಿಷಯಗಳ ಮೇಲೆ ಹಾಯುವದಕ್ಕೆ ಹೋಗಿದ್ದರೂ ಅವರೆಲ್ಲ ಮುಗ್ಗರಿಸಿ ಮುಂದೆ ಬಿದ್ದು ಮೂರುರುಳಾಗಿ ರಾಜಸಜ್ಞಾನದ ಸೆಳೆವಿಗೆ ಸಿಕ್ಕಿ ಕೊಚ್ಚಿಕೊಂಡು ಹೋಗಿರುವರು. ಬರೀ ಬುದ್ಧಿಯ ಬಲದ ಮೇಲೆ ನಿಶ್ಚಯಿಸುವದಕ್ಕೆ ಹೋಗಿದ್ದರೆ ನಮ್ಮದೂ ಅದೇ ಗತಿಯಾಗುತ್ತಿತ್ತು. ಆದರೆ ವೇದವು ನಮ್ಮನ್ನು ಕಡೆ ಹಾಯಿಸಿತು. ಆದ್ದರಿಂದ ರಾಜಸನಜ್ಞಾನದ ತಲೆಯನ್ನು ಮೆಟ್ಟಿ ತನ್ನ ಹೆಚ್ಚುಗಾರಿಕೆಯಿಂದ ಮುಗಿಲುಮುಟ್ಟಿರುವ ಸಾತ್ತ್ವಿಕಜ್ಞಾನವೇ ಒಂದು ರೂಪವನ್ನು ತೆಗೆದು ಕೊಂಡು ಬಂದಂತೆ ತಮ್ಮ ನಡೆನುಡಿಗಳಲ್ಲೆಲ್ಲ ಅದರ ಬಿರುಬೆಳಕನ್ನು ಬೀರುವ ಮಹಾಮಹಿಮರು ನಮ್ಮ ದೇಶದಲ್ಲಿ ಲೆಕ್ಕವಿಲ್ಲದಷ್ಟು ಜನರು ಆಗಿಹೋಗಿರುವರು. ಇಂಥವರಿಂದಲೇ ನಮ್ಮ ದೇಶದ ಪವಿತ್ರತೆ. ಬರೀ ನಮ್ಮ ದೇಶದ್ದೇ ಏಕೆ? ಇಂಥವರು ಜಗತ್ತಿಗೇ ಅಲಂಕಾರಪ್ರಾಯರು. ಇಂಥವರಿಲ್ಲದ ಜಗತ್ತು ಬರೀ ಕುರಿಗಳ ರೊಪ್ಪ ವೆಂದು ಕರೆಸಿಕೊಳ್ಳುವುದಕ್ಕೆ ತಕ್ಕದ್ದಾಗುವದು. ಏಕೆಂದರೆ ಪಶುಗಳಂತೆ ಬರೀ ತನ್ನ ದೇಹೇಂದ್ರಿಯಗಳ ಹಿತದಲ್ಲಿಯೇ ಮುಳುಗಿರದೆ ಮನುಷ್ಯತ್ವಕ್ಕೆ ತಕ್ಕಂತೆ ಪರಹಿತವನ್ನು ಮಾಡುವದೆಂಬುದು ಈ ಸಾತ್ತ್ವಿಕವಾದ ತಿಳಿವಿನವರಿಗೆ ದಕ್ಕೀತೇ ಹೊರತು ರಾಜಸ ವಾದ ತಿಳಿವಿನವರಿಗೆ ಎಂದೆಂದೂ ಕೈಗೂಡುವ ಮಾತಲ್ಲ. ರಾಜಸವಾದ ತಿಳಿವಿನವರೂ ಒಂದಿಷ್ಟು ಪರಹಿತವನ್ನು ಮಾಡಬಹುದು. ಸಾತ್ತ್ವಿಕರ ಪರಹಿತದ ಮುಂದೆ ಅದು ತಲೇ ಎತ್ತಲಾರದು ಏಕೆಂದರೆ ರಾಜಸರು ಇತರರನ್ನು ಬೇರೆಯವರೆಂದು ತಿಳಿಯುವದರಿಂದ ಅವರ ಪರಹಿತವು ಎಷ್ಟು ದೊಡ್ಡದಾದರೂ ಕಡಿಮೆ ಬೆಲೆಯದೇ ಆಗುವದು. ಸಾತ್ತ್ವಿಕರು ಇತರರನ್ನು ತಮ್ಮಂತೆಯೇ ನೋಡುವದರಿಂದ ಅವರಿಂದಾಗುವ ಪರ ಹಿತವು ತುಟ್ಟತುದಿಯ ಹೆಚ್ಚಿನ ಬೆಲೆಯುಳ್ಳದ್ದಾಗುವದು. ನಮ್ಮ ದೇಶದ ಇಂಥ ಮಹನೀಯರಲ್ಲಿ ಇಂದು **ರಂತಿದೇವ** ನೆಂಬೊಬ್ಬನ ವಿಚಾರವನ್ನು ನಿರೂಪಣ ಮಾಡಲಾಗುವದು.

ನಮ್ಮಲ್ಲಿ ಹಿಂದೆ ರಂತಿದೇವನೆಂಬೊಬ್ಬ ಶ್ರೀಮಂತನಿದ್ದನು. ಶ್ರೀ ಇದ್ದ ಕಡೆ ಶ್ರೀಪತಿ (ಭಗವಂತನು) ಇರುವನೆಂಬ ಮಾತು ಎಷ್ಟೋ ಮಟ್ಟಿಗೆ ಹೊಂದಿಕೆಯಾಗಿ ಕಂಡರೂ ಆ ಶ್ರೀಯ- ಎಂದರೆ ಲಕ್ಷ್ಮೀ - ಹೊರಮೈ ಆದ ಐಶ್ವರ್ಯವಿರುವ ಕಡೆ ಈ ಕಾಲದಲ್ಲಿ ಶ್ರೀಪತಿಗೆ ಅವಕಾಶ ಬಹು ಕಡಿಮೆಯಾಗಿ ಕಾಣುತ್ತಿದೆ. ಈಗಿನ ಐಶ್ವರ್ಯವು

ಪಾಶ್ಚಾತ್ಯಸ್ತ್ರೀಯರಂತೆ ಬಹುಮಟ್ಟಿಗೆ ಸ್ವತಂತ್ರಪ್ರವಾಸಮಾಡುವ ಸ್ವಭಾವದ್ದಾಗಿರುವದರಿಂದ ಅದು ಗಂಡನಿಗೆ ದೂರವಾಗಿರುವದೇನೂ ಆಶ್ಚರ್ಯವಲ್ಲ. ಆದರೂ ಪುಣ್ಯಶಾಲಿಗಳಾದ ಶ್ರೀಮಂತರಲ್ಲಿ ಕೆಲವು ಕಡೆ ಈಗಲೂ ದೈವಭಕ್ತಿ ತೋರುವದುಂಟು. ರಂತಿದೇವನು ಎಲ್ಲರಲ್ಲಿರುವ ಪರಮಾತ್ಮನೂ ಒಬ್ಬನೇ ಎಂಬ ಭಾವನೆಯು ಬೇರು ಬಿಟ್ಟುಕೊಂಡಿದ್ದ ಶ್ರೀಮಂತನಾಗಿ ಎಲ್ಲರನ್ನೂ ತನ್ನಂತೆ ನೋಡುವವನಾಗಿದ್ದನು. ಇದರಿಂದ ಅವನ ಮುಂದೆ ಯಾರಾದರೂ ದುಃಖಿಗಳು ಬಂದರೆ ಅವನು ತಾನೇ ದುಃಖಿಯೆಂಬಷ್ಟು ಅವರಲ್ಲಿ ತನ್ಮಯನಾಗುತ್ತಿದ್ದನು. ಅವನ ಭಗವದ್ಭಾವನೆಯು ಇಷ್ಟು ತುಟ್ಟತುದಿಗೇರಿತ್ತು. ಹೀಗಾಗಿ ಅವನು ಇತರರ ದುಃಖಗಳನ್ನೆಲ್ಲ ಹೋಗಲಾಡಿಸುವದೇ ತನ್ನ ಮುಖ್ಯ ವ್ರತವಾಗಿ ನಡೆಸುತ್ತಿದ್ದದ್ದು ಎಷ್ಟರಮಟ್ಟಿಗೆ ಸಾಗಿತ್ತೆಂದರೆ -

**ವಿಯದ್ವಿತ್ತಸ್ಯ ದದತೋ ಲಬ್ಧಂ ಲಬ್ಧಂ ಬುಭುಕ್ಷತಃ ।**
**ನಿಷ್ಕಿಂಚನಸ್ಯ ಧೀರಸ್ಯ ಸಕುಟುಂಬಸ್ಯ ಸೀದತಃ ॥3॥**

(ವಿಯದ್ವಿತ್ತಸ್ಯ) ಅವನಿಗೆ ಹಣವು ಆಕಾಶದಿಂದ ಸುರಿಮಳೆಯಾಗಿ ಬರುತ್ತಿತ್ತು; ಎಂದರೆ ಅವನು ಹಣವನ್ನು ದೊರಕಿಸುವುದಕ್ಕಾಗಿ ಏನೇನೂ ಪ್ರಯತ್ನವನ್ನು ಮಾಡದೆ ಇದ್ದರೂ ಹೇಗೊ ಎಲ್ಲಿಂದಲೊ ಅವನಿಗೆ ಹಣವು ಬಂದು ಸೇರುತ್ತಿತ್ತೆಂದರ್ಥ. ಹಿಂದಿನ ಜನ್ಮದಲ್ಲಿ ಪುಣ್ಯವನ್ನು ಮಾಡಿದವರಿಗೆ ಈ ಜನ್ಮದಲ್ಲಿ ಹೀಗಾಗುವುದೇನೂ ದೊಡ್ಡ ಮಾತಲ್ಲ. ಇರಲಿ. ಬೇಕುಬೇಕಾದ ಸುಖಸಾಮಗ್ರಿಗಳು ನಾನು ಮುಂದು ತಾನು ಮುಂದೆಂದು ಮುಂದೆ ನಿಂತು ನಮ್ಮನ್ನು ಅನುಭವಿ ಸೆಂದು ಅಂಗಲಾಚುತ್ತಿರುವಾಗ ಭೋಗೇಚ್ಛೆಯುಂಟಾಗುವುದು ಸ್ವಭಾವವಷ್ಟೆ. ಯಾವ ಸಾಮಗ್ರಿಯೂ ಇಲ್ಲದಿದ್ದರೂ ಭೋಗೇಚ್ಛೆಯ ಸೆಳತಕ್ಕೆ ಸಿಕ್ಕಿ ಬಾಯಿನೀರು ಸುರಿಸುವವರಿರುವಾಗ ತಾನಾಗಿ ಸಿದ್ಧವಾಗಿರುವ ಸುಖ ಸಾಮಗ್ರಿಗಳನ್ನು ಭೋಗಿಸುವ ಇಚ್ಛೆಯುಂಟಾಗುವದೇನು ತಪ್ಪು? ಆದ್ದರಿಂದ (ಬುಭುಕ್ಷತಃ) ರಂತಿದೇವನಿಗೂ ಭೋಗೇಚ್ಛೇಯೇನೋ ಇತ್ತು. ಆದರೂ ಅವನಿಗೆ ತಾನು ಭೋಗಿಸುವದರಲ್ಲಿ ತೋರುವ ಸುಖಕ್ಕಿಂತ ಅದನ್ನು ಕೈಯಾರೆ ಮತ್ತೊಬ್ಬರಿಗೆ ಕೊಟ್ಟು ಅವರು ಅದರಿಂದ ಸುಖಿಗಳಾಗುವದನ್ನು ನೋಡುವದರಲ್ಲಿ ಹೆಚ್ಚಿನ ಸುಖವು ತೋರುತ್ತಿತ್ತು. ತನ್ನ ಭೋಗವನ್ನು ಸುಖವೆಂದು ಭಾವಿಸುವದು ಬಹಳ ಬಹಳ ಕೆಳಗಣ ಮೆಟ್ಟಿಲ ತಿಳಿವಳಿಕೆ. ಪಶುಪಕ್ಷಿಗಳು ಕೂಡ ತಮ್ಮ ತಮ್ಮ ಭೋಗವನ್ನು ಸುಖವೆಂದೇ ತಿಳಿಯುವವು. ಇದರಲ್ಲಿ ಮನುಷ್ಯನದೇನು ಹೆಚ್ಚುಗಾರಿಕೆ? ತನ್ನದನ್ನು ಪರರಿಗೆ ನೀಡಿ ಅದರಿಂದ ಪರರಿಗಾದ ಸುಖದಿಂದ ತಾನು ಸುಖಿಯಾಗುವದು ಉಚ್ಚ ಭಾವನೆ. ಈ ಭಾವನೆಯಿಲ್ಲದವನು ಮನುಷ್ಯರಲ್ಲಿ ಎಣಿಕೆಗೆ ಬರುವದಕ್ಕೇ ತಕ್ಕವನಲ್ಲ.

ಮನುಷ್ಯರಲ್ಲಿ ಕೆಲವರು ತಮಗೆ ಸಾಕು ಸಾಕೆನಿಸುವಷ್ಟು ತಿಂದು ತೇಗಿ ಉಳಿದದ್ದನ್ನು ಮತ್ತೊಬ್ಬರ ಕಡೆಗೆ ಒಗೆಯುವರು. ರಂತಿದೇವನ ನಡೆವಳಿಕೆಯು ಇದಕ್ಕಿಂತ ಬಹಳ ಮೇಲೆ ಹೋಗಿತ್ತು. ಹೇಗೆಂದರೆ (ಲಬ್ಧಂ ಲಬ್ಧಂ ದದತಃ) ಅವನು ತಮಗೆ ಬಂದಬಂದದ್ದನ್ನೆಲ್ಲ ಮತ್ತೊಬ್ಬರಿಗಾಗಿ ಸೂರೆ ಮಾಡುತ್ತಿದ್ದನು. ಇವನ ಸ್ಥಿತಿಯು-

**ಕೊಡಲೆಂದು ಕೈ ಎತ್ತೆ ।**
**ಹಿಡಿಯಲ್ಲಿ ನವನಿಧಿಯು ।**
**ಬಿಡದೆ ಭೋಗಿಸೆ ಕುರುಡುಕವಡೆಯಿಲ್ಲ ॥** (ಗು.ಸು)

ಎಂದು ಒಬ್ಬ ಕವಿ ಹೇಳಿದಂತಾಗಿತ್ತು. ಇದರ ಪರಿಣಾಮವೇನಾಯಿತೆಂದರೆ (ನಿಷ್ಕಿಂಚನಸ್ಯ) ಅವನಿಗೆ ತನ್ನ ಭೋಗಕ್ಕೆ ಏನೇನೂ ಇಲ್ಲದಂತಾಯಿತು. ಮುಂದೆ ಅವನ ವ್ಯವಹಾರವು ನಡೆದದ್ದೆಂತೆಂದರೆ (ಸಕುಟುಂಬಸ್ಯ ಸೀದತಃ) ತನಗೂ ತನ್ನ ಮನೆಯವರಿಗೂ ಅನ್ನನೀರಿಲ್ಲದೇ ಶರೀರವೆಲ್ಲ ಸೊರಗಿ ಗಡಗಡ ನಡುಗುವದಕ್ಕಾರಂಭಿಸಿತು. ದಾನವನ್ನು ಮಾಡುವವರು ತಮ್ಮ ಜೀವನಕ್ಕೆ ಬೇಕಾದಷ್ಟನ್ನಿಟ್ಟುಕೊಂಡೇ ಇತರರಿಗೇ ನೀಡಬೇಕೆಂದು ನೀತಿಶಾಸ್ತ್ರಕಾರರೂ ಹೇಳಿರುವರು. ಅದು ನಮ್ಮ ಯುಕ್ತಿಗೂ ಹೊಂದುವದು. ನಾವಿದ್ದರೆ ತಾನೆ ದಾನಮಾಡುವದು? ಹೊಟ್ಟೆಗಿಲ್ಲದೆ ನಾವು ಸತ್ತೇ ಬಿಟ್ಟರೆ ನಾವು ಮುಂದೆ ಸತ್ಕಾರ್ಯವನ್ನು ಮಾಡುವದಿನ್ನೇನು? ಆದರೂ ತನ್ನ ಜೀವನಕ್ಕಾದಮೇಲೆ ಮಿಕ್ಕದ್ದರಲ್ಲಿ ಮಾತ್ರ ದಾನಮಾಡಬೇಕೆಂಬುದು ಕೇವಲ ಪ್ರಾಪಂಚಿಕರನ್ನು ಗುರಿಯಲ್ಲಿಟ್ಟುಕೊಂಡು ಹೇಳಿದ ಮಾತು. ಭಗವದ್ಭಕ್ತರು ತಮಗೆ ಭಗವಂತನಲ್ಲಿರುವ ಅನನ್ಯ ಭಕ್ತಿಯಿಂದ ಮೇಲೆ ಹೇಳಿದ ನೀತಿಯ ಮೆಟ್ಟಿಲಿಗಿಂತ ಮೇಲಕ್ಕೇರಿದವರಾಗಿರುವರು. ಅವರಿಗೆ ಪರಹಿತವೇ ತಮ್ಮ ಹಿತವಲ್ಲದೆ ತಮ್ಮ ಶರೀರದ ಹಿತಕ್ಕೆ ಹೆಚ್ಚುಗಾರಿಕೆ ಇಲ್ಲ. ಪರಹಿತಕ್ಕಾಗಿ ತನುಮನಧನಗಳನ್ನು ಧಾರೆಯೆರೆದವರ ಯೋಗಕ್ಷೇಮದ ಭಾರವನ್ನು ದೇವರು ತಾನು ಹೊಂರುವನು. ಹೀಗಿರುವದರಿಂದ ತಮ್ಮ ಭೋಗೇಚ್ಛೆಯನ್ನು ಪೇಕ್ಷಿಸಿ ಪರಹಿತಕ್ಕಾಗಿ ತಮ್ಮ ಶರೀರವನ್ನು ಕೂಡ ಸೂರೆಮಾಡುವದಕ್ಕೆ ಅವರು ಸಿದ್ಧ. ರಂತಿದೇವನನ್ನು ನೋಡಿ ತನ್ನ ಶರೀರವೇ ಬಿದ್ದು ಹೋಗುವಂಥ ಪ್ರಸಂಗ ಒದಗಿದರೂ ಅವನೇನಾದರೂ ಮನಸ್ಸಿನಲ್ಲಿ ಕಳವಳಿಸಿದನೇ? ಛೇ! ಛೇ !! (ಧೀರಸ್ಯ) ಇಷ್ಟಾದರೂ ಅವನು ಮನಸ್ಸಿನಲ್ಲಿ ಏನೇನೂ ತಳಮಳವಿಲ್ಲದವನಾಗಿದ್ದನು. ಪರಹಿತಕ್ಕಾಗಿ ತನ್ನ ಸರ್ವಸ್ವವನ್ನೂ ಧಾರೆಯೆರೆದದ್ದರಿಂದ ಅವನಿಗೊಂದು ಬಗೆಯ ಲೋಕವಿಲಕ್ಷಣವಾದ ತೃಪ್ತಿಯುಂಟಾಗಿತ್ತು. ಮತ್ತೊಬ್ಬರನ್ನು ತಮಗೆ ಸೂರೆ ಮಾಡಿಕೊಂಡು ಹಿಗ್ಗುವ ಅನುಭವವುಳ್ಳ ಧೀರರು

ಬಹುಜನರು ದೊರೆಯುತ್ತಾರೆ; ತನ್ನನ್ನು ಮತ್ತೊಬ್ಬರಿಗೆ ಸೂರೆಮಾಡಿ ಅದರಿಂದ ಶಾಂತಿಯನ್ನು ಹೊಂದಿರುವ ರಂತಿದೇವನಂಥ ಧೀರರು ಬಹು ಕಡಿಮೆ. ಈ ಧೀರತೆ ಯಿಂದುಂಟಾಗುವ ತೃಪ್ತಿಯ ಅನುಭವವು ಬಹು ಹೆಚ್ಚಿನ ಪುಣ್ಯಾತ್ಮರಿಗೆ ಮಾತ್ರ ದೊರೆಯುವುದು. ರಂತಿ ದೇವರು ಈ ತೃಪ್ತಿಯನ್ನು ಪಡೆದಿದ್ದನು.

ಹೀಗಾಗಿ ಹೊಟ್ಟೆಗೆ ಕಡೆಗೊಂದು ಗುಟುಕುನೀರು ಕೂಡ ಇಲ್ಲದೆ ರಂತಿ ದೇವನ ಆಯುಸ್ಸಿನಲ್ಲಿ ನಲವತ್ತೆಂಟು ದಿನಗಳು ಕಳೆದವು. ರಂತಿದೇವನ ವ್ರತದ ದಾರ್ಢ್ಯವನ್ನು ನೋಡಿ ಅದಕ್ಕೆ ತಕ್ಕ ಫಲವನ್ನು ಕೊಡಬೇಕೆಂದು ದೇವರ ಮನಸ್ಸಿಗೆ ಬಂತು. ವಿದ್ಯಾರ್ಥಿಯ ಅಧ್ಯಯನವೆಲ್ಲ ಮುಗಿದಮೇಲೆ ಒಮ್ಮೆ ಅದರ ಪರಿಪಕ್ವಾವಸ್ಥೆ ಯನ್ನು ಪರೀಕ್ಷಿಸಿ ಆಮೇಲೆ ಯೋಗ್ಯತಾಪತ್ರವನ್ನು ಕೊಡುತ್ತಾರಷ್ಟೆ? ಹಾಗೆಯೇ ಧಾರ್ಮಿಕರು ವ್ರತವು ನಡೆಯುತ್ತಿರುವಾಗ ಸುಮ್ಮನೆ ನೋಡುತ್ತಿದ್ದು ಚೆನ್ನಾಗಿ ಮೈದುಂಬಿಕೊಳ್ಳುತ್ತಲೇ ದೇವರು ಅದರ ವಿಷಯಕವಾದ ತನ್ನ ಮೆಚ್ಚುಗೆ ಯನ್ನು ತೋರಿಸುವದಕ್ಕೆ ಮೊದಲು ಅವರನ್ನು ಪರೀಕ್ಷಿಸುತ್ತಾನೆ. ರಂತಿದೇವನು ಪರೀಕ್ಷೆಗೆ ನಿಲ್ಲುವದಕ್ಕೆ ಸಿದ್ಧನಾಗಿದ್ದದ್ದರಿಂದ ಈಗ ಅವನ ಪರೀಕ್ಷೆ ನಡೆದದ್ದೆಂತೆಂದರೆ -

**ಅತಿಥಿರ್ಬ್ರಾಹ್ಮಣಃ ಕಾಲೇ ಭೋಕ್ತುಕಾಮಸ್ಯ ಚಾಗಮತ್ ||5||**

(ಭೋಕ್ತುಕಾಮಸ್ಯ)ರಂತಿದೇವನು ನಲವತ್ತೊಂಬತ್ತನೆಯ ದಿನ ಆಗ್ಗೆ ದೊರೆತಿ ದ್ದದ್ದನ್ನು ಉಣ್ಣಬೇಕೆಂದಿದ್ದನು. ಹೀಗಿರುವಾಗ (ಕಾಲೇ) ಊಟದ ಹೊತ್ತಿಗೆ ಸರಿಯಾಗಿ(ಅತಿಥಿಃ)ಊಟವನ್ನು ಬಯಸಿ ಆಗ ತಾನೇ ಬಂದ ಪ್ರಯಾಣಿಕನಾದ (ಬ್ರಾಹ್ಮಣಃ) ಒಬ್ಬ ಬ್ರಾಹ್ಮಣನು (ಆಗಮತ್) ಬಂದನು. ನಿಜಸ್ಥಿತಿಯೇನೆಂದರೆ: ಈಗ ಬಂದ ಬ್ರಾಹ್ಮಣನು ಹೊಟ್ಟೆಗಿಲ್ಲದವನಲ್ಲ. ದೇವರೇ ಆ ರೂಪಿನಲ್ಲಿ ಬಂದನು. ವಿದ್ಯಾರ್ಥಿಯನ್ನು ಪರೀಕ್ಷಿಸುವಾಗ ಮೊದಮೊದಲು ಸುಲಭವಾದ ಪ್ರಶ್ನೆಗಳನ್ನು ಹಾಕುತ್ತಾ ಕಷ್ಟವಾದ ವಿಷಯಗಳಿಗೆ ಏರುವದು ಪದ್ಧತಿ. ಪ್ರಕೃತದಲ್ಲಿ ಪ್ರಾಣವೇ ಹೋಗುವಂತಿದ್ದರೂ ತನ್ನ ಅನ್ನವನ್ನು ಮತ್ತೊಬ್ಬರಿಗೆ ಕೊಡುವ ಉದಾರ ಬುದ್ಧಿಯ ತಿರುಳನ್ನು ರಂತಿದೇವನಲ್ಲಿ ನೋಡಬೇಕೆಂದು ದೇವರು ಮೊದಲು ಬ್ರಾಹ್ಮಣನಾಗಿ ಬಂದನು. ಏಕೆಂದರೆ ಸಾಮಾನ್ಯವಾಗಿ ಜನರು ಉಳಿದವರಿಗೆ ಅನ್ನವನ್ನು ನೀಡುವದಕ್ಕೆ ಹಿಂದೆಗೆದರೂ ಬ್ರಾಹ್ಮಣರಿಗೆ ನೀಡುವದಕ್ಕೆ ಹಿಂದೆಗೆಯುವದು ಕಡಿಮೆ. ಈ ಮಾತು ಕೂಡ ಬಹು ಹಿಂದಿನಕಾಲಕ್ಕೆ ಸಂಬಂಧಪಟ್ಟದ್ದು. ಹಿಂದಿನಕಾಲದಲ್ಲಿ ಬ್ರಾಹ್ಮಣರು ಲೌಕಿಕವಾದ ಸಂಪತ್ತನ್ನು ಗಳಿಸುವವರಾಗಿರದೆ ತಪಸ್ಸನ್ನೇ ಸಂಪತ್ತೆಂದು ಭಾವಿಸುವವರಾಗಿ ಅದನ್ನು ಚೆನ್ನಾಗಿ ಬೆಳೆಸಿಕೊಳ್ಳುತ್ತ ತಮ್ಮ ಧರ್ಮೋಪದೇಶದಿಂದ

ಜನರ ಏಳಿಗೆಯನ್ನು ಮಾಡುತ್ತಿದ್ದರು. ಆದ್ದರಿಂದ ಅವರ ಯೋಗಕ್ಷೇಮವನ್ನು ಜನರು ನೋಡಿಕೊಳ್ಳುವದು ಸಕಾರಣವಾಗಿಯೂ ಇತ್ತು; ಜನರು ಅದರಂತೆ ನಡೆಯುತ್ತಲೂ ಇದ್ದರು. ಈಗಿನ ಕಾಲದಲ್ಲಿ ಇದು ಬದಲಾಗಿ ಹೋಗಿದೆ. ಬ್ರಾಹ್ಮಣರೆಲ್ಲರೂ ಇತರರಂತೆ ಲೌಕಿಕವಾದ ಸಂಪತ್ತನ್ನೇ ತಮ್ಮ ಸರ್ವಸ್ವವೆಂದು ಅದನ್ನು ಗಳಿಸುವದಕ್ಕೆ ಕಾರಣವೂ ಇಲ್ಲ. ನೋಡಿಕೊಳ್ಳುವದೂ ಇಲ್ಲ. ಈಗ ನಡೆಯುವ ಪ್ರಸಂಗವು ಪುರಾಣಕಾಲದ ಮಾತಾದ್ದರಿಂದ ತಾವೆಲ್ಲರೂ ಈ ಪುರಾಣವನ್ನು ಕೇಳುವವರಿಗೂ ಪುರಾಣಕಾಲದಲ್ಲಿದ್ದಂತೆ ಭಾವಿಸಿಕೊಳ್ಳಬೇಕು. ಹಾಗಾದರೆ ಮಾತ್ರ ಈಗ ಹೇಳುವ ಅರ್ಥವು ಮನಸ್ಸಿಗೆ ಸಮಂಜಸವಾಗುವದು. ರಂತಿದೇವನ ಸಾಮಾನ್ಯ ಮನೋವೃತ್ತಿಯನ್ನು ಮೊದಲು ಪರೀಕ್ಷಿಸಿ ನೋಡಬೇಕೆಂದು ದೇವರು ಈ ಬ್ರಾಹ್ಮಣರೂಪಿನಿಂದ ಬಂದನು.

ರಂತಿದೇವನಲ್ಲಿ ತನಗೂ ತನ್ನ ಮನೆಯವರಿಗೂ ಒಪ್ಪತ್ತಿಗಾಗುವಷ್ಟಿತ್ತು. ಅತಿಥಿಯು ಬರುತ್ತಲೇ ಅವನನ್ನು ದೇವರೆಂದು ಭಾವಿಸಿ ರಂತಿದೇವನು ಅವನಿಗೆ ಹೊಟ್ಟೆ ತುಂಬುವಂತೆ ಬಡಿಸಿದನು. ರಂತಿದೇವನು ಹೀಗೆ ಈ ಪರೀಕ್ಷೆಯಲ್ಲಿ ಗೆದ್ದ ಮೇಲೆ ದೇವರು ತನ್ನ ಪರೀಕ್ಷೆಯನ್ನು ಮುಂದುವರಿಸಿದ್ದೆಂತೆಂದರೆ : -

**ಅಥಾನ್ಯೋ ಭೋಕ್ಷ್ಯಮಾಣಸ್ಯ ವಿಭಕ್ತಸ್ಯ ಮಹೀಪತೇ ।**
**ವಿಭಕ್ತಂ ವ್ಯಭಜತ್ತಸ್ಮೈ ವೃಷಲಾಯ ಹರಿಂ ಸ್ಮರನ್ ॥7॥**

(ಮಹೀಪತೇ) ಪರೀಕ್ಷಿದ್ರಾಜನೆ, ಕೇಳೆಂದು ಶುಕಾಚಾರ್ಯರು ಹೇಳುತ್ತಾರೆ- (ಅಥ) ಬ್ರಾಹ್ಮಣನು ಉಂಡು ಹೋದ ಮೇಲೆ (ವಿಭಕ್ತಸ್ಯ) ಬ್ರಾಹ್ಮಣನು ಉಂಡು ಮಿಕ್ಕಿದ್ದಿತ್ತಷ್ಟೆ, ಅದನ್ನು(ಭೋಕ್ಷ್ಯಮಾಣಸ್ಯ)ರಂತಿದೇವನು ಉಣ್ಣಬೇಕೆಂದಿದ್ದನು. ಆಗ (ಅನ್ಯೋ) ಮತ್ತೊಬ್ಬನು ಬಂದನು. ಆ ಸಂದರ್ಭದಲ್ಲಿ ರಂತಿದೇವನು (ಹರಿಂ ಸ್ಮರನ್) ಈ ರೂಪದಲ್ಲಿ ಬಂದಿರುವವನು ಪರಮಾತ್ಮನೆಂದು ನೆನೆದು (ತಸ್ಮೈ ವೃಷಲಾಯ) ಆ ಶೂದ್ರನಿಗೆ(ವಿಭಕ್ತಂ ವ್ಯಭಜತ್) ಆ ಅನ್ನದಲ್ಲಿ ಪಾಲುತೆಗೆದು ಹಂಚಿದನು. ಒಬ್ಬನೇ ದೇವರು ಎಲ್ಲ ಕಡೆಯಲ್ಲಿಯೂ ಇರುವನೆಂಬ ಮಾತು ಎಲ್ಲರ ಕಿವಿಗೂ ಬಿದ್ದಿದ್ದರೂ ಜನರು ಮೇಲುಗೈಯಾದ ಪದಾರ್ಥದಲ್ಲಿ ದೇವರ ಇರುವಿಕೆಯನ್ನು ಭಾವಿಸಿದಂತೆ ಕೀಳಾದ ಪದಾರ್ಥದಲ್ಲಿ ಭಾವಿಸುವದಿಲ್ಲ. ಬ್ರಾಹ್ಮಣರನ್ನು ದೇವರೆಂದು ಭಾವಿಸಿದಂತೆ ಶೂದ್ರನನ್ನು ದೇವರೆಂದು ಭಾವಿಸುವದು ಅನೇಕರಿಗೆ ಒಪ್ಪಾಗುವದಿಲ್ಲ. ಎಲ್ಲಿಯೂ ದೇವರ ಇರುವಿಕೆಯನ್ನೇ ಒಪ್ಪದೆ ಇರುವವರು ಕೆಲವರಿದ್ದರೂ ಅವರು ಇಲ್ಲಿ ಉದಾಹರಣೆಗೆ ಅರ್ಹರಲ್ಲ. ನಾಸ್ತಿಕ ರಿನ್ನೊಂದು ಕಡೆಗೆ ತಳ್ಳಿ ಆಸ್ತಿಕರನ್ನೆ ಗ್ರಹಿಸಬೇಕು.

ರಂತಿದೇವನು ಕಡಿಮೆಯ ಯೋಗ್ಯತೆಯುಳ್ಳ ಶೂದ್ರನನ್ನು ಹೇಗೆ ಭಾವಿಸುತ್ತಾನೋ ನೋಡಬೇಕೆಂದು ತನ್ನ ಪರೀಕ್ಷೆಯ ಬಿಗುಹನ್ನು ಹುರಿಗೊಳಿಸಿ ಈಗ ದೇವರು ಶೂದ್ರನಾಗಿ ಬಂದನು. ರಂತಿದೇವನು ಶೂದ್ರನ ಹೃದಯದಲ್ಲಿರುವವನೂ ತನ್ನ ಹೃದಯದಲ್ಲಿರುವ ದೇವರೇ ಎಂದು ಅವನ ಬಯಕೆಯನ್ನು ತನ್ನ ಬಯಕೆಗಾಗಿ ಭಾವಿಸಿ ಅವನಿಗೆ ಕೈತುಂಬ ನೀಡಿ ಈ ಪರೀಕ್ಷೆಯಲ್ಲಿಯೂ ಉತ್ತೀರ್ಣನಾದನು. ಪರೀಕ್ಷೆ ಇನ್ನೂ ಬಿಗಿಯಾಗು ವದಕ್ಕಾರಂಭವಾಯಿತು. ಅದೆಂತೆಂದರೆ :-

**ಯಾತೇ ಶೂದ್ರೇ ತಮನ್ಯೋಽಗಾದತಿಥಿಃ ಶ್ವಭಿರಾವೃತಃ |**
**ರಾಜನ್ಮೇ ದೀಯತಾಮನ್ನಂ ಸಗಣಾಯ ಬುಭುಕ್ಷತೇ ||8||**

(ಶೂದ್ರೇ) ಆ ಶೂದ್ರನು (ಯಾತೇ) ಉಂಡು ಹೋದಮೇಲೆ (ರಾಜನ್) ರಂತಿದೇವನೆ, (ಸಗಣಾಯ) ನಾಯಿಗಳ ಗುಂಪಿನಿಂದ ಕೂಡಿ (ಬುಭುಕ್ಷತೇ) ಅನ್ನವನ್ನು ಬಯಸುತ್ತಿರುವ (ಮೇ) ನನಗೆ (ಅನ್ನಂ) ಅನ್ನವು (ದೀಯತಾಂ) ಕೊಡಲ್ಪಡಲಿ- ಎಂದು (ತಂ) ಆ ರಂತಿದೇವನ ಒಳಿಗೆ (ಶ್ವಭಿರಾವೃತಃ) ನಾಯಿಗಳು ಸುತ್ತುಗಟ್ಟಿಕೊಂಡಿರುವ (ಅನ್ಯಃ) ಮತ್ತೊಬ್ಬ (ಅತಿಥಿಃ) ಊಟವನ್ನು ಬಯಸಿ ಆಗತಾನೆ ಬಂದ ಪ್ರಯಾಣಿಕನು(ಆಗಾತ್) ಬಂದನು. ರಂತಿದೇವನು ಶೂದ್ರನಲ್ಲಿ ದೇವತ್ವವನ್ನು ನೋಡುತ್ತಾನೆಂದು ಮೊದಲೇ ಸಿದ್ಧವಾಗಿದ್ದರೂ ಈಗ ನಾಯಿಗಳನ್ನು ಯಾವ ಭಾವನೆಯಿಂದ ನೋಡುತ್ತಾನೆಂಬುದೇ ಮುಖ್ಯ ಪರೀಕ್ಷೆ.

ಆಗ ರಂತಿದೇವನು ತನ್ನಲ್ಲಿರುವ ಪರಮಾತ್ಮನೂ ಅವರಲ್ಲಿರುವ ಪರಮಾತ್ಮನೂ ಒಂದೇ ಎಂದು ನೆನೆದು ''ಶ್ವಭ್ಯಃ ಶ್ವಪತಿಭ್ಯಶ್ಚ'' ಎಂಬ ವೇದಮಂತ್ರವನ್ನು ಹೇಳಿ ಕೊಂಡು ನಾಯಿಗಳಿಗೂ ನಾಯಿಗಳೊಡೆಯನಿಗೂ ಅಡ್ಡಬಿದ್ದು ಆದರದಿಂದ ತನ್ನಲ್ಲಿದ್ದದ್ದನ್ನೆಲ್ಲ ಬಡಿಸಿ ಕೈತೊಳೆದುಕೊಂಡನು. ನಾಯಿಗಳೆಂದು ಕಡೆಗಾಣದೆ ಅವುಗಳ ಮೇಲೆಯೂ ಆದರವನ್ನು ತೋರಿಸಿದ್ದು ದೇವರಿಗೆ ಆನಂದವನ್ನುಂಟುಮಾಡಿತು. ಈ ಪರೀಕ್ಷೆಯನ್ನೂ ದಾಟಿದರೂ ದೇವರು ಅವನಿಗಿನ್ನೂ ಯೋಗ್ಯತಾಪತ್ರವನ್ನು ಕೊಡಲಿಲ್ಲ. ಏಕೆಂದರೆ ತನಗೇನೇನೂ ಉಳಿಯದಂತಾಗುವವರೆಗೂ ಕೊಡುವ ವ್ರತವನ್ನು ಹಿಡಿದ ರಂತಿದೇವನಲ್ಲಿ ಒಬ್ಬನು ಕುಡಿಯುವದಕ್ಕಾಗುವಷ್ಟು ನೀರು ಉಳಿದಿತ್ತು. ಆದ್ದರಿಂದ ಇನ್ನೊಮ್ಮೆ ಪರೀಕ್ಷಿಸಿ ಮುಗಿಸೋಣವೆಂದು ದೇವರು ಅದಕ್ಕಾಗಿ ಬಾಯಿಬಿಟ್ಟುಕೊಂಡು ಒಬ್ಬಹೊಲೆಯನಾಗಿ ಬಂದನು. ರಂತಿದೇವನು ನಾಯಿಗಳನ್ನು ಕೂಡ ದೇವರೆಂದು ಕಂಡಿದ್ದರೂ ಆ ನಾಯಿಗಳನ್ನು ಬೇಯಿಸಿಕೊಂಡು ತಿನ್ನುವ ಹೊಲೆ ಯಲ್ಲಿ ಯಾವ ದೃಷ್ಟಿಯನ್ನಿಡುತ್ತಾನೋ ನೋಡಬೇಕೆಂಬುದು ಈ ಕೊನೆಪರೀಕ್ಷೆ. ಆ

ಸಮಯದಲ್ಲಿ ಆ ನೀರನ್ನು ಕೂಡ ಪರಹಿತಕ್ಕೆ ಉಪಯೋಗಿಸುವ ಸುಯೋಗವು ಒದಗಿತೆಂದು ಉತ್ಸಾಹಗೊಂಡು ರಂತಿದೇವನು ಹೊಲೆಯನಿಗೆ ಪ್ರೇಮಪೂರ್ವಕವಾಗಿ ಹೇಳಿದ್ದೇನೆಂದರೆ -

**ನ ಕಾಮಯೇಽಹಂ ಗತಿರೀಶ್ವರಾತ್ಪರಾ-**
**ಮಷ್ಟರ್ದ್ಧಿಯುಕ್ತಾಮಪುನರ್ಭವಂ ವಾ ।**
**ಆರ್ತಿಂ ಪ್ರಪದ್ಯೇಽಖಿಲದೇಹಭಾಜಾ-**
**ಮಂತಃಸ್ಥಿತೋ ಯೇನ ಭವಂತ್ಯದುಃಖಾಃ ॥12॥**

(ಅಹಂ)ನಾನು (ಈಶ್ವರಾತ್) ದೇವರಿಂದ (ಅಷ್ಟರ್ದ್ಧಿಯುಕ್ತಾಂ) ಅಣಿಮಾ ಮೊದಲಾದ ಎಂಟು ಸಿದ್ಧಿಗಳಿಂದ ಕೂಡಿದ (ಪರಾಂಗತಿಂ) ಉತ್ತಮಗತಿಯನ್ನಾಗಲಿ ಎಂದರೆ ಉತ್ತಮಲೋಕಗಳ ಪ್ರಾಪ್ತಿಯಾಗಲಿ (ಅಪುನರ್ಭವಂ ವಾ) ಮತ್ತೆ ಹುಟ್ಟುವಿಕೆಯೇ ಇಲ್ಲದಂಥ ಮೋಕ್ಷವನ್ನಾಗಲಿ (ನ ಕಾಮಯೇ) ಬಯಸುವದಿಲ್ಲ. ಇವೆರಡೂ ಬಹು ದುರ್ಲಭವಾದವುಗಳಾದರೂ ನನಗೆ ಬೇಡ. (ಯೇನ) ಯಾವದ ರಿಂದ ಸಮಸ್ತರೂ (ಅದುಃಖಾಃ) ದುಃಖವಿಲ್ಲದವರು (ಭವಂತಿ) ಆಗುವರೊ ಹಾಗೆ (ಅಖಿಲದೇಹಭಾಜಾಂ) ಎಲ್ಲಾ ಪ್ರಾಣಿಗಳ (ಅಂತಃಸ್ಥಿತಃ) ಮನಸ್ಸಿನಲ್ಲಿ ದುಃಖಾನು ಭವವನ್ನು ಮಾಡುತ್ತಿರುವವನಾಗಿ(ಆರ್ತಿಂ) ದುಃಖವನ್ನು (ಪ್ರಪದ್ಯೇ) ಪಡೆಯಲು ಇಚ್ಛಿಸುತ್ತೇನೆ -ಎಂದು ಅವನು ತನ್ನಲ್ಲಿದ್ದ ನೀರನ್ನು ಅವನಿಗೆ ಕೊಟ್ಟು ಕಳೆಯೇರಿದವ ನಾದನು. ರಂತಿದೇವನ ಈ ನಡೆವಳಿಕೆಯಿಂದ ಭಗವದ್ಗೀತೆಯ ಒಂದು ಶ್ಲೋಕವು ಅರ್ಥವತ್ತಾಗಿರುವದೆಂತೆಂದರೆ-

**''ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।**
**ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ ॥''-(5-18)**

**ಆ ಜ್ಞಾನದಿಂದಲೂ ವಿನಯದಿಂದಲೂ ಕೂಡಿದ ಬ್ರಾಹ್ಮಣನಲ್ಲಿಯೂ ಆಕಳಲ್ಲಿಯೂ ಆನೆಯಲ್ಲಿಯೂ ನಾಯಿಯಲ್ಲಿಯೂ ಹೊಲೆಯನಲ್ಲಿಯೂ ಎಲ್ಲೆಲ್ಲಿ ಯೂ ಒಬ್ಬ ದೇವರೇ ತುಂಬಿಕೊಂಡಿರುವನೆಂದು ಜ್ಞಾನಿಗಳು ನೋಡುವರು.**

**ಇಲ್ಲಿಗೆ ಪರೀಕ್ಷೆ ಮುಗಿಯಿತು. ಆದರೂ ಅವನ ಜ್ಞಾನದ ತಿರುಳನ್ನು ನೋಡಿದ ದೇವರು ಆ ತಿರುಳಿನ ತೂಕವನ್ನು ನೋಡಬೇಕೆಂದು ಇನ್ನೊಂದು ಘಟ್ಟವನ್ನು ತಂದೊಡ್ಡಿದ್ದೆಂತೆಂದರೆ-**

**ತಸ್ಯ ತ್ರಿಭುವನಾಧೀಶಾಃ ಫಲದಾಃ ಫಲಮಿಚ್ಛತಾಮ್ ।**
**ಆತ್ಮಾನಂದರ್ಶಯಾಂಚಕ್ರುರ್ಮಾಯಾವಿಷ್ಣುವಿನಿರ್ಮಿತಾಃ ॥15॥**

(ಫಲಮಿಚ್ಛತಾಂ) ಫಲವನ್ನು ಬಯಸುವವರಿಗೆ (ಫಲದಾಃ) ಫಲವನ್ನು ಕೊಡುವವರಾದಂಥ (ಮಾಯಾವಿಷ್ಣುವಿನಿರ್ಮಿತಾಃ) ದೇವರ ಮಾಯೆಯಿಂದ ಹುಟ್ಟಿದವರಾದಂಥ (ತ್ರಿಭುವನಾಧೀಶಾಃ)ಮೂರು ಲೋಕದ ಒಡೆಯರಾದ ಬ್ರಹ್ಮನೇ ಮೊದಲಾದ ತ್ರಿಮೂರ್ತಿಗಳು (ತಸ್ಯ) ಆ ರಂತಿದೇವನಿಗೆ (ಆತ್ಮಾನಂ) ತಮ್ಮನ್ನು (ದರ್ಶಯಾಂಚಕ್ರುಃ)ಕಾಣಿಸಿಕೊಂಡರು. ಜಗತ್ತಿನಲ್ಲಿ ಹರಿಹರಬ್ರಹ್ಮರೆಂಬ ತ್ರಿಮೂರ್ತಿಗಳೇ ತುಟ್ಟತುದಿಯ ದೇವರೆಂದು ಎಲ್ಲರೂ ತಿಳಿದಿರುವರು; ಆದರೆ ನಿಜಸ್ಥಿತಿ ಅದಲ್ಲ. ಆ ತ್ರಿಮೂರ್ತಿಗಳು ಫಲವನ್ನು ಬಯಸುವವರಿಗೆ ಫಲವನ್ನು ಕೊಡುವದಕ್ಕಾಗಿ ಭಗವಂತನ ಮಾಯೆಯಿಂದ ರೂಪುಗೊಂಡಿರತಕ್ಕವರು. ಆ ಮೂವರೂ ಎದುರಿಗೆ ಬಂದು ತಮ್ಮ ಮೆಚ್ಚುಗೆಯನ್ನು ತೋರಬೇಕಾದ ವರವನ್ನು ಬೇಡು ಎಂದರು.

ತ್ರಿಮೂರ್ತಿಗಳು ಎದುರಿಗೆ ಬಂದರೂ ಕೂಡ ರಂತಿದೇವನಿಗೆ ಅದೊಂದು ಹೆಚ್ಚೆನಿಸಲಿಲ್ಲ. ಏಕೆಂದರೆ ಅವರು ಎಲ್ಲರಲ್ಲಿಯೂ ಒಳಹೊಕ್ಕಿರುವ ದೇವರಲ್ಲ. ಅವರು ಮೂವರೂ ಒಂದೊಂದು ಪರಿಮಿತವಾದ ದೇಹವುಳ್ಳವರು. ಅವರು ಎಲ್ಲರಲ್ಲಿಯೂ ಇರುವದಕ್ಕೆ ಹೇಗಾದೀತು? ಇದಲ್ಲದೆ ಸಂಖ್ಯೆಗಳಲ್ಲೆಲ್ಲ ಒಂದೆಂಬುದು ಹೇಗೆ ಮೂಲವಾಗಿ ನಿಲ್ಲುತ್ತದೋ ಅನೇಕಗಳಿಗೆ ಮೂಲವಾದ ದೇವರು ಒಬ್ಬನಾಗಬೇಕೇ ಹೊರತು ಮೂವರಾಗಲಾರರು. ಮೂವರೂ ದೇವರಾದರೆ ಅನೇಕರು ಯಜಮಾನಿಕೆಯಿಂದ ಜಗತ್ತಿನಲ್ಲಿ ಅವ್ಯವಸ್ಥೆಯುಂಟಾಗುತ್ತಿತ್ತು. ಅವರಲ್ಲಿ ಒಬ್ಬನನ್ನು ದೇವರೆನ್ನುವದಾದರೆ ಯಾರನ್ನು ದೇವರೆನ್ನಬೇಕು? ಹರಿಯನ್ನೂ ಹರನನ್ನೂ ಮುಖ್ಯ ದೇವರೆನ್ನುವವರಿದ್ದರೂ ಬ್ರಹ್ಮನನ್ನು ಹಾಗೆ ಯಾರೂ ಈಗ ಭಾವಿಸುವದಿಲ್ಲ. ಇನ್ನು ಅವರಲ್ಲಿ ಒಬ್ಬನು ದೇವರಾಗಿ ಇನ್ನಿಬ್ಬರು ಅವನ ಪ್ರೀತಿಯ ಗೆಳೆಯರೆಂದರೆ, ತ್ರಿಮೂರ್ತಿಗಳೆಂದು ಅವರನ್ನು ಕರೆಯುವದು ಸಲ್ಲದೆಹೋದೀತು. ಏಕೆಂದರೆ ಸಂಖ್ಯೆಯಿಂದ ಸಮುದಾಯವನ್ನು ಹೇಳುವಾಗ ಸಮಾನವಾದ ಯೋಗ್ಯತೆಯವರನ್ನು ಹೇಳಿದರೆ ಮಾತ್ರ ಸಮಂಜಸವಾಗುವದು. ರಾಜನೂ ಅವನ ಇಬ್ಬರು ಗೆಳೆಯರೂ ಕೂಡಿರುವದನ್ನು ನೋಡಿ ಮೂವರು ರಾಜರೆಂದು ಯಾವ ಬುದ್ಧಿಗೇಡಿಯೂ ಹೇಳಲಾರನು. ಹರಿಹರಬ್ರಹ್ಮರನ್ನು ತ್ರಿಮೂರ್ತಿಗಳೆಂದು ಒಂದು ಗುಂಪುಮಾಡಿ ಹೇಳುವದರಿಂದ ಇವರಲ್ಲಿ ಯಾರೂ ಒಬ್ಬರಿಗೊಬ್ಬರು ಅಧೀನರಲ್ಲ ಒಬ್ಬರಿಗೊಬ್ಬರಿಗೆ ಹೆಚ್ಚು ಕಡಿಮೆಯೂ ಇಲ್ಲ. ಬೇಡಿದವರಿಗೆ ಫಲಗಳನ್ನು ಕೊಡುವದಕ್ಕೆ ಮೂವರೂ ಸಮಾನರಾದ ಅಧಿಕಾರಿಗಳು. ಆದ್ದರಿಂದ ಈ ಮೂವರ ಮೂಲ ಕಾರಣನಾದ

ಪರಮಾತ್ಮನು ಬೇರೆ. ರಂತಿದೇವನ ಲಕ್ಷ್ಯವಿರುವದು ಆ ಪರಮಾತ್ಮನಲ್ಲಿ. ಇವರು ಫಲವನ್ನು ಕೊಡುವವರು ಮಾತ್ರವೆಂದು ಅವನಿಗೆ ಗೊತ್ತು. ಭಗವದ್ಭಾವನೆಯಲ್ಲಿ ಮುಳುಗಿಹೋಗಿದ್ದ ರಂತಿದೇವನಿಗೆ ಭಗವಂತನ ಹೊರತು ಎರಡನೇ ಯಾವ ಫಲವೂ ಬೇಕೆನಿಸಲಿಲ್ಲವಾದ್ದರಿಂದ ಅವನು ಅವರಿಗೆ ಸುಮ್ಮನೆ ಅಡ್ಡಬಿದ್ದನು. ಅವರಿಂದ ತನಗೆ ಹದಿನಾಲ್ಕು ಲೋಕಗಳ ಒಡೆಯತನವೇ ಬರಬಹುದಾಗಿದ್ದರೂ ಅದಕ್ಕೆ ಬಾಯಿನೀರು ಸುರಿಸದೆ ಹೋದದ್ದೆ ಅವನ ಜ್ಞಾನದ ತಿರುಳಿನ ತೂಕ. ಈ ತೂಕವನ್ನು ಕಂಡೊಡನೆ ದೇವರು ಅನುಗ್ರಹಿಸಿದನು. ಅದರ ಪ್ರಭಾವವನ್ನು ಹೇಳುವದೇನು !

**ಈಶ್ವರಾಲಂಬನಂ ಚಿತ್ತಂ ಕುರ್ವತೋಽನನ್ಯರಾಧಸಃ ।**
**ಮಾಯಾಗುಣಮಯೀ ರಾಜನ್ ಸ್ವಪ್ನವತ್ಪ್ರತ್ಯಲೀಯತ ॥17॥**

(ರಾಜನ್) ಪರೀಕ್ಷಿದ್ರಾಜನೆ, ಕೇಳೆಂದು ಶುಕಮಹರ್ಷಿಗಳು ಹೇಳುತ್ತಾರೆ; (ಅನನ್ಯರಾಧಸಃ) ಈಶ್ವರನ ಹೊರತು ಬೇರೆ ಫಲಕ್ಕೆ ಬಾಯಿನೀರುಗರೆಯದೆ (ಚಿತ್ತಂ) ಮನಸ್ಸನ್ನು (ಈಶ್ವರಾಲಂಬನಂ) ಈಶ್ವರನನ್ನು ಸುತ್ತಿಕೊಂಡಿರುವದಾಗಿ (ಕುರ್ವತಃ) ಮಾಡುವ ಆ ರಂತಿದೇವನ ಭಾಗಕ್ಕೆ (ಗುಣಮಯೀ) ಸತ್ತ್ವರಜಸ್ತಮೋಗುಣಗಳಿಂದ ಕೂಡಿದ (ಮಾಯಾ) ಮಾಯೆಯು (ಸ್ವಪ್ನವತ್) ಕನಸಿನಂತೆ (ಪ್ರತ್ಯಲೀಯತ) ಅಡಗಿತು. ತಾನು ಉಪವಾಸವಿದ್ದರೂ ಬ್ರಾಹ್ಮಣ, ಶೂದ್ರ, ನಾಯಿಗಳು, ಹೊಲೆಯ ಇವರೆಲ್ಲ ಬಂದದ್ದೂ ತ್ರಿಮೂರ್ತಿಗಳ ಸಾಕ್ಷಾತ್ಕಾರವಾದದ್ದೂ ಎಲ್ಲವೂ ಭಗವದನುಗ್ರಹದಿಂದ ಬರೀ ತೋರಿಕೆಯಾಗಿ ತಿಳಿಯಿತು. ಎಲ್ಲೆಲ್ಲಿಯೂ ತುಂಬಿಕೊಂಡಿರುವದಾಗಿ ಭಾವನಾಮಾತ್ರದಲ್ಲಿದ್ದ ಪರಮಾತ್ಮನ ಸ್ವರೂಪವು ಈಗ ರಂತಿದೇವನ ಕಣ್ಣಿಗೆ ಕಟ್ಟಿದಂತೆ ಆಯಿತು. ಈ ಲೋಕದ ಅಥವಾ ಪರಲೋಕದ ಸಂಬಂಧವಾದ ಫಲಗಳನ್ನು ಕೊಡುವದಕ್ಕೆ ದೇವರು ಇಷ್ಟೇನೂ ಪರೀಕ್ಷಿಸುವದಿಲ್ಲ. ಏಕೆಂದರೆ ಆ ಫಲಗಳಲ್ಲೇನೂ ಹುರುಳಿರುವದಿಲ್ಲವಾದ್ದರಿಂದ ಸ್ವಲ್ಪ ಪ್ರಯತ್ನಕ್ಕೇ ಅವುಗಳನ್ನು ಸೂರೆಮಾಡುವನು. ನಿರ್ಗುಣ ಜ್ಞಾನವು ಅಮೌಲ್ಯವಾದದ್ದು. ಆದ್ದರಿಂದ ಅದನ್ನು ಕೊಡುವದಕ್ಕೆ ಹೀಗೆ ಪರೀಕ್ಷಿಸುವನು. ಈ ಪರೀಕ್ಷೆಯಲ್ಲಿ ಪಾರಾದೊಡನೆ ಮಾಯೆ ಹಿಮ್ಮೆಟ್ಟುವದು. ಹೀಗೆ ಮಾಯೆಯ ಕಟ್ಟು ಕಳಚಿಕೊಂಡುಹೋದ್ದರಿಂದ ರಂತಿದೇವನು ಜೀವನ್ಮುಕ್ತನಾಗಿ ತನ್ನ ಜನ್ಮವನ್ನು ಸಾರ್ಥಕಮಾಡಿಕೊಂಡನು. ಈ ರೀತಿಯಲ್ಲಿ ಸಾತ್ತ್ವಿಕಜ್ಞಾನವು ಪರಮಾತ್ಮನ ಸಾಕ್ಷಾತ್ಕಾರಕ್ಕೆ ಬಹಳ ಹತ್ತಿರದ ಮೆಟ್ಟಿಲಾದ್ದರಿಂದ ಅದನ್ನು ಮೈಗೂಡಿಸಿಕೊಳ್ಳುವದಕ್ಕೆ ಎಲ್ಲರೂ ಪ್ರಯತ್ನಿಸಬೇಕು. ಅದರಿಂದ ದೇವತಾನುಗ್ರಹವು ತನಗೆ ತಾನೆ ಆಗುವದು.

*****

# 8. ನಮನ ಮತ್ತು ಮನನ

ದೇವರೆಂಬುವನು ನಮಗೆ ನಿಲುಕದಂತೆ ಎಲ್ಲಿಯೋ ದೂರದಲ್ಲಿದ್ದು ಕೊಂಡಿರುವನೆಂದು ಸಾಮಾನ್ಯ ಜನರೆಲ್ಲರೂ ತಿಳಿದಿರುವರು. ಆದ್ದರಿಂದಲೇ ಅವರು ಅವನನ್ನು ಕಾಣಬೇಕೆಂಬ ಯತ್ನದ ಗೋಜಿಗೆ ಹೋಗುವದಿಲ್ಲ. ಇದರಿಂದ ಅವರು ದೇವರಿಗೆ ದೂರವಾಗಿಯೇ ಉಳಿದುಕೊಂಡಿರುವರು. ಇದು ಬಹಳ ಹೆಚ್ಚಿನ ದುರ್ದೈವದ ಸ್ಥಿತಿ. ಏಕೆಂದರೆ ದೇವರುಹಾಗೆ ಯಾರಿಗೂ ದೂರನಾಗಿಲ್ಲ. ಅವನು ಪ್ರಪಂಚದಲ್ಲಿಯೇ ಎಲ್ಲೆಲ್ಲಿಯೂ ತುಂಬಿತುಳುಕುತ್ತಿದ್ದಾನೆ. ಜಗತ್ತಿನಲ್ಲಿ ಇದೆ ಇದೆ ಎಂದು ಕಾಣುವ ಇರುವಿಕೆಯ ರೂಪವೆಲ್ಲ ದೇವರದೇ ಎಂಬುದನ್ನು ಎತ್ತಿ ಹಿಡಿದು ತೋರಿಸುವ ಎಂಟನೆಯ ಲೇಖನವು ವಿಚಾರಕರ ಮನಸ್ಸಿನ ಮೇಲೆ ತನ್ನ ಮುದ್ರೆಯನ್ನು ಬಲವಾಗಿ ಒತ್ತಿರುವದೆಂದು ನಿರೀಕ್ಷಿಸುತ್ತೇನೆ.

ಪ್ರತಿಯೊಂದು ವಸ್ತುವಿನಲ್ಲಿಯೂ ಕಾಣುವ ಇರುವಿಕೆಯೆಂಬುದು ಆಯಾ ವಸ್ತುಗಳ ಧರ್ಮವಷ್ಟೆ. ಆ ಧರ್ಮವೇ ದೇವರ ಸ್ವರೂಪವಲ್ಲ. ಏಕೆಂದರೆ ಧರ್ಮ ವೆಂಬುದು ಧರ್ಮಿಯನ್ನು (ವಸ್ತುವನ್ನು) ಬಿಟ್ಟಿರಲಾರದು. ಹಾಗೆ ದೇವರು ಮತ್ತೊಂದರ ಕೈಗೂಸಲ್ಲ. ಅವನು ಇನ್ನೊಂದನ್ನು ಆಶ್ರಯಿಸಿಕೊಂಡು ತೋರುವವ ನಾಗಿರದೆ ತೋರುವವುಗಳಿಗೆಲ್ಲ ಆಶ್ರಯವನ್ನು ಕೊಟ್ಟಿರುವವನಾಗಿರುವನು. ಹಾಗಾದ ಮೇಲೆ ಪ್ರತಿಯೊಂದು ವಸ್ತುವಿನಲ್ಲಿಯೂ ತೋರುವ ಇರುವಿಕೆಯನ್ನು ದೇವರೆಂದ ದ್ದೇಕೆಂದರೆ ಅದು ಆ ಇರುವಿಕೆಗೆಲ್ಲ ಆಧಾರವಾದ ನಿಜವಾದ ಇರುವಿಕೆಯ ಸಂಬಂಧವನ್ನು ಮನಸ್ಸಿನಲ್ಲಿಟ್ಟುಕೊಂಡು ಆಡಿದ ಮಾತು. ಜಗತ್ತಿನಲ್ಲಿ ತೋರುವ ಇರುವಿಕೆಯೆಲ್ಲ ಪ್ರಾಣಿಗಳಲ್ಲಿ, ಅದರಲ್ಲಿಯೂ ವಿಶೇಷವಾಗಿ ಮನುಷ್ಯರಲ್ಲಿ, ಎದ್ದು ಕಾಣುವ ಜ್ಞಾನವನ್ನಾಶ್ರಯಿಸಿಕೊಂಡಿರುವದು. ''ಇದೆ, ಇದೆ'' ಎಂದು ನಾವು ಹೇಳುವಾಗಲೆ ಅದು ನಮ್ಮ ಜ್ಞಾನಕ್ಕೆ ಸಂಬಂಧಪಟ್ಟೇ ಇರುವದು. ಜ್ಞಾನಕ್ಕೆ ಸಂಬಂಧ ಪಡದ ಇರುವಿಕೆಯೆಂಬುದೇ ಇಲ್ಲ. ಆ ಜ್ಞಾನಕ್ಕೆಂದಿಗೂ ಅಳವಿಲ್ಲ. ಆ ಜ್ಞಾನದ ಇಲ್ಲದಿರುವಿಕೆಯನ್ನು ಊಹಿಸುವದಕ್ಕೆ ಕೂಡ ಆಗುವುದಿಲ್ಲ. ಏಕೆಂದರೆ ಅದನ್ನು ಊಹಿಸುವದಕ್ಕೂ ಜ್ಞಾನವೇ ಬೇಕಾಗುವದು. ಹೀಗೆ ಜ್ಞಾನವೇ ನಿಜವಾದ ಇರುವಿಕೆ. ಜ್ಞಾನದ ಈ ನಿಜವಾದ ಇರುವಿಕೆಯು ತನಗೆ ಒಳಗಾಗುವ ವಿಷಯಗಳ ಮೇಲೆಲ್ಲ ತನ್ನ ಬೆಳಕನ್ನು ಬೀರುವದು. ಆ ಬೆಳಕೇ ನಮ್ಮ ಹೊರಗಣ ವಸ್ತುಗಳಲ್ಲಿ ಇರುವಿಕೆಯ ಧರ್ಮವಾಗಿ ತೋರಿಕೊಳ್ಳುವದು. ಆದ್ದರಿಂದ ವಸ್ತುಗಳ ಆ ಇರುವಿಕೆಯ ಸ್ವರೂಪವನ್ನು ದೇವರೆಂದು ಹೇಳಿದ್ದಾಗಿರುವದು. ವಸ್ತುಗಳಲ್ಲಿ ತೋರುವ ಇರುವಿಕೆಯು ಪ್ರಾಣಿಗಳಲ್ಲಿ ಎದ್ದು ಕಾಣುವ ಜ್ಞಾನವೆಂಬ ನಿಜವಾದ ಇರುವಿಕೆಯನ್ನು ಬಿಟ್ಟು

ಬೇರೆಯಾಗಿ ಇಲ್ಲವೇ ಇಲ್ಲವಾದ್ದರಿಂದ ವಸ್ತುಗಳ ಇರುವಿಕೆಯನ್ನು ದೇವರೆಂದರೂ ಸಲ್ಲುವದು. ಈ ಅಭಿಪ್ರಾಯವನ್ನು ಲಕ್ಷ್ಯದಲ್ಲಿಟ್ಟುಕೊಂಡು ಹಿಂದಿನ ಲೇಖನವನ್ನು ಸಾವಧಾನದಿಂದ ಗ್ರಹಿಸಬೇಕು.

**ಅಧ್ಯಾತ್ಮವಿಚಾರಗಳು - ಎಂದರೆ ಆತ್ಮಸ್ವರೂಪವನ್ನು ಕುರಿತು ತಿಳಿಯ ಹೇಳುವ ಮಾತುಗಳು** - ಅವುಗಳನ್ನು ಬೇಗಬೇಗ ನುಂಗಿದಾಗ ತಮ್ಮ ರಸವು ಹೊರಬೀಳುವಷ್ಟು ನುರಿತಿರುವದಿಲ್ಲ. ಆ ಆಹಾರವು ನಮ್ಮ ರಕ್ತಗತವಾಗಬೇಕಾದರೆ ಅದನ್ನು ನಾವು ಮತ್ತೆ ಮತ್ತೆ ಮೆಲಕುಹಾಕಿ ಚೆನ್ನಾಗಿ ಅಗಿಯಬೇಕು. ಮೆಲಕು ಹಾಕುವ ದೃಷ್ಟಾಂತದಿಂದ ವಾಚಕರನ್ನು ಪಶುಗಳಿಗೆ ಹೋಲಿಸಿದಂತಾಯಿತೆಂದು ಯಾರೂ ಕೋಪಗೊಳ್ಳಬಾರದು. ಎಲ್ಲಿಯವರೆಗೆ ನಾವು ನಮ್ಮ ಆತ್ಮವೆಂದರೇನೆಂದು ಅರಿತು ನಮ್ಮ ಬುದ್ಧಿಶಕ್ತಿಯನ್ನು ಸಾರ್ಥಕಗೊಳಿಸುವದಿಲ್ಲವೋ ಅಲ್ಲಿಯವರೆಗೆ ನಾವು ನಮ್ಮ ಆಹಾರ, ನಿದ್ರೆ, ಭಯ, ಮೈಥುನ ಇಷ್ಟುಮಾತ್ರದ ನಡವಳಿಕೆಗಳಿಂದ ದ್ವಿಪಾದ ಪಶುಗಳೇ ಆಗಿರುವೆವು. ಆದ್ದರಿಂದ ಈಗ ನಾವು ಪಶುಗಳಂತೆ ಆತ್ಮವಿಚಾರಗಳನ್ನು ಮೆಲಕುಹಾಕಬೇಕು. ಈ ಮೆಲಕಿನಲ್ಲಿರುವ ಒಂದು ಹೆಚ್ಚಿನ ಗುಣವೇನೆಂದರೆ ಅದು ಪಶುತ್ವವನ್ನು ಕಳೆದು ಮನುಷ್ಯತ್ವವನ್ನು ಕೂಡ ದಾಟಿಸಿದೇವತ್ವವನ್ನು ಮೈಗೂಡಿಸುವದು. ಆದ್ದರಿಂದ ಈ ಸಂದರ್ಭದಲ್ಲಿ ಕೋಪಕ್ಕೆ ಕಾರಣವಿಲ್ಲ.

ದೇವರ ಸ್ವರೂಪವು ಜಗತ್ತಿನಲ್ಲಿಯೇ ಸೇರದೆ ಇದ್ದ ಪಕ್ಷದಲ್ಲಿ ಜಗತ್ತಿನ ಸೃಷ್ಟಿಯೇ ವ್ಯರ್ಥವಾಗುತ್ತಿತ್ತು. ಏಕೆಂದರೆ ಈ ಜಗತ್ತಿನಲ್ಲಿ ಅಷ್ಟಿಷ್ಟು ಸುಖವು ಕಾಣುತ್ತಿದ್ದರೂ ಕೊನೆಗೆ ಅದು ದುಃಖದಲ್ಲಿಯೇ ಮುಗಿಯುವದರಿಂದ ಜಗತ್ತೆಲ್ಲ ದುಃಖಮಯ ವೆಂದೇ ಹೇಳಬೇಕಾಗಿ ಬರುತ್ತದೆ. ಜಗತ್ತನ್ನು ಸುಖಮಯವಾಗಿ ಮಾಡಿಕೊಳ್ಳಬೇಕೆಂಬು ವರ ಪ್ರಯತ್ನಗಳೆಲ್ಲ ಮಳಲಿನಿಂದ ಎಣ್ಣೆಯನ್ನು ಹಿಂಡಿಕೊಳ್ಳಹೋಗುವ ಪ್ರಯತ್ನ ದಂತಾಗಿದೆ. ಎಷ್ಟೋ ಜನರು ಜಗತ್ತಿನಲ್ಲಿ ಸುಖವನ್ನು ಹುಡುಕುವದಕ್ಕಾಗಿ ಹಗಲೂ ಇರುಳೂ ಗಾಣದೆತ್ತುಗಳಂತೆ ದುಡಿದುದುಡಿದು ಬಳಲಿ ಬೇಸತ್ತು ಕೊನೆಗೆ ನಿಟ್ಟುಸಿರಿಟ್ಟು ಸುಮ್ಮನಾಗಿರುತ್ತಾರೆ. ಜಗತ್ತಿನ ಹಣೆಯ ಬರಹವೆಲ್ಲ ಇಷ್ಟರಲ್ಲಿಯೇ ಮುಗಿಯುವ ದಾದರೆ ಇಂಥ ಜಗತ್ತನ್ನು ಸೃಷ್ಟಿಸಿದ್ದು ದೇವರದೊಂದು ತಪ್ಪೇ ಆಗುವದು. ನಿಜಸ್ಥಿತಿ ಹಾಗಿಲ್ಲ. ಸುಖವೆಂಬುದು ಜಗತ್ತಿನೊಳಗೆ ಸಿಕ್ಕದಿದ್ದರೂ ಜಗತ್ತಿನ ಮೂಲಕವಾಗಿ ಸಿಕ್ಕುವದುಂಟು. ಅದು ಹೇಗೆಂದರೆ ಬಿಸಿಲು ಬೆಚ್ಚಗೇ ಇರುವದೇಕೆ? ಬೆಳದಿಂಗಳು ತಣ್ಣಗೇ ಇರುವದೇಕೆ? ಬೆಂಕಿ ಮೇಲ್ಮುಖವಾಗಿಯೇ ಉರಿಯುವದೇಕೆ? ನೀರು ಕೆಳಮುಖವಾಗಿಯೇ ಹರಿಯುವದೇಕೆ? ಋತುಗಳು ಒಂದರ ಹಿಂದೊಂದು ಕ್ರಮವಾಗಿಯೇ ಬರುವದೇಕೆ? ಮರಗಳೆಲ್ಲ ವಸಂತಕಾಲದಲ್ಲಿಯೇ ಚಿಗುರುವದೇಕೆ?

ಹೀಗೆಲ್ಲ ಜಗತ್ತು ಒಂದು ನಿಯಮಕ್ಕೊಳಪಟ್ಟು ನಡೆಯುತ್ತಿರುವದನ್ನು ನೋಡಿದರೆ ಇದಕ್ಕೊಬ್ಬ ನಿಯಾಮಕನಿರಬೇಕೆಂದು ಎಂಥವನ ಮನಸ್ಸಿಗಾದರೂ ಹೊಳೆಯುತ್ತದೆ. ಆ ನಿಯಾಮಕನೇ **ಪರಮಾತ್ಮ**. ಆದ್ದರಿಂದ ಆ ದೇವರ ಕಡೆಗೆ ಬೆಟ್ಟಿಟ್ಟು ತೋರಿಸುವದೇ ಈ ಜಗತ್ತೆಂಬ ಕೈಮರದ ಉದ್ದೇಶ.

ಸುಖಕ್ಕಾಗಿ ಹೊರಹೊರಗೆ ಹರಿದಷ್ಟೂ ದುಃಖವೇ ಎಂಬುದನ್ನು ಮನಗಾಣಿಸುವದಕ್ಕಾಗಿ ಈ ಜಗತ್ತನ್ನು ಸೃಷ್ಟಿಸಿ ಪರಮಾತ್ಮನು ಒಳಮುಖರಾದವರಿಗೆ ಒಡನೆ ಕಾಣಿಸಿಕೊಳ್ಳುವದಕ್ಕಾಗಿ ತಾನು ಎಲ್ಲೆಲ್ಲಿಯೂ ತುಂಬಿಯೇ ಇರುವನು. ನೋಡುವ ಪುಣ್ಯಾತ್ಮರಿಲ್ಲವೇ ಹೊರತು ಅವನು ಎಲ್ಲೆಲ್ಲಿಯೂ ಇಲ್ಲದೆ ಇಲ್ಲ. ಅವನನ್ನು ನೋಡುವ ದೃಷ್ಟಿಗೆ ಒಂದು ಹೆಚ್ಚಿನ ಬಲ ಬೇಕು. ಅದು ಕೇದಿಗೆಯ ಹೂವನ್ನು ಅಥವಾ ಹಲಸಿನ ಹಣ್ಣನ್ನು ಭೃಂಗವು ಕಂಡಂತೆ. ಕೇದಿಗೆಯ ಮೆಳೆಯೂ ಮುಳ್ಳಿನಮಯ; ಹಲಸಿನ ಹಣ್ಣಿನ ಮೈಯೂ ಮುಳ್ಳಿನಮಯ. ಆದರೂ ಭೃಂಗವು ವಾಸನೆಯಿಂದ ಅವುಗಳನ್ನು ಕಂಡು ಹಿಡಿಯುತ್ತದೆ. ಜಗತ್ತೂ ದುಃಖವೆಂಬ ಮುಳ್ಳಿನಮಯವಾದದ್ದು. ಆದರೂ ವಿವೇಕಿಯು ಜಗತ್ತಿನಲ್ಲಿರುವ ಇರುವಿಕೆಯೆಂಬ ಸ್ವರೂಪದ ವಾಸನೆಯಿಂದ ಜಗತ್ತಿನ ಕಾರಣನಾದ ಪರಮಾತ್ಮನನ್ನು ಕಾಣುವದಕ್ಕಾಗುತ್ತದೆ. ಹಾಗೆ ಕಂಡರೆ ಮಾತ್ರ ಮನುಷ್ಯ ಬುದ್ಧಿಯು ಸಾರ್ಥಕವೆನಿಸುತ್ತದೆ. ಆ ಪರಮಾತ್ಮನನ್ನು ಕಂಡರೆ ಸುಖದ ಸಮುದ್ರವನ್ನು ಕಂಡಂತಾಯಿತು. ಇನ್ನೇನು ಬೇಕು?

ಮನುಷ್ಯನು ಆ ಸುಖದ ಸಮುದ್ರವನ್ನು ಕಾಣುವದು ಸಾಧ್ಯವೆ? ಎಂದರೆ ಎಷ್ಟೋ ಜನರು ಅದನ್ನು ಕಂಡು ಅದರಲ್ಲಿ ಈಸಾಡುತ್ತಿರುವವರುಂಟು. ಆದರೆ ಅವರ ಸಂಖ್ಯೆ ಬಹಳ ಕಡಿಮೆ. ಅವನನ್ನು ಎಷ್ಟೋ ಜನರು ಹುಡುಕಿದರೂ ಕಾಣುವವರು ಬಹುಕಡಿಮೆ. **ನ್ಯೂಟನ್** ಎಂಬ ಪಾಶ್ಚಾತ್ಯ ಪಂಡಿತನು ಮರದಿಂದ ಉದುರಿದ ಹಣ್ಣು ಸರಿಯಾಗಿ ಕೆಳಕ್ಕೆ ನೆಲದಮೇಲೆ ಬಿದ್ದದ್ದನ್ನು ಕಂಡನಂತೆ. ಇಷ್ಟರಿಂದ ಅವನು ಭೂಮಿಯಲ್ಲಿ ಗುರುತ್ವಾಕರ್ಷಣ ಶಕ್ತಿಯೆಂಬುದೊಂದು ಉಂಟೆಂಬುದನ್ನು ಕಂಡುಹಿಡಿದುಕೊಂಡು ಅದರಿಂದ ಮುಂದೆ ಸೂರ್ಯ, ಚಂದ್ರ, ಮೊದಲಾದ ಅನಂತಗೋಲಗಳ ಗತಿಯನ್ನು ನಿಶ್ಚಯಿಸುವ ನಿಯಮವನ್ನು ಗ್ರಹಿಸಿದನಂತೆ. ಬುದ್ಧಿಶಾಲಿಗಳಿಗೆ ಒಂದೇ ಒಂದು ಬಿಂದುವಿನಲ್ಲಿ ಸಿಂಧು (ಸಮುದ್ರ)ವೇ ಸಿಕ್ಕುತ್ತದೆ. ದಡ್ಡರಿಗೆ ಸಿಂಧುವಿನಲ್ಲಿ ಮುಳುಗಿದರೂ ಒಂದು ಬಿಂದುವೂ ಸಿಕ್ಕುವದಿಲ್ಲ. ಈ ತಪ್ಪು ಯಾರದು?

ಜಗತ್ತಿನಲ್ಲಿ ಇರುವಿಕೆಯ ಸ್ವರೂಪವಾದ ಪರಮಾತ್ಮನ ಸುಳಿವು ದೊರೆತೊಡನೆ ವಿವೇಕಿಯು ಅದರಲ್ಲಿ ತನ್ಮಯನಾಗಿ ಅದರಲ್ಲಿರುವ ಆನಂದ ಸ್ವರೂಪವನ್ನು ಮನಗಾಣಲು ತನ್ನ ಪ್ರಯತ್ನವನ್ನು ಏಕಾಂತದಲ್ಲಿ ಮುಂದುವರಿಸಬೇಕು. ಇದಕ್ಕೊಂದು

ಸ್ಥೂಲವಾದ ಉದಾಹರಣೆಯನ್ನು ಕೊಡಬಹುದು. ವರನು ವಧುವನ್ನು ಅನೇಕ ಮಂಗಲವಾದ್ಯಗಳ ರಭಸದ ನಡುವೆ ಮತ್ತು ಮಂದಿಯ ಸಂದಣಿಯ ನಡುವೆ ಕೈಹಿಡಿಯುತ್ತಾನೆ; ಆಮೇಲೆ ಆ ವಧುವಿನ ಯೌವನದ ರಸಾಸ್ವಾದವನ್ನು ಮಾಡುವಾಗ ಏಕಾಂತಕ್ಕೆ ಹೋಗುತ್ತಾನೆ. ಅದರಂತೆ ಜಗತ್ತಿನ ಗಡಿಬಿಡಿಗಳ ನಡುವೆ ನುಸಿದು ಹೇಗೋ ಇರುವಿಕೆಯೆಂಬ ಸ್ವರೂಪದ ಪರಮಾತ್ಮನ ಸುಳಿವನ್ನು ತಿಳಿದೊಡನೆ ನಿದಾನವಾಗಿ ಅದನ್ನು ಮೆಲುಕು ಹಾಕುವದಕ್ಕಾಗಿ ಗದ್ದಲವಿಲ್ಲದ ಕಡೆ ಒಂಟಿಯಾಗಿ ಕುಳಿತು ಅದನ್ನೇ ಅಳೆದು ಹೊಯ್ದು ವಿಚಾರ ಮಾಡಬೇಕು.

ಪರಮಾತ್ಮಸ್ವರೂಪದ ಆನಂದರಸವು ನಮ್ಮೊಳಗೆ ಹರಿಯಬೇಕಾದರೆ ನಾವು ನಮ್ಮ ಮನಸ್ಸನ್ನು ತಗ್ಗಾಗಿ ಮಾಡಬೇಕು. ಅದು ಎತ್ತರವಾಗಿದ್ದರೆ - ಎಂದರೆ ನಾವು ಹಣಗಾರನೆಂದೂ ನಾನು ಸುಖಿಯೆಂದೂ ನಾನು ಬಲಶಾಲಿಯೆಂದೂ ನನಗೆ ಸಮಾನರಿಲ್ಲವೆಂದೂ ಎದೆಯನ್ನುಬ್ಬಿಸಿಕೊಂಡು ನಡೆಯುತ್ತಿದ್ದರೆ ಆನಂದರಸವು ಅದರ ಮೇಲಕ್ಕೆ ಏರುವದಿಲ್ಲ. ಜಗತ್ತಿನಲ್ಲಿ ಎಲ್ಲಿಯೂ ಎತ್ತರಕ್ಕೆ ನೀರು ಹತ್ತುವದಿಲ್ಲವಷ್ಟೆ? ಈ ಉಬ್ಬನ್ನು ಚೆನ್ನಾಗಿ ಅಗೆದು ನೆಲಸಮಮಾಡಬೇಕು. ಅಷ್ಟೇ ಅಲ್ಲ. ನೀರುಹರಿಯುವದಕ್ಕೆ ಸಮನೆಲಕ್ಕಿಂತಲೂ ತಗ್ಗು ಅನುಕೂಲ. ಆದ್ದರಿಂದ ನಮ್ಮ ಮನಸ್ಸಿನ ಉಬ್ಬನ್ನೆಲ್ಲ ಹೋಗಲಾಡಿಸುವದಲ್ಲದೆ ಅದನ್ನು ಆತ್ಮವಿಚಾರದ ಕಡೆಗೆ ತೋಡಿ ತಗ್ಗಾಗಿ ಮಾಡ ಬೇಕು- ಎಂದರೆ ನಮ್ರತೆಯುಳ್ಳದ್ದಾಗಿ ಬಗ್ಗಿದ್ದಾಗಿ ಮಾಡಬೇಕು. ಮನಸ್ಸು ಬಗ್ಗುವ ದೆಂದರೆ ಆತ್ಮಸ್ವರೂಪವನ್ನು ತಿಳಿದುಕೊಳ್ಳಬೇಕೆಂಬ ಇಚ್ಛೆಯನ್ನು ಆಳವಾಗಿ ಮಾಡುವದು.

ಮನಸ್ಸನ್ನು ನಮ್ರತೆಯುಳ್ಳದ್ದಾಗಿ-ಬಗ್ಗಿದ್ದಾಗಿ-ಮಾಡುವಿಕೆಗೆ '**ನಮನ**' ವೆಂದು ಹೆಸರು. ನಮನವೆಂದರೆ ನಮಸ್ಕರಿಸುವಿಕೆ. ನಮಸ್ಕಾರವನ್ನು ಮಾಡುವಾಗ ಮನುಷ್ಯ ಶರೀರವು ಬಗ್ಗುವದು ಎಲ್ಲರೂ ಕಂಡ ಮಾತು. ಈಗ ಯಾರಿಗೆ ನಮಸ್ಕಾರ ಮಾಡ ಬೇಕೆಂಬದನ್ನು ವಿಚಾರಮಾಡಬೇಕು. ಯಾವನು ಜಗತ್ತಿಗೆ ಕಾರಣನೊ ಅವನಿಗೆ ತಲೆಬಾಗಬೇಕೆಂಬುದಂತು ನಿರ್ವಿವಾದವಾದ ಮಾತಷ್ಟೆ. ಅವನನ್ನರಿತವರಿಗೆ ತಲೆ ಬಾಗುವದು ಕೂಡ ಅಷ್ಟೇ ಬೆಲೆಯುಳ್ಳದ್ದು. ಏಕೆಂದರೆ ಅವರು ಅವನನ್ನು ತೋರಿಸಿದರೆ ಅವನೊಬ್ಬನುಂಟೆಂದಾಗುವದು. ಹೀಗೆ ಪರಮಾತ್ಮನ ಇರುವಿಕೆಯು ಜ್ಞಾನಿಗಳ ಉಪದೇಶವನ್ನವಲಂಬಿಸಿಕೊಂಡಿದ್ದಂತಾಗುವದರಿಂದ ಪರಮಾತ್ಮನೂ ಅವನನ್ನರಿತವರೂ ಒಬ್ಬರಿಂದೊಬ್ಬರು ಬೇರೆಯಲ್ಲ. ಅವರಿಬ್ಬರಿಗೂ ನಾವು ತಲೆಬಾಗ ಬೇಕು. ಎಂದರೆ ನಮ್ಮ ಮನಸ್ಸನ್ನು ಅವರ ಅಡಿಯಾಳಾಗಿ ಮಾಡಬೇಕು. ಮನಸ್ಸು ಸ್ವಭಾವವಾಗಿ ಹೊರವಿಷಯಗಳನ್ನೇ ಕನವರಿಸಿಕೊಳ್ಳುತ್ತಿರುವದು. ಆಗ ಮಾತ್ರ ಅದಕ್ಕೆ

ಮನಸ್ಸೆಂದು ಹೆಸರು. ಅದು ಒಳಗಡೆಗೆ ತಿರುಗಿ ಬಗ್ಗಿ ಪರಮಾತ್ಮ ವಿಚಾರವನ್ನು ತುಂಬಿಕೊಳ್ಳುತ್ತಲೆ ಆ ಪರಮಾತ್ಮ ಸಂಬಂಧದಿಂದ ಆಮೇಲೆ ಅದು ಮನಸ್ಸೆನಿಸುವದೇ ಇಲ್ಲ. ಹೇಗೆಂದರೆ ನಮನವೆಂಬ ಮಾತು ಮೊದಲು ದೇವರ ಅಥವಾ ದೇವರನ್ನರಿತವರ ಕಡೆಗೆ ಬಗ್ಗುವದೆಂಬರ್ಥದಲ್ಲಿ ಬಂದಿತ್ತಷ್ಟೆ. ಈಗ ಅದು ನ+ಮನ ಎಂದು ವಿಭಾಗವಾಗಿ ಮನಸ್ಸಲ್ಲದೆ ಹೋಗುವದೆಂಬರ್ಥವನ್ನೂ ತೋರಿಸುತ್ತಿರುವದು. ಮನಸ್ಸಲ್ಲದೆ ಹೋಗುವದೆಂದರೆ ಮನಸ್ಸಿನದುರ್ವ್ಯವಹಾರ ಯಾವದೂ ಇಲ್ಲವೆಂದರ್ಥ.

ಮನಸ್ಸನ್ನು ಮನಸ್ಸಲ್ಲದಂತೆ ಮಾಡುವ ಅರ್ಥವನ್ನು ಮುಂದುವರಿಸುವದಕ್ಕೆ ನಮನವೆಂಬ ಶಬ್ದದಲ್ಲಿರುವ ಇನ್ನೊಂದು ಚಮತ್ಕಾರವೇನೆಂದರೆ ನಮನವೆಂಬ ಶಬ್ದದ ಮೊದಲನೆಯ ನಕಾರವನ್ನು ಕೊನೆಗಿಟ್ಟರೆ ಮನನವೆಂದಾಗುತ್ತದೆ. ಮನನವೆಂದರೆ ಆತ್ಮಸ್ವರೂಪದ ವಿಷಯವನ್ನು ಮನಸ್ಸಿಗೆ ಅಳವಡಿಸಿಕೊಳ್ಳುತ್ತಿರುವದೆಂದರ್ಥ. ನಮನವೆಂಬ ಮಾತಿನಂತೆ ಮನುಷ್ಯನು ಒಳಮುಖನಾದ ಮೇಲೆ ಏನು ಮಾಡಬೇಕೆಂಬುದನ್ನು ಈ ಮನನವೆಂಬ ಮಾತು ಎತ್ತಿ ಹಿಡಿಯುತ್ತದೆ. ಮತ್ತು ಆತ್ಮ ವಿಚಾರವನ್ನು ಮನಸ್ಸಿಗೆ ಅಳವಡಿಸಿಕೊಳ್ಳುತ್ತಲೆ ಮನಸ್ಸಿನ ದುರ್ವ್ಯವಹಾರಗಳೆಲ್ಲ ಹೋಗುವದರ ಮೂಲಕ ಅದು ಮನಸ್ಸೆನಿಸದೆ ಹೋಗುವದಿಷ್ಟೇ ಅಲ್ಲದೆ ಅದು ತಾನೇ ಇಲ್ಲದೆ ಹೋಗುವದೆಂಬರ್ಥವನ್ನು ಕೂಡ ಅದು ತನ್ನೊಳಗಡಿಸಿಕೊಂಡಿರುತ್ತದೆ. ಮನ ಮತ್ತು ನ ಎಂದು ಪದವಿಭಾಗವನ್ನು ಮಾಡಿದಾಗ ಈ ರಹಸ್ಯವು ಹೊರ ಬೀಳುವದು. ಮನಸ್ಸು ತಾನೆ ಇಲ್ಲದೆ ಹೋಗುತ್ತದೆ. ಬ್ರಹ್ಮವು ಎದ್ದು ಕಾಣುವದು. ಬ್ರಹ್ಮವೆಂಬುದು ಸಮುದ್ರದಂತೆ. ಮನಸ್ಸೆಂಬುದು ಅದರ ಅಲೆಯಂತೆ. ಆ ಮನಸ್ಸೇ ಜಗದ್ರೂಪವನ್ನು ತಾಳುವದು. ಮನಸ್ಸಿಲ್ಲದೆ ಹೋದರೆ ಜಗತ್ತೇ ಇರುವದಿಲ್ಲ. ಗಾಢನಿದ್ರೆಯಲ್ಲಿ ಮನಸ್ಸಿಲ್ಲದ್ದರಿಂದ ಜಗತ್ತೇ ಇಲ್ಲ. ಆದ್ದರಿಂದ ಮನಸ್ಸೇ ಜಗತ್ತು. ಇದರಿಂದ ಜಗತ್ತೆಲ್ಲ ಬ್ರಹ್ಮವೆಂಬ ಸಮುದ್ರದ ಅಲೆಯೆಂದಾಯಿತು. ಅಲೆಯಿರುವವರೆಗೂ ಅದರ ಆರ್ಭಟವು ಸಮುದ್ರದ ಸಮುದ್ರತ್ವವನ್ನು ಮರೆ ಮಾಡಿ ತನ್ನ ಪಿಶಾಚನರ್ತನದಿಂದ ತಾನೇ ತಾನಾಗಿ ಮುಂದೋರುತ್ತಿರುವದು. ಹಾಗೆಯೇ ಮನಸ್ಸಿರುವವರೆಗೂ ಅದರ ಹಾವಳಿಯಿಂದ ಬ್ರಹ್ಮವು ಮರೆಯಾಗಿರುವದು. ಅಲೆಯು ಒಳಸರಿಯುತ್ತಲೆ ಸಮುದ್ರವು ತನ್ನ ನಿಜ ಸ್ವರೂಪದಲ್ಲಿ ಕಾಣಿಸಿಕೊಳ್ಳುವಂತೆ ಮನಸ್ಸುತಾನೆ ಇಲ್ಲದೆ ಹೋಗುತ್ತಲೆ ಬ್ರಹ್ಮವು ತನ್ನ ನಿಜಸ್ವರೂಪದಲ್ಲಿ ಎದ್ದು ಕಾಣುವದು.

ಆದ್ದರಿಂದ ಜಗತ್ತಿನ ಕರ್ತನಾದ ಪರಮಾತ್ಮನನ್ನು ತಿಳಿಯಬೇಕಾದರೆ ಅವನಿಗೂ ಅವನನ್ನರಿತವರಿಗೂ ಶರಣುಹೋಗಿ ಅವರ ಅನುಗ್ರಹವನ್ನು ಪಡೆದು ಅವನ ಸ್ವರೂಪವನ್ನು ಮನಸ್ಸಿಗೆ ಅಳವಡಿಸಿಕೊಳ್ಳುವದೇ ಸರಿಯಾದ ಸಾಧನ.

## 9. ಶ್ರೀಮದವಧೂತಬೋಧಾನಂದಸರಸ್ವತೀ ಸ್ವಾಮಿಗಳು

ಕೆಲವು ದಿವಸಗಳ ಹಿಂದೆ ಇಲ್ಲಿಗೊಬ್ಬರು ಅವಧೂತರು ಬಂದಿರುವರೆಂದೂ ಅಧ್ಯಾತ್ಮವಿಚಾರಗಳು ಜನರಲ್ಲಿ ಹಬ್ಬಿಸುತ್ತಿರುವರೆಂದೂ ನನ್ನ ಕಿವಿಗೆ ಸುದ್ದಿ ಬಿತ್ತು. ಈ ಬೆಂಗಳೂರು ದೊಡ್ಡೂರು. ಇಲ್ಲಿಗೆ ವ್ಯವಹಾರದಲ್ಲಿ ದಕ್ಷರಾದವರೂ ಬರುತ್ತಾರೆ; ಪರಮಾರ್ಥದಲ್ಲಿ ನಿಪುಣರಾದವರೂ ಬರುತ್ತಿರುತ್ತಾರೆ. ಇಂಥವರ ಬರುವಿಕೆಯ ಸುಯೋಗವನ್ನು ನಾನು ಉಪಯೋಗಮಾಡಿಕೊಳ್ಳುವದುಂಟು. ಅದರಲ್ಲಿಯೂ ಪರಮಾರ್ಥದ ಕಡೆಯವರ ವಿಷಯಕ್ಕೆ ನನ್ನ ಒಲವು ಹೆಚ್ಚು. ಆದರೂ ಎಷ್ಟೋ ವೇಳೆ ನಾನು ಸುದ್ದಿಯ ಬೆನ್ನುಹತ್ತಿ ಅಂಥ ಎಷ್ಟೋ ಜನರ ಕಡೆಗೆ ಹೋಗಿ ಕೊನೆಗೆ ಮನೆಗೆ ಬಂದು ನಿಟ್ಟುಸಿರಿಟ್ಟ ಉದಾಹರಣೆಗಳು ನನಗೆ ಮರೆಯುವ ಹಾಗಿಲ್ಲ. ಹೀಗಿದ್ದರೂ ಇದನ್ನರಿತಿದ್ದ ನನ್ನ ಗೆಳೆಯರೊಬ್ಬರು ಒಂದುಬಗೆಯ ಕುತೂಹಲವಿಶೇಷದಿಂದ ನನ್ನನ್ನು ಆ ಸ್ವಾಮಿಗಳಿದ್ದ ಬಳಿಗೆ ಕರೆದುಕೊಂಡು ಹೋದರು. ಆ ಸ್ವಾಮಿಗಳ ದರ್ಶನವನ್ನು ತೆಗೆದುಕೊಂಡು ಸ್ವಲ್ಪ ಹೊತ್ತು ಅಲ್ಲಿ ನೋಡುತ್ತಿರುವದರಲ್ಲಿಯೇ ಅವರ ನಡೆನುಡಿಗಳು ನನ್ನಮನಸ್ಸಿನ ಮೇಲೆ ಒಳ್ಳೆಯ ಮುದ್ರೆಯನ್ನೊತ್ತಿದ್ದವು. ಆಗಲೆ ಅವರ ಪರಿಚಯವನ್ನು ಮಾಡಿ ಕೊಳ್ಳುವದಕ್ಕೆ ಸಮಯವು ಸರಿಯಾಗಿರಲಿಲ್ಲ. ಮತ್ತೊಮ್ಮೆ ಅಲ್ಲಿಗೆ ಬರಬೇಕೆಂದು ಮನಸ್ಸಿನಲ್ಲಿಯೇ ಗುಣಾಕಾರವನ್ನು ಹಾಕುತ್ತಿರುವಷ್ಟರಲ್ಲಿ ಅವರನ್ನು ಭಿಕ್ಷೆಗೆ ಕರೆಯ ಬಂದಿದ್ದ ಒಬ್ಬ ಭಕ್ತರು ಆ ಸಮಯಕ್ಕೆ ನನ್ನನ್ನೂ ಬರಹೇಳಿ ಬಹಳ ಆದರವನ್ನು ತೋರಿಸಿದರು. ಇದರಿಂದ ನಾನು ಶ್ರೀಗಳವರೊಡನೆ ಮೇಲು ಪಂಕ್ತಿಯನ್ನು ನೋಡಿ ಕೊಳ್ಳುವದಕ್ಕೂ ಬಹಳ ಅನುಕೂಲವಾಯಿತು. ಹೀಗಾಗಿ ನಾನು ಶ್ರೀಗಳವರ ಪರಿಚಯವನ್ನು ಮಾಡಿಕೊಂಡೆನು. ಅನೇಕ ವೇಳೆ ನಾನು ಇಂಥ ಸಂದರ್ಭಗಳಲ್ಲಿ ನಿಟ್ಟುಸಿರುಬಿಡಬೇಕಾಗಿ ಬಂದಿತ್ತೆಂದು ಮೊದಲೇ ಹೇಳಿದ್ದೇನಷ್ಟೆ. ಈಗ ನನ್ನ ಮನಸ್ಸು ಚೆನ್ನಾಗಿ ಉಲ್ಲಾಸಗೊಂಡದ್ದರಿಂದ ಅವರ ವಿಷಯವನ್ನು ಈ ಪತ್ರಿಕೆಯ ಮೂಲಕ ಅಧ್ಯಾತ್ಮಪರರಾದ ವಾಚಕರ ಲಕ್ಷ್ಯಕ್ಕೆ ತರಬೇಕೆಂದು ಉತ್ಸಾಹಗೊಂಡಿದ್ದೇನೆ.

ಸಾಮಾನ್ಯವಾಗಿ ಸಂನ್ಯಾಸದ ಮೇಲೆ ಹೆಚ್ಚಿನ ಪ್ರೀತಿ ಇರುವದೇ ನನ್ನ ಹುಟ್ಟುಗುಣ. ಈ ಗುಣದ ಸೆಳೆತಕ್ಕೆ ಸಿಕ್ಕಿ ಒಮ್ಮೆ ನಾನೂ ನನ್ನ ತಲೆಯನ್ನು ನುಣ್ಣಗೆ ಮಾಡಿಕೊಳ್ಳಬೇಕೆಂದು ಯೋಚಿಸಿದ್ದೆನು. ಆದರೆ ತಲೆಯನ್ನು ನುಣ್ಣಗೆ ಮಾಡಿ ಕೊಂಡಿದ್ದರೂ ಮನಸ್ಸನ್ನು ನುಣ್ಣಗೆ ಮಾಡಿಕೊಳ್ಳದೆ ಇರುವ ಸಂನ್ಯಾಸಿಗಳೇ ಬಹಳವಾಗಿ ಕಂಡದ್ದರಿಂದ ಅವರ ಗುಂಪಿಗೆ ಸೇರುವದಕ್ಕಿಷ್ಟವಿಲ್ಲದೆ ನಾನಿನ್ನೂ ಜುಟ್ಟನ್ನಿಟ್ಟು ಕೊಂಡಿರುವೆನು. ಆ ಜುಟ್ಟು ನನ್ನ ವಯೋಧರ್ಮದಿಂದ ಎದ್ದು ಕಾಣುವಷ್ಟಿಲ್ಲದಿದ್ದರೂ

ಅದರ ಚಿಹ್ನವಿನ್ನೂ ಇರುವದು. ಇರಲಿ. ಶಿವಪೂಜೆಯ ನಡುವೆ ಕರಡಿಯ ಮರಿಯನ್ನು ತಂದಂತೆ ಈಗ ನನ್ನ ವಿಷಯವೇಕೆ? ನಾನು ಎಷ್ಟೋಜನ ಸಂನ್ಯಾಸಿಗಳನ್ನು ನೋಡಿರುವೆನು. ಸಂನ್ಯಾಸಿಯ ವೇಷದಲ್ಲಿಯೇ ಇದ್ದು ವ್ಯವಹಾರದಲ್ಲಿ ಗೃಹಸ್ಥರನ್ನು ಮೀರಿಸಿರುವವರನ್ನು ಬಿಟ್ಟರೂ ನನ್ನ ಕಣ್ಣಿಗೆ ಬಿದ್ದವರೆಲ್ಲ ಸ್ಥೂಲವಾದ ಕರ್ಮಾಚರಣೆ ಯಿಂದಲೇ ಕಾಲವನ್ನು ಕಳೆಯುವವರಾಗಿರುವರು. ಕರ್ಮದ ಮೇಲೆ ನನಗೇನೂ ಹಗೆತನವಿಲ್ಲ. ಆದರೆ ಸಂನ್ಯಾಸಿಯ ಕರ್ಮವು ಗೃಹಸ್ಥನ ಕರ್ಮಕ್ಕಿಂತ ಬೇರೆ ಜಾತಿಯದೆಂದು ನನ್ನ ತಿಳಿವಳಿಕೆ. ಹೀಗಿದ್ದರೂ ಕರ್ಮಠರಾದ ಸಂನ್ಯಾಸಿಗಳನ್ನು ಕಂಡರೂ ನನಗೆ ಪ್ರೇಮವೇ. ಏಕೆಂದರೆ ಅವರು ಹೆಂಡಿರುಮಕ್ಕಳು ಮೊದಲಾದ ತೊಡಕುಗಳನ್ನು ಕಳಚಿಕೊಂಡು 'ಜಯ ಸೀತಾರಾಮ!' ಎಂದು ಧೈರ್ಯದಿಂದ ಬೇರೆ ನಿಲ್ಲುವದರ ಮೇಲೆ ಮೆಚ್ಚುಗೆ ಬಹಳ. ಜಗತ್ತಿನಲ್ಲಿ ರಕ್ತಸಂಬಂಧದ ಸೆಳೆತದ ಸುಳಿಯನ್ನು ಎಡಗಾಲಿನಿಂದೊದ್ದು ದಡಕ್ಕೇರುವದು ಹೆಚ್ಚಿನ ಗಂಡಸುತನ. ಈ ನಮ್ಮ ಸ್ವಾಮಿಗಳಲ್ಲಿ ಆ ಲಕ್ಷಣಕ್ಕೇ ಮೊದಲು ನನ್ನ ಮನಸ್ಸು ಸೋತಿತು.

ಇನ್ನೂ ಒಳಹೊಕ್ಕು ನೋಡಬೇಕಾದದ್ದು ಸಂನ್ಯಾಸಿಗಳ ನಡೆನುಡಿಗಳ ವಿಷಯ. ಸಂನ್ಯಾಸಿಗಳ ಕರ್ಮವು ಗೃಹಸ್ಥನ ಕರ್ಮಕ್ಕಿಂತ ಬೇರೆಯ ಜಾತಿಯದೆಂದು ನನ್ನ ಅಭಿಪ್ರಾಯವನ್ನು ಸೂಚಿಸಿದ್ದೇನಷ್ಟೆ. ಗೃಹಸ್ಥರ ಕರ್ಮವು ದೇಹದಿಂದಲೂ ಇಂದ್ರಿಯ ಗಳಿಂದಲೂ ನಡೆಯುವಂಥದ್ದಾಗಿರುವದು. ಸಂನ್ಯಾಸಿಯದು ಇದೇ ಆದರೆ ಗೃಹಸ್ಥನು ಅವರ ಕಾಲ ಮೇಲೇಕೆ ತಲೆಯನ್ನಿಡಬೇಕು? ಸಂನ್ಯಾಸಿಗಳು ಗೃಹಸ್ಥರಿಗಿಂತ ಮೇಲಿನ ಮೆಟ್ಟಿಲಿನವರು. ಅವರು ಮಾನಸಿಕ ತಪಶ್ಚರ್ಯೆಯನ್ನು ಮಾಡುತ್ತಿರಬೇಕು. ಗೃಹಸ್ಥರಿಗೆ ಅದು ಸುಲಭಸಾಧ್ಯವಲ್ಲ. ಪರಮಾರ್ಥಕ್ಕಾಗಿ ತಲೆಯನ್ನು ಬೋಳಿಸಿಕೊಂಡವರು ಅಗತ್ಯವಾಗಿ ಮನಸ್ಸನ್ನೂ ಇಂದ್ರಿಯಗಳನ್ನೂ ತಮ್ಮ ಹಿಡಿತದಲ್ಲಿಟ್ಟುಕೊಂಡು ಧ್ಯಾನ ದಲ್ಲಿ ತತ್ಪರರಾಗಿರಬೇಕು. ಆದರೆ ಈ ನಡವಳಿಕೆಯುಳ್ಳ ಸಂನ್ಯಾಸಿಗಳು ಬಹುಕಡಿಮೆ. ನಮ್ಮ ಈ ಸಂನ್ಯಾಸಿಗಳಲ್ಲಿ ಈ ನಡೆವಳಿಕೆಯು ಚೆನ್ನಾಗಿ ಮೈಯುಂಡಿಕೊಂಡಿರುವದನ್ನು ನೋಡಿ ನನಗೆ ಅತ್ಯಾನಂದವಾಯಿತು. ಈ ಪರಮ ಹಂಸರು ಪ್ರತಿದಿನವೂ ಮಧ್ಯಾಹ್ನ 12 ಗಂಟೆಯವರೆಗೂ ರಾತ್ರೆ 12 ಘಂಟೆಯ ಮೇಲೆಯೂ ಮೌನವ್ರತವನ್ನು ಧರಿಸುವರು. ಸೋಮವಾರವಂತು ಸಂಪೂರ್ಣವಾಗಿ ಮೌನ. ಮೌನವೆಂದರೆ ಬರೀ ಮಾತನಾಡದಿರುವದು ಮಾತ್ರವಲ್ಲ. ನಮ್ಮ ಶ್ರೀಗಳವರು ಒಳ್ಳೆ ಮನದಲ್ಲಿ ತತ್ಪರ ರಾಗಿರುವರೆಂದು ಊಹಿಸುವದಕ್ಕೆ ಸಂಪೂರ್ಣ ಅವಕಾಶವಿರುವದು. ಅವರು ವೇದಾಂತವಿಚಾರವನ್ನೆಲ್ಲ ಅರೆದು ಕುಡಿದಿರುವರು. ಸಾಧನಕ್ಕೆ ಸಂಬಂಧಪಟ್ಟ ಮಾತನ್ನು ಅವರ ಮುಂದೆ ನಾನು ಎತ್ತಿದಾಗ ಅವರು ಅದನ್ನು ಚೆನ್ನಾಗಿ ಪುಷ್ಟಿಗೊಳಿಸಿ

ಮಾತಾಡಿದರು. ಇದರಿಂದ ಅವರು ಯಾವಾಗಲೂ ನಿಜವಾಗಿ ಬ್ರಹ್ಮಾನುಸಂಧಾನ ದಲ್ಲಿರುವವರೆಂದು ನನ್ನ ಮನಸಾಕ್ಷಿಯು ಅಲ್ಲದೆ ಸ್ವಭಾವವಾಗಿಯೇ ಮಿತಿಭಾಷಿಗಳ ನಡೆವಳಿಕೆಯನ್ನೂ ಒಳಗೊಂಡಿರುವದು. ಇವರೆದುರಿಗೆ ಪ್ರಾಪಂಚಿಕರಾದ ಜನರು ತಮ್ಮ ವ್ಯವಹಾರದ ಮಾತುಗಳ ಸುರಿಮಳೆಯನ್ನು ಸುರಿಸುತ್ತಿದ್ದರೂ ಕಗ್ಗಲ್ಲು ಹೇಗೆ ನೀರನ್ನು ಹೀರಿಕೊಳ್ಳುವುದಿಲ್ಲವೋ ಹಾಗೆ ಇವರು ಎಷ್ಟು ಮಾತ್ರವೂ ಆ ಮಾತುಗಳನ್ನು ತಮ್ಮೊಳಕ್ಕೆ ಸೇರಿಸಿಕೊಳ್ಳದೆ ಇರುವ ವಿಷಯವು ನಿಜವಾಗಿ ಪರಮಾರ್ಥ ಸಾಧಕರಿಗೆ ಅತ್ಯುಚ್ಚ ತರಗತಿಯ ಮೇಲು ಪಂಕ್ತಿಯಾಗಿದೆ. ಇದೊಂದು ನನಗೆ ಅವರಲ್ಲಿ ಕಂಡ ಅತ್ಯಂತ ಪ್ರಿಯಕರವಾದ ವಿಷಯ.

ಈ ಹೆಚ್ಚುಗಾರಿಕೆ ಸರಿತೂಗುವ ಇನ್ನೊಂದೇನೆಂದರೆ- ಇವರು ಧನ ವೆಂಬುದನ್ನು ಮಣ್ಣು ಹೆಂಟೆಯಂತೆ ಕಾಣುವ ವಿಷಯ. ಎಷ್ಟೋ ಜನರು ಸ್ವಾಮಿಗಳಾದ ಕೂಡಲೆ ತಮ್ಮದೊಂದು ಮಠವನ್ನು ಕಟ್ಟುವದಕ್ಕೋ ಸಮಾಧಿಯನ್ನೇರ್ಪಡಿಸುವದಕ್ಕೋ ನಿಧಿಯನ್ನು ಕೂಡಿಸುವದಕ್ಕೆ ಹೊರಡುವರು. ಇಷ್ಟು ಧೈರ್ಯವನ್ನು ಮಾಡಲಾರದವರು ಪಾದಪೂಜೆಯನ್ನು ಮಾಡಿರೆಂದು ಪಾದವನ್ನು ಮುಂದಿಟ್ಟು ದೊರೆತಷ್ಟು ಧನಾರ್ಜನೆ ಯನ್ನು ಮಾಡುವರು. ಈ ನಮ್ಮ ಸ್ವಾಮಿಗಳೂ ಪಾದಪೂಜೆಯನ್ನೇನೋ ಮಾಡಿಸಿ ಕೊಳ್ಳುವರು. ಆದರೆ ಪಾದವನ್ನು ತಾವಾಗಿ ಮುಂದಿಡುವುದಿಲ್ಲ. ಪಾದಪೂಜೆಯನ್ನು ಮಾಡುವಂತೆ ಒಬ್ಬರಿಂದೊಬ್ಬರನ್ನು ಎತ್ತುಗಟ್ಟುವದಿಲ್ಲ; ಆ ಪಾದಪೂಜೆಯಲ್ಲಿಯೂ ಗಂಧಪುಷ್ಪಗಳಿಂದ ಪೂಜೆಯೇ ಹೊರತು ನಾಣ್ಯಗಳಿಂದಲ್ಲ. ನಾಣ್ಯಗಳಿಂದ ಪೂಜೆ ಮಾಡಿಸಿಕೊಳ್ಳವವರನ್ನು ನೋಡಿದರೆ ನನಗೆ ಎಲ್ಲಿಯೂ ಇಲ್ಲದಷ್ಟು ನಗೆ ಬರುತ್ತದೆ. ನಾಣ್ಯದಲ್ಲಿ ಏನು ಅಂದವೂ ಏನು ಚಂದವೂ ನನಗಂತೂ ತಿಳಿಯದು. ನಾಣ್ಯದಿಂದ ಪೂಜೆಯನ್ನು ಮಾಡಿದ್ದು ಪುರಾಣದಲ್ಲಿಯೂ ಎಲ್ಲಿಯೂ ಕಾಣಬರಲಿಲ್ಲ. ಹೊರಗಣ ಸುವಾಸನೆಯಂತು ನಾಣ್ಯಗಳಿಗೆ ಕಾಣುವದಿಲ್ಲವಷ್ಟೆ. ಬರೀ ಇಷ್ಟೇ ಆದರೆ ಬಾಧಕವಿಲ್ಲ. ನಾಣ್ಯವೆಂಬುದು ತನ್ನಲ್ಲಿ ವಾಸನೆಯಿಲ್ಲದಿದ್ದರೂ ಮನಸ್ಸಿನಲ್ಲಿ ದುರ್ವಾಸನೆಯನ್ನು ಹುಟ್ಟಿಸುವಂಥ ದ್ರವ್ಯ. ಇಂಥದ್ದನ್ನು ಪವಿತ್ರವಾದ ಪಾದಗಳ ಮೇಲೆ ಏಕೆ ಏರಿಸಬೇಕೋ ನನಗೆ ತಿಳಿಯದು. ನಮ್ಮ ಶ್ರೀಗಳವರು ನಾಣ್ಯವನ್ನು ಎಡಗಣ್ಣಿನಿಂದಲಾದರೂ ನೋಡುವಂತೆ ನನಗೆ ಕಾಣಲಿಲ್ಲ. ಇದೊಂದು ಹೆಚ್ಚುಗಾರಿಕೆ. ಈ ಹೆಚ್ಚುಗಾರಿಕೆಗೆ ತಕ್ಕಂತೆ ಅವರ ವೈರಾಗ್ಯವು ಮುಗಿಲು ಮುಟ್ಟಿರುವದು. ಅವರಿಗೆ ಕಾವಿಯ ಕೌಪೀನ ಒಂದರ ಹೊರತು ಎರಡನೆಯದರ ಸೋಂಕೇ ಇಲ್ಲ. ಭಸ್ಮದಿಂದ ಭೂಷಿತರಾಗಿ ಅವರು ಶೀತೋಷ್ಣಗಳನ್ನು ಸಮದೃಷ್ಟಿಯಿಂದ ನೋಡುತ್ತಿರುವರು. ದಂಡವಿದ್ದರೆ ಅದರ

ಸಂಬಂಧವಾದ ಕರ್ಮ ಒಂದಿದ್ದು ತಮ್ಮ ಜ್ಞಾನನಿಷ್ಠೆಗೆ ಕಂದಕವನ್ನು ತರುವದೆಂದು ಅವರು ಅದನ್ನೂ ಶಾಸ್ತ್ರೀಯವಾಗಿ ಸಂನ್ಯಾಸವನ್ನು ಮಾಡಿ ಅವಧೂತರಾಗಿರುವರು. ಇವರು ತಮ್ಮ ಮೌನದ ಕಾಲದ ಹೊರತು ಉಳಿದಾಗಲೆಲ್ಲ ಶಿಷ್ಯ ಮಂಡಲಿಗೆ ಉಪದೇಶದ ಸೂರೆಯನ್ನು ಮಾಡುತ್ತಿರುವರು. ಹೇಳಿ ಹೇಳಿ ಆಯಾಸವಾದರೂ ಹಿಂದೆಗೆಯದೆ ಜನರ ತಿಳಿವಳಿಕೆಯನ್ನು ತಿದ್ದುವದರ ಕಡೆಗೆ ಹೆಚ್ಚು ಯತ್ನವನ್ನು ಮಾಡುವರು. ಇವರ ಉಪದೇಶದಲ್ಲಿ ಉತ್ಕೃಷ್ಟವಾದ ಅನೇಕ ವಿಚಾರಗಳು ನಾನು ಮುಂದು ತಾನು ಮುಂದೆಂದು ನುಗ್ಗಿ ಬರುತ್ತಿರುವವು. ಇವರು ಹೀಗೆ ಉಪನ್ಯಾಸ ಮೂಲಕವೇ ಅಲ್ಲದೆ **'ಆದಿಶೈವಪತ್ರಿಕೆ'** ಎಂಬುದಕ್ಕೆ ಹಿತಚಿಂತಕರಾಗಿ ಅದಕ್ಕೆ ಉತ್ತೇಜನವನ್ನು ಕೊಟ್ಟಿರುವರು. ಶೈವಸಂಘಾಭ್ಯುದಯಕ್ಕಾಗಿ ಶ್ರೀ ಗುರುಕುಲಾಶ್ರಮದಿಂದ ಹೊರಡುವ ಅದರಲ್ಲಿ ಈ ಸ್ವಾಮಿಗಳ ವಿಚಾರಗಳೂ ಅನೇಕ ಧಾರ್ಮಿಕ ಪ್ರಸಂಗಗಳೂ ಬರುವವು. ಆಂಧ್ರ ಭಾಷಾಭಿಜ್ಞರು ಅದನ್ನು ಓದಬಹುದು. ಇವರು ಶಿಷ್ಯರಿಂದ ದುಡ್ಡೆತ್ತಿ ಅವರ ದುಡ್ಡಿನಿಂದ ಅವರಿಗೇ ಒಂದೇ ದಿನದಲ್ಲಿ ಅರಗಿಹೋಗುವ ಊಟವನ್ನು ಉಣಿಸಿ ಹೋಗುವ ಸ್ವಾಮಿಗಳಾಗಿಲ್ಲ. ಶಿಷ್ಯರಿಂದ ಏನನ್ನೂ ಬೇಡದೆ ಅವರಿಗೇ ತಮ್ಮ ಭಂಡಾರದಿಂದ ಹಸಿವು ಬಾಯಾರಿಕೆಗಳ ಹುಟ್ಟನ್ನೇ ಅಡಗಿಸುವ ಜ್ಞಾನ, ಕರ್ಮ, ಭಕ್ತಿ, ಯೋಗ - ಮೊದಲಾದ ಪಂಚಭಕ್ಷ್ಯ ಪರಮಾನ್ನಗಳ ಮಹಾಸಂತರ್ಪಣೆಯನ್ನು ಮಾಡುವ ಜ್ಞಾನಸತ್ರವನ್ನಿಟ್ಟಿರುವ ಸ್ವಾಮಿಗಳಿವರು. ಈ ಸಂತರ್ಪಣೆಯು ಇಲ್ಲಿ ಎರಡು ತಿಂಗಳಿಂದಲೂ ನಡೆಯುತ್ತಿರುವದು. ಇಂಥ ಸುಯೋಗವನ್ನು ಎಲ್ಲರೂ ಸದುಪಯೋಗ ಮಾಡಿಕೊಳ್ಳಬಹುದು.

(ಆರ್ಯಾ)

**1. ಶ್ರೀಮದ್ಯೋಗಾರೂಢಂ । ಭೂಮಾನಂದಸ್ವರೂಪನಕಲಂಕಂ ।**
**ಪ್ರೇಮದೊಳೆಮಗೀಯಲಿ ಸು। ಕ್ಷೇಮವನವಧೂತವರ್ಯಗುರುರಾಜಂ ॥**

**2. ಭೇದಿಸಿ ಶಾಸ್ತ್ರರಹಸ್ಯವ । ಬಾಧಿಸುತಾಶ್ರಿತರ ಸಕಲಪಾಪಗಳ ।**
**ಬೋಧಿಸುತಲುದ್ಧರಿಸುವೀ ಬೋಧಾನಂದರ ಪದಕ್ಕೆ ನಮಿಸುವೆ ನಾಂ ॥**

**3. ಕೌಪೀನವಸ್ತ್ರಮಾತ್ರಂ । ತಾಪಸಿ ಭಸ್ಮಾವಲಿಪ್ತಸರ್ವಾಂಗಂ ।**
**ತಾಪಕಧನನಿಃ ಸ್ಪೃಹಯುತಿ । ಭೂಪತಿ ತಾ ನೆಲೆಸಲೆಮ್ಮ ಮನದೊಳಗೆ ॥**

**4 ಜಯ ! ವೈರಾಗ್ಯವಿಭೂಷಣ । ಜಯ । ಬ್ರಹ್ಮಜ್ಞಾನನಿರತಶುದ್ಧಮನ ।**
**ಜಯ ! ಮೌನವ್ರತನಿಪುಣ । ಜಯ । ಬೋಧಾನಂದ ಸಕಲವಿಧಸುಗುಣ ॥**

# 10. ಶಾಂತಾದೇವಿಯ ಸಂಸಾರ

## (ಶಾಂತೆಯ ಮನೋಭಾವ)

**ಸೂತ್ರಧಾರ** - (ಬಂದು ರಂಗಮಂಟಪದಲ್ಲಿ ಹೂಗಳನ್ನು ಚೆಲ್ಲಿ)

ಆವ ತಪಸ್ವಿಗಳ್ಜಗದೆ ಧರ್ಮದ ಮೂರ್ತಿಗಳಾಗಿ ತೋರಿ ಸ।
ದ್ಭಾವದೆ ತಮ್ಮ ಸೇವಿಪರ ದುಃಖವ ದೂರಗೆಯ್ಯುತಂ ॥

ಪಾವನರಾಗಿ ಬಾಳ್ದಪರೊ ಆ ಗುರುವರ್ಽರ ಪಾದಧೂಲಿಯೊಳ್ ।
ತೀವಿ ಪೊರಳ್ವ ಯೋಗವನೆ ನೀಡು ಮಹಾಕರುಣಾಳು ಶಂಕರಾ ॥

(ತೆರೆಯಲ್ಲಿ) ಬಂದೆ, ಬಂದೆ !

**ಸೂತ್ರ** : - ಏನಿದು ! ನನ್ನ ಗೆಳೆಯನಾದ ಶಂಕರನು ಇಷ್ಟು ಅವಸರಗೊಂಡು ಬರುತ್ತಿದ್ದಾನೆ ! ಬರಲಿ.

**ಶಂಕರ** : - (ಬಂದು) ಏನೋ ಗೋವಿಂದ, ನನ್ನನ್ನೇಕೆ ಕೂಗಿದೆ !

**ಸೂತ್ರ** : - ನಾನು ನಿನ್ನನ್ನು ಕೂಗಲಿಲ್ಲವೋ, ನಾನು ಕೂಗಿದ್ದು ಪಾರ್ವತೀ ಪತಿಯಾದ ಶಂಕರನನ್ನು.

**ಶಂಕರ** : - ಪಾರ್ವತೀಪತಿಯು ನಿನಗೆ ಅಷ್ಟು ದೂರದಲ್ಲಿರುವನೆ? ಹುಚ್ಚ! ನಮ್ಮ ಹೃದಯದೊಳಗಿರುವವನನ್ನು ಕರೆಯುವದಕ್ಕೆ ಇಷ್ಟು ದೊಡ್ಡ ಕೂಗೆ?

**ಸೂತ್ರ** : - ಅಪ್ಪ, ನೀನು ಗುರುಗಳ ಬಳಿಯಲ್ಲಿಯೇ ಇದ್ದು ಇದ್ದು ಆ ಅಭಿಪ್ರಾಯವನ್ನು ಮನಸ್ಸಿಗೆ ಅಳವಡಿಸಿಕೊಂಡಿದ್ದಿ. ನಾನಿನ್ನೂ ಆ ಮೆಟ್ಟಲಿಗೇರಿಲ್ಲ.

**ಶಂಕರ** : - ಇರಲಿ. ಅದೇನು ಈಗ ಇಷ್ಟು ಉತ್ಸಾಹದಿಂದ ಪಾರ್ವತೀಪತಿಯನ್ನು ಕೂಗಿದೆ?

**ಸೂತ್ರ** : - ಮತ್ತೇನೂ ಇಲ್ಲ. ಈ ದಿನ ಅನಂತಕೋಟಿ ಬ್ರಹ್ಮಾಂಡನಾಯಕ ರಾಜಾಧಿರಾಜ ಸಚ್ಚಿದಾನಂದ ಶ್ರೀಬ್ರಹ್ಮಚೈತನ್ಯ ಸದ್ಗುರುಮಹಾರಾಜರ ಪುಣ್ಯ ತಿಥಿಯಲ್ಲವೆ?

**ಶಂಕರ** : - ಓಹೋಹೋ ! ಗೋವಿಂದ, ನೀನು ಬಹಳ ಕಾಲ ಅವರ ಬಳಿಯಲ್ಲಿಲ್ಲದಿದ್ದರೂ ಅವರ ಮೇಲೆ ಭಕ್ತಿ ಮಾತ್ರ ನಿನಗೆ ಬಹಳವಿರುವದನ್ನು ನೋಡಿ ನನಗೆ ಬಹಳ ಸಂತೋಷ. ಈ ದಿನದ ಉತ್ಸವವನ್ನು ಹೇಗೆ ನಡೆಸಬೇಕೆಂದಿದ್ದಿ?

ಸೂತ್ರ : - ಹೇಗಿನ್ನೇನು ? ಭಜನೆ, ಊಟ.

ಶಂಕರ : - ಗೋವಿಂದ, ನಮ್ಮ ಗುರುಗಳಿಗೆ ಅಷ್ಟರಿಂದ ತೃಪ್ತಿಯಾಗದು.

ಸೂತ್ರ : - ಮತ್ತೇನಾಗಬೇಕೆನ್ನುತ್ತಿ ?

ಶಂಕರ : - ನಮ್ಮ ಗುರುಗಳು ಅನ್ನಸತ್ರವನ್ನೂ ಬೇಕಾದಷ್ಟು ಇಟ್ಟಿದ್ದರೂ ತಾವು ತಮ್ಮ ವಾಣಿಯಿಂದ ಎಲ್ಲರಿಗೂ ಜ್ಞಾನಭಿಕ್ಷೆಯನ್ನು ನೀಡುತ್ತಿದ್ದರು.

ಸೂತ್ರ : - ಈಗ ನಾವೇನು ಮಾಡಬೇಕು?

ಶಂಕರ : - ಅಧ್ಯಾತ್ಮವಿಚಾರದ ತಿಳಿಯನ್ನೊಳಗೊಂಡಿರುವ ಒಂದು ನಾಟಕದಿಂದ ಜನರ ಮನಸ್ಸನ್ನು ಉಲ್ಲಾಸಗೊಳಿಸೋಣ.

ಸೂತ್ರ : - ಇಂಥ ಸಂದರ್ಭದಲ್ಲಿ ಅಧ್ಯಾತ್ಮವಿಚಾರದ ನಿರೂಪಣವಾದರೂ ಆದರೆ ಚನ್ನಾಗಿರುವದು. ನಾಟಕವೆಂದರೆ ಬಹಳ ಕೀಳಾಗುವದಿಲ್ಲವೆ?

ಶಂಕರ :-ನೀನು ಹೇಳುವದು ಸರಿ. ಆದರೆ ಬರುಬರುತ್ತ ಜನರು ವಿಷಯಾಸಕ್ತಿ ಸೆಳೆತಕ್ಕೆ ಸಿಕ್ಕಿ ನಿರೂಪಣಗಳ ಮೇಲೆ ಮನಸ್ಸನ್ನಿಡಲಾರದವರಾಗಿರುವರು. ಅಂಥವರ ಮನಸ್ಸನ್ನು ಧರ್ಮದ ಕಡೆಗೆ ಎಳೆಯುವದಕ್ಕೆ ಈಗಿನ ಕಾಲಕ್ಕೆ ನಾಟಕವೇ ಒಳ್ಳೆ ಉಪಕರಣ. ನಾಟಕದ ಮೇಲೆ ಜನರಿಗೆ ಚಟ ಹೆಚ್ಚು.

ಸೂತ್ರ : - ನಾವು ಅವರ ಚಟವನ್ನು ಇನ್ನೂ ಹೆಚ್ಚಿಸಿದಂತಾಗುವದಿಲ್ಲವೇ?

ಶಂಕರ : - ನಾಟಕವೆಂಬುದೇನೋ ಚಟವೆಂಬುದು ನಿಜ. ಅದರಲ್ಲಿ ವ್ಯವಹಾರದ ವಿಷಯವೇ ತುಂಬಿದ್ದರೆ ಅದು ಕೆಟ್ಟ ಚಟ; ಧರ್ಮದ ವಿಚಾರವಿದ್ದರೆ ಒಳ್ಳೆ ಚಟ. ಮುಳ್ಳನ್ನೂ ಮುಳ್ಳಿನಿಂದ ತೆಗೆಯುವಂತೆ ವ್ಯವಹಾರದ ಚಟವನ್ನು ಧರ್ಮವಿಚಾರದ ಚಟದಿಂದ ತೆಗೆದುಹಾಕುವದಕ್ಕೆ ಅನುಕೂಲವಾಗುತ್ತದೆ.

ಸೂತ್ರ : - ಈಗಿನ ಕಾಲದಲ್ಲಿ ಅಂಥ ನಾಟಕವನ್ನು ಯಾರು ಬರೆಯುತ್ತಾರೆ?

ಶಂಕರ : - ಹೊಸಕೆರೆ ಚಿದಂಬರಯ್ಯನವರದೊಂದು ಇದೆ.

ಸೂತ್ರ : - ಬೇಡಪ್ಪ, ಅವರ ಗ್ರಂಥಗಳೆಲ್ಲ ಬಹಳ ಧರ್ಮದ ಗೊಡ್ಡು.

ಶಂಕರ : - ಅವರ ಹಿಂದಿನ ಗ್ರಂಥಗಳನ್ನು ನೋಡಿ ನೀನು ಹೀಗೆ ಹೆದರುತ್ತಿ. ಈಚೀಚೆಗೆ ಸ್ವಲ್ಪ ಬುದ್ಧಿ ಬಂದಿದೆ.

**ಸೂತ್ರ** : - ಅವರಿಗೆ ಎಷ್ಟು ಬುದ್ಧಿ ಬಂದರೂ ಅವರು ಒಳಗೆಲ್ಲ ಧರ್ಮವನ್ನೇ ತುಂಬದೆ ಬಿಡುವದಿಲ್ಲ. ಅದು ಜನರಿಗೆ ರುಚಿಸುವದಿಲ್ಲ.

**ಶಂಕರ** : - ಅಯ್ಯೋ ಹುಚ್ಚ, ನಿನಗಿನ್ನೂ ತಿಳಿಯದು. ಜನರು ಒಳಗಿರುವದನ್ನು ನೋಡುವದಿಲ್ಲ. ಜನರ ಕಣ್ಣು ಹೊರಮೈಮೇಲೆ ಮಾತ್ರ. ನಾಟಕದ ಹೆಸರು ಜನರ ಮನಸ್ಸನ್ನು ಸೆಳೆಯುವಂತಿದ್ದರಾಯಿತು.

**ಸೂತ್ರ** : - ಜನರು ಒಳಗಿರುವುದನ್ನು ನೋಡದೆ ಹೋದರೆ ನಾವು ಒಳಗೆ ಧರ್ಮದ ಹೂರಣವನ್ನಿಟ್ಟದ್ದಕ್ಕೇನು ಸಾರ್ಥಕ?

**ಶಂಕರ** : - ತಿಳಿಯದೆ ತಿಂದರೂ ಧರ್ಮದ ಹೂರಣವು ಪುಷ್ಟಿಕರವಲ್ಲವೆ?

**ಸೂತ್ರ** : - ನೀನು ಹೇಳಿದ ಗ್ರಂಥಕರ್ತರು ಧರ್ಮದ ಹೂರಣವನ್ನು ಅಜೀರ್ಣವಾಗುವಷ್ಟು ಇಟ್ಟುಬಿಡುತ್ತಾರೆ. ಇದೊಂದು ದೋಷ. ಇನ್ನೊಂದೇನೆಂದರೆ ಅವರ ಬರವಣಿಗೆ ಎಲ್ಲ ವೈರಾಗ್ಯಮಯ. ಅವರೆಲ್ಲಿಯೂ ಸ್ತ್ರೀವರ್ಣನೆಯನ್ನು ಮಾಡಿದ್ದು ನಾನು ಕಂಡಿಲ್ಲ. ಸುಧರ್ಮಪ್ರಭಾವವೆಂಬ ನಾಟಕದಲ್ಲಿ ಅವರು ಒಬ್ಬಿಬ್ಬರು ಸ್ತ್ರೀಯರನ್ನು ತಂದಿದ್ದರೂ ಅದರ ಹೆಸರನ್ನಿಡುವಾಗ ಗಂಡಸಿಗೇ ಹೆಚ್ಚುಗಾರಿಕೆಯನ್ನು ಕೊಟ್ಟರು. ನಾಟಕವು ಮನಸ್ಸನ್ನು ಸೆಳೆಯಬೇಕಾದರೆ ಹೆಂಗಸಿಗೆ ಪ್ರಾಶಸ್ತ್ಯವಿರಬೇಕು.

**ಶಂಕರ** : - ನೀನು ಹೇಳುವದು ನಿಜ. ಅವರ ಬುದ್ಧಿಯು ಸ್ವಲ್ಪ ಮಂದವಾದ್ದರಿಂದ ಈ ಗುಟ್ಟನ್ನು ಅವರು ಮುಪ್ಪಿನತನಕ ಅರಿಯದೆ ಹೋದರು. ಈಗ ಅವರು ಈ ವಿಷಯದಲ್ಲಿ ಕಣ್ಣು ತೆರೆದು ದಾರಿಗೆ ಬಂದಿದ್ದಾರೆ.

**ಸೂತ್ರ** :– ಈಗ ಅವರು ಬರೆದಿರುವ ನಾಟಕವು ಯಾವದು?

**ಶಂಕರ** : - ಶಾಂತಾದೇವಿಯ ಸಂಸಾರವನ್ನು ನೀನು ನೋಡಿಲ್ಲವೆ?

**ಸೂತ್ರ** : - ನಿಜ, ನಿಜ. ನಾನು ಮರೆತಿದ್ದೆ. ಈಗಿನ ಕಾಲಕ್ಕೆ ತಕ್ಕಂತೆ ಬರೆದದ್ದು ಅವರದು ಇದೊಂದೇ ಆದ್ದರಿಂದ ಇದು ನನಗೆ ಎದ್ದು ಕಾಣಲಿಲ್ಲ.

**ಶಂಕರ** : - ಈಗಿನ ಕಾಲಕ್ಕೆ ತಕ್ಕಂತೆ ಎಂದು ಪೂರ್ಣವಾಗಿಯೂ ಹೇಳುವದಕ್ಕೆ ಬಾಯಿ ಬರದು. ಈಗಿನ ಕಾಲದಲ್ಲಿ ಹೊಸ ಹೊಸ ಬಗೆಯ ಕತೆಗಳು ಹೊಸ ಹೊಸ ಬೆಡಗನ್ನು ಬೀರುತ್ತಿವೆ. ನಮಗೆ ಧರ್ಮದ ಹೂರಣವು ಬೇಕಾದದ್ದರಿಂದ ಮಾತ್ರ ನಾನು ಅವರ ಗ್ರಂಥವನ್ನು ನೆನಪುಗೊಟ್ಟೆನು. ಇಲ್ಲದಿದ್ದರೆ ನಾನು ಅವರನ್ನು ಕತೆಗಾರರಲ್ಲಿ ಸೇರಿಸಲಾರೆನು.

**ಸೂತ್ರ** : - ಆಗಲಿ, ಆ ನಾಟಕವನ್ನೇ ಆಡೋಣ. ನಾಂದೀಪದ್ಯಕ್ಕೆ ಯಾವದನ್ನು ಹೇಳೋಣ?

**ಶಂಕರ** : - ನೀನು ಪಾರ್ವತೀಪತಿಯನ್ನು ಧ್ಯಾನಿಸಿದೆಯಲ್ಲ? ಅದೇ ನಾಂದೀಪದ್ಯ. ಪ್ರಿಯೆಯನ್ನು ನಟಿಯಾಗಿ ಮಾಡಿ ಕರೆಯಬೇಕಾಗುತ್ತದೆ. ಇದು ನನ್ನ ಮನಸ್ಸಿಗೆ ಬರುವದಿಲ್ಲ.

**ಶಂಕರ** : -ಗಂಡನೂ ಹೆಂಡತಿಯೂ ಎಷ್ಟು ಸರಸಿಗಳಾಗಿರುವರೆಂಬುದನ್ನು ತೋರಿಸಿ ತಮ್ಮ ಕಡೆಗೆ ಜನರ ಮನಸ್ಸನ್ನು ಸೆಳೆಯಬೇಕೆಂದೋ ಏನೋ ಹಿಂದಿನವರು ಆ ಪದ್ಧತಿಯನ್ನು ಮಾಡಿಕೊಂಡಿರಬಹುದು. ಈಗ ನಮಗೆ ಅದು ಬೇಡ. ಜನರ ಮನಸ್ಸನ್ನು ಸೆಳೆಯುವದಕ್ಕೆ ಅದೊಂದೇ ದಾರಿಯಲ್ಲ.

**ಸೂತ್ರ** : - ಅದು ಹೋಗಲಿ, ಋತುವರ್ಣನೆಗೇನು ಗತಿ ?

**ಶಂಕರ** : - ಋತುವೆಂಬುದು ಒಂದು ಕಾಲ. ಈಗಿನ ಕಾಲದಲ್ಲಿ ಧರ್ಮವು ಕಂಗೆಟ್ಟು ಕಣ್ಣೀರಿಡುತ್ತಿರುವದಷ್ಟೆ. ಅದರಿಂದ ವ್ಯಥೆಗೊಂಡಿರುವ ಭೂದೇವಿಯ ಯೋಗಕ್ಷೇಮ ವನ್ನು ಕೇಳುವ ಒಂದು ಪದ್ಯವನ್ನು ಹಾಡು. ಬರೀ ಗಾನವೇ ಪ್ರಯೋಜನವಾಗಿ ಉಳ್ಳ ಋತುವರ್ಣನೆಗಿಂತ ಗಾನದೊಡನೆ ಉಪದೇಶ ಪರವಾಗಿಯೂ ಇರುವ ಅಂಥ ಹಾಡುಗಳು ಹೆಚ್ಚು ಉಪಯೋಗವಾಗುವವು.

**ಸೂತ್ರ** : - ನಿಜ ಕೇಳು:

**ಸೀ|| ಸುರರಿಗೆ ಹವಿರ್ಭಾಗ ದೊರೆಯದೆಂದೋ ?**
**ಮತ್ತೆ -ಬರ ಬಂದು ಪ್ರಜೆ ಯೆಲ್ಲ ಸೊರಗಿತೆಂದೋ?**
**ಪರಿಪರಿಯ ರೋಗಗಳು ಬರಿದೆ ಹಬ್ಬಿದವೆಂದೋ?-**
**ಧರೆಯೊಳಗೆ ಯುದ್ಧಗಳು ಬೆಳೆದವೆಂದೋ?**

**ಕಿರಿಯುವರು ಹಿರಿಯರನು ಜರಿಯುತ್ತಲಿಹರೆಂದೊ?-**
**ಅರಿಯೆ ವೇದದ ಪಾಠವಿಲ್ಲವೆಂದೋ ?**
**ವರ ಭೂಸುರರು ಸೇವೆಗಿರುತಜೀವಿಪರೆಂದೋ?-**
**ಮೆರೆವಪಾತಿವ್ರತ್ಯ ವಿಲ್ಲವೆಂದೋ? ||**

**ಧರೆಗೆಲ್ಲ ದುರ್ಜನರ ಪೀಡೆಯೆಂದೋ? ।**
**ಇರದೆ ವರ್ಣಾಚಾರ ಹೋಯಿ ತೆಂದೋ? ।**
**ನೆರೆ ದೇಹ ಬುದ್ಧಿಯೇ ಬೆಳೆಯಿತೆಂದೋ? ।**
**ಹರಿಯ ರೂಪವು ಗುಪ್ತವಾಯಿತೆಂದೋ? ॥**

ಗೆಳೆಯನೆ, ನಾವಿನ್ನು ತಡಮಾಡಬಾರದು. ನಾವು ಒಂದೊಂದು ವೇಷವನ್ನು ಹಾಕಿಕೊಂಡು ಭಕ್ತಮಂಡಲಿಯ ಮುಂದೆ ಬರೋಣ.

**ಶಂಕರ** : - ಹಾಗೆಯೇ ಆಗಲಿ. ನಾನು ಮುಂದಾಗಿ ಹೋಗಿ ಶಾಂತಾದೇವಿಯನ್ನು ಕಳುಹುವೆನು. ಸ್ತ್ರೀವೇಷದ ಮುಖವನ್ನು ನೋಡುತ್ತಲೇ ಪ್ರೇಕ್ಷಕರ ಬೇಸರವು ಮಾಯವಾಗುವದು. ಅದೇ ನಾವು ಮೊದಲು ಮಾಡಬೇಕಾದ ಕೆಲಸ.

**(ಇಬ್ಬರೂ ಹೋಗುವರು)**

**(ಶಾಂತಾದೇವಿಯೂ ಇಂದಿರೆಯೂ ಉಪವನದಲ್ಲಿ ಹೂಕೊಯ್ಯುತ್ತಿರುವರು)**

**ಇಂದಿರೆ** : - ಶಾಂತಾ, ಇದೇನು? ಗುಲಾಬೀ ಹೂಗಳು ಸೊಗಸಾಗಿ ಅರಳಿ ಬಹು ಅಂದವಾಗಿರುವ ಗುಂಪಿನ ಪಕ್ಕದಲ್ಲಿ ನೀನು ನಿಂತಿದ್ದಾಗ ನೀನು ನನಗೆ ಕಾಣಲೇ ಇಲ್ಲ? ನಾನು ನಿನ್ನನ್ನೂ ಒಂದು ಗುಲಾಬಿಯ ಹೂವೆಂದೇ ತಿಳಿದುಕೊಂಡಿದ್ದೆನು.

**ಶಾಂತಾ** : - ಕಾವ್ಯಗಳನ್ನೇ ಓದುವವರಿಗೆ ಹಾಗೆ ಕಾಣಬಹುದು. ಕಂಡರೆ ತಾನೆ ಅದರಲ್ಲಿ ಹೆಚ್ಚುಗಾರಿಕೆಯೇನು? ಗುಲಾಬಿಯು ನನ್ನ ಮನಸ್ಸನ್ನೇನೂ ಸೆಳೆಯುವದಿಲ್ಲ.

**ಇಂದಿರೆ** : - ಏಕೆ, ಬಹು ಅಂದವಾಗಿಲ್ಲವೆ? ಭಕ್ತಿವಿಜಯವನ್ನೇ ಓದುವವರಿ ಗಾದರೂ ಅಂದವು ಕಾಣದೆ ಹೋಗುವದೆ?

**ಶಾಂತಾ** : - ಅಂದವು ಯಾರಿಗೂ ಕಾಣುವದಿಲ್ಲ. ಎಲ್ಲರಿಗೂ ಕಾಣುವದು ಹೂ. ಅದು ಈಶ್ವರನು ಸೃಷ್ಟಿಸಿದ್ದು. ಅದರಲ್ಲಿ ಅಂದವು ಮನುಷ್ಯರು ಸೃಷ್ಟಿಸಿಕೊಳ್ಳುವದು. ಅದನ್ನು ಅವರು ಹೇಗೆ ಹೇಗೆ ಸೃಷ್ಟಿಸಿಕೊಂಡರೆ ಹಾಗೆ ಹಾಗೆ ಕಾಣುವದು. ಆದ್ದರಿಂದ ಇಲ್ಲಿರುವ ಗುಲಾಬಿಯ ಹೂಗಳಲ್ಲಿ ನೀನು ಸೃಷ್ಟಿಸಿಕೊಂಡ ಅಂದದ ಜಾತಿಯೇ ಬೇರೆ. ನಾನು ಸೃಷ್ಟಿಸಿಕೊಂಡ ಅಂದದ ಜಾತಿಯೇ ಬೇರೆ.

**ಇಂದಿರೆ** : - ಅದು ಬೇರೆ ಎಂದು ಹೇಗೆ ಹೇಳುತ್ತೀ?

**ಶಾಂತಾ** : - ಕಣ್ಣು ನಿನಗೆ ಆ ಹೂವನ್ನು ತೋರಿಸಿದಾಗ ತಾನು ಅತ್ತ ಕಡೆಗೆ

ಹರಿದುಹೋಗಬೇಕೆಂಬ ಚಪಲವನ್ನು ಹೊಂದಿ ಅದಕ್ಕೊಂದು ಬಣ್ಣವನ್ನು ಕಟ್ಟಿ ತೋರಿಸಿತು. ನೀನು ನೋಡಿದ್ದು ಆ ಕಟ್ಟು ಬಣ್ಣದ ಅಂದ. ಆದ್ದರಿಂದಲೇ ನಿನ್ನ ಮನಸ್ಸು ಅತ್ತ ಕಡೆಗೇ ಹರಿದಿದೆ. ನಾನು ಬಣ್ಣವನ್ನು ಕಟ್ಟಿ ತೋರಿಸಬೇಡವೆಂದು ಕಣ್ಣಿಗೆ ಕಟ್ಟಪ್ಪಣೆಮಾಡಿದ್ದೇನೆ. ಆದ್ದರಿಂದ ನಾನುನೋಡಿದ್ದು ಹುಟ್ಟುಬಣ್ಣ. ಆದ್ದರಿಂದ ಹೊರಗೆ ಕಂಡ ಹೂ ಒಂದೇ ಆದರೂ ನಿನ್ನ ಮನಸ್ಸಿಗೆ ತೋರಿದ ಹೂವೇ ಬೇರೆ; ನನ್ನ ಮನಸ್ಸಿಗೆ ತೋರಿದ ಹೂವೇ ಬೇರೆ.

ಇಂದಿರೆ : - ಶಾಂತ, ನಾವಿಬ್ಬರೂ ಎಷ್ಟೋ ಜೀವದ ಗೆಳತಿಯರಾದರೂ ಇನ್ನೂ ನಿನ್ನ ಶುದ್ಧಬುದ್ಧಿಯ ಸೋಂಕು ನನಗೆ ಹತ್ತಲಿಲ್ಲವಲ್ಲ? ಇಂದ್ರಿಯಗಳು ಯಾವಾಗಲೂ ನಮಗೆ ಚಾಡಿಯ ಮಾತನ್ನು ಹೇಳುವವುಗಳೆಂದೂ ಅವುಗಳಲ್ಲಿ- ಹಂಸವು ನೀರನ್ನು ಅಲ್ಲಿಯೇ ಬಿಟ್ಟು ಹಾಲನ್ನು ಮಾತ್ರ ತೆಗೆದುಕೊಳ್ಳುವಂತೆ- ನಾವು ನಮ್ಮ ವಿವೇಕದಿಂದ ನಿಜವಾದಷ್ಟನ್ನು ಮಾತ್ರ ಗ್ರಹಿಸಬೇಕೆಂದೂ ನೀನು ಎಷ್ಟೋ ವೇಳೆ ನನಗೆ ಹೇಳಿದ್ದೆ. ಈ ಬುದ್ಧಿವಾದವನ್ನು ನಡೆವಳಿಕೆಯಲ್ಲಿಟ್ಟುಕೊಳ್ಳುವದು ನನಗೆ ಬಹಳ ಕಷ್ಟವಾಗಿದೆ. ಇರಲಿ. ಹುಟ್ಟು ಬಣ್ಣವನ್ನೇ ನೋಡಿದರೂ ಗುಲಾಬಿಯ ಅಂದವು ಹೆಚ್ಚಲ್ಲವೆ? ನೀನು ಅದಕ್ಕೆ ಕೈಹಾಕದೆ ತುಲಸಿಯ ದಲಗಳನ್ನೇ ಬಿಡಿಸುತ್ತಿರುವೆಯಲ್ಲ!

ಶಾಂತಾ : - ನನಗೆ ಅವೇ ಬಹು ಅಂದ. ಅಂದವನ್ನು ನಾವು ಶಾಸ್ತ್ರ ದೃಷ್ಟಿಯಿಂದಲೂ ಉಪಯೋಗದಿಂದಲೂ ನಿಶ್ಚಯಿಸಬೇಕು. ತುಲಸಿಯನ್ನು ಶಾಸ್ತ್ರವು ಬಹಳ ಹೊಗಳುವದು. ತುಲಸಿಗೆ ಸಮಾನವಾದ ಪವಿತ್ರವಾದುದಿನ್ನೊಂದಿಲ್ಲ. ಉಪ ಯೋಗದ ದೃಷ್ಟಿಯಿಂದ ನೋಡಿದರೂ ತುಲಸಿಯು ಬಹಳ ಕೆಲಸಕ್ಕೆ ಬರುವದು. ಗುಲಾಬಿಯು ಕಣ್ಣಿಗೆ ಮಾತ್ರ ಅಂದ. ಆದ್ದರಿಂದ ದೇವರಿಗಾಗಿ ಹೂವೆತ್ತುತ್ತಿರುವ ನನ್ನ ಕೈ ತುಲಸಿಯ ಕಡೆಗೇ ಹೋಗುವದು.

ಇಂದಿರೆ : - ನಿಜ. ನಿನ್ನ ಮಾತು ಸರಿ.

ಜಯಲಕ್ಷ್ಮಿ : - (ಪ್ರವೇಶಿಸಿ) ಏನಿರೇ, ನನ್ನನ್ನು ಬಿಟ್ಟು ನೀವೇ ಬಂದಿದೀರಿ? ಬಂದಿದ್ದಾರೆಂದು ಸುದ್ದಿ ಕಿವಿಗೆ ಬಿತ್ತು. ನೀನು ಈ ಸಮಯದಲ್ಲಿ ಮನೇಬಿಟ್ಟು ಹೊರಡಲಾರಳೆಂದು ನಿನ್ನನ್ನು ಕರೆಯಲಿಲ್ಲ.

ಶಾಂತಾ :- ಜಯ, ಮದುವೆಯ ಮಾತು ನಡೆಯುತ್ತಿರುವಾಗ ಅದನ್ನು ಆಲಿಸುತ್ತಿರದೆ ನೀನು ಇತ್ತ ಬಂದದ್ದು ಹೆಚ್ಚು.

ಜಯಲಕ್ಷ್ಮಿ :- ಇಂದಿರೆ ಇಂಥ ಸಂದರ್ಭದಲ್ಲಿ ಬಂದಿದ್ದರೆ ನಿಜವಾಗಿ ಹೆಚ್ಚೆನಿಸುತ್ತಿತ್ತು.

ನನ್ನ ಮನಸ್ಸಿಗೆ ನಿನ್ನ ಉಪದೇಶ ಚೆನ್ನಾಗಿ ನಾಟಿಹೋಗಿದೆ. ನಾನೇನೂ ಮದುವೆಗಾಗಿ ಬಾಯಿನೀರು ಸುರಿಸುವವಳಲ್ಲ.

ಇಂದಿರೆ : - ಹಾಗಾದರೇನು ಶಾಂತೆಯು ಮದುವೆಯನ್ನೇ ಮಾಡಿಕೊಳ್ಳುವದಿಲ್ಲವೋ ಹೇಗೆ?

ಜಯಲಕ್ಷ್ಮಿ :- ಮಾಡಿಕೊಳ್ಳುವಳೆಂತಲೂ ಇಲ್ಲ; ಮಾಡಿಕೊಳ್ಳುವದಿಲ್ಲವೆಂತಲೂ ಇಲ್ಲ. ಗಾಳಿ ಬೀಸಿದ ಹಾಗೆ.

ಇಂದಿರೆ : - ಗಾಳಿ ಬೀಸಿಯೇ ಬೀಸುತ್ತದೆ. ಮೊನ್ನೆ ನಮ್ಮ ನೆರೆಮನೆ ಸುಭದ್ರಮ್ಮನವರು ನಮ್ಮಮ್ಮನೊಡನೆ ಮಾತನಾಡುತ್ತ ಶಾಂತೆಗೆ ಆ ಕಾಮಸುಂದರ ಚಕ್ರವರ್ತಿಯು ಬಹು ಹೊಂದಿಕೆಯಾಗಿರುವನೆಂದು ಗಂಟು ಹಾಕುತ್ತಿದ್ದರು.

ಇಂದಿರೆ : - ಅದು ಒಳ್ಳೆಯದೆ. ಈಗ ನಾವು ಮಾಡುತ್ತಿರುವದೂ ಅದೇ.

ಜಯಲಕ್ಷ್ಮಿ : - ಇದೇನೆ? ನಿನಗೆ ಮದುವೆಯೇ ದೇವರೇನೇ?

ಇಂದಿರೆ : - ಬರೀ ಮದುವೆಯಲ್ಲವೆ; ಮದುವೆಯಲ್ಲಿ ಕೈಹಿಡಿದವನು.

ಶಾಂತಾ : - ಓಹೊಹೊಹೊ ! ನಮ್ಮ ಇಂದಿರೆ ಎಂಥ ಪತಿವ್ರತೆ !!

ಇಂದಿರೆ : - ಇದೆಲ್ಲ ನಿನ್ನಿಂದಲೇ ಕಲಿತದ್ದು

ಜಯಲಕ್ಷ್ಮಿ : - ಇರಲಿ. ಹೆಣ್ಣು ಹುಡುಗರು ಮದುವೆಯಾಗದೆ ಉಳಿಯಲೇ ಬಾರದೆಂದು ನಮ್ಮಲ್ಲಿ ನಿಯಮವಿರುವದರಿಂದ ಮದುವೆಯಾಗಲೇಬೇಕು. ಮದುವೆಯಾದ ಮೇಲೆ ಸಂಸಾರವು ಸುಖಮಯವಾಗಬೇಕಾದರೆ ಗಂಡನನ್ನು ದೇವರಂತೆ ಭಾವಿಸಲೇ ಬೇಕು.

ಇಂದಿರೆ : - (ತೆರೆಯ ಹಿಂದಿನ ಸದ್ದನ್ನಾಲಿಸಿ) ಯಾರೋ ನನ್ನನ್ನು ಕರೆಯುವಂತೆ ಕಾಣುವದು. ನಮ್ಮಮ್ಮನ ಧ್ವನಿಯಂತಿದೆ !

ದೇವರಮ್ಮ - (ಪ್ರವೇಶಿಸಿ) ಮಗು ಶಾಂತಾ, ಹೂವೆತ್ತಿದ್ದಾಯಿತೋ ಇಲ್ಲವೋ? ಮನೆಯಲ್ಲಿ ದೇವರಪೂಜೆಗೆ ಕಾದಿದ್ದಾರೆ. ಸುಭದ್ರಮ್ಮನವರೇನೋ ಮಾತಾಡುವದಕ್ಕೆ ಬರುತ್ತಾರಂತೆ. ಆದ್ದರಿಂದ ಪೂಜೆಯನ್ನು ಮುಗಿಸಬೇಕಾಗಿದೆ. ಬೇಗ ಬಾ.

ಎಲ್ಲರೂ - ಆಗಲಿ. (ಎಂದು ಹೋಗುವರು)

*****

## (ನವನಾಗರಿಕನ ಅಭಿರುಚಿ)

(ನಡುಮನೆಯಲ್ಲಿ ದೇವನಾಥಪಂಡಿತರೂ ದೇವರಮ್ಮನವರೂ ಮಾತಾಡುತ್ತಿರುವರು)

ದೇವರಮ್ಮ : - ಇನ್ನೇನು ! ಈಗಾಗ ಸುಭದ್ರಮ್ಮನವರು ಬರುತ್ತಾರೆ. ಅವರ ಯಜಮಾನರು ಒಳ್ಳೆ ಹೆಸರುಗೊಂಡ ವಕೀಲರು. ಅವರ ಹೆಂಡತಿಯಾದ್ದರಿಂದ ಇವರೂ ಚೆನ್ನಾಗಿ ತಿಳಿದವರು. ಈಗಿನ ಕಾಲದಲ್ಲಿ ಇಂಥವರ ಮಾತಿಗೆ ಬೆಲೆ ಹೆಚ್ಚು. ಈ ಸಲ ನೀವು ಅವರ ಮಾತಿಗೊಪ್ಪಿಬಿಡಬೇಕು.

ಪಂಡಿತರು : - ವಕೀಲರ ಹೆಂಡತಿ ಹೇಳುವ ಮಾತೆಂದೊಪ್ಪಬೇಕೊ ಮಗಳಿಗೆ ತಕ್ಕ ವರನೆಂಬುದನ್ನು ನೋಡಿ ಒಪ್ಪಬೇಕೊ ?

ದೇವರಮ್ಮ :- ವಕೀಲರ ಹೆಂಡತಿ ಹೇಳುವ ಮಾತೆಂದೂ ಒಪ್ಪಬೇಕು. ಅವರು ಹೇಳುವ ವರನು ನಮ್ಮ ಕಣ್ಣ ಮುಂದೇ ಇರುವವನು. ನೀವೇನು ನೋಡಿಲ್ಲವೆ? ಎಷ್ಟು ಮುದ್ದಾಗಿದ್ದಾನೆ?

ಪಂಡಿತರು : - ಮುದ್ದಾಗಿಲ್ಲದೆ ಏನು ! ಅವನು ಹೆಂಗಸಾಗಿದ್ದರೆ ಈಗಿನ ತರುಣರು ಅವಳನ್ನು ಮದುವೆಯಾಗುವದಕ್ಕೆ ಹೆಜ್ಜೆ ನಮಸ್ಕಾರವನ್ನು ಹಾಕುತ್ತ ಬರುತ್ತಿದ್ದರು.

ದೇವರಮ್ಮ :- ನಿಮ್ಮ ಕೋರೇ ಮಾತು ನನಗೆ ಗೊತ್ತು. ಅವನು ತಲೇತುಂಬ ಕೂದಲು ಬಿಟ್ಟುಕೊಂಡಿರುವನೆಂದು ನಿಮಗೆ ಅಸಮಾಧಾನ. ಈಗಿನ ಹುಡುಗರೆಲ್ಲ ಹಾಗೆಯೆ ಅದೊಂದು ಸೊಗಸು. ನಿಮ್ಮಂಥ ಹಳೇ ಜನರಿಗೆ ಸೊಗಸದೇ ಇದ್ದ ಮಾತ್ರಕ್ಕೆ ಅದೊಂದು ಸೊಗಸಲ್ಲವೆ?

ಪಂಡಿತರು : - ಹಳಬನ ಯಜಮಾನಿಯಾದರೂ ನೀನು ಹೊಸ ಸೊಗಸನ್ನು ಬಲ್ಲವಳಾಗಿದ್ದೀಯಲ್ಲ?

ದೇವರಮ್ಮ :- ನಿಮ್ಮ ಹಾಸ್ಯವು ಹಾಗಿರಲಿ. ಸುಭದ್ರಮ್ಮನವರು ಹೇಳುವ ವರನೇನೋ ನಮ್ಮ ಹುಡುಗಿಗೆ ಒಪ್ಪಾಗಿದ್ದಾನೆ.

ಪಂಡಿತರು : - ಇದೇನು ಹುಡುಗಿಯ ಅಭಿಪ್ರಾಯವೋ ನಿನ್ನ ಅಭಿಪ್ರಾಯವೋ?

ದೇವರಮ್ಮ :- ಹುಡುಗಿಗೆ ನಿಮ್ಮ ವಿದ್ಯೆಯನ್ನು ಕಲಿಸಿ ಕಲಿಸಿ ಮಂಕುಮಾಡಿದ್ದೀರಿ. ಅವಳು ಮದುವೆಯ ಮಾತನ್ನೇ ಹಚ್ಚಿಕೊಳ್ಳುವದಿಲ್ಲ. ಅವಳು ಹಳೇ ಕಾಲದ ಹುಡುಗಿಯಾಗಿದ್ದಾಳೆ. ಸುಭದ್ರಮ್ಮನು ಹೇಳುವ ವರನು ಈಗಿನ ಚತುರ, ಅವನಿಗೆ ತನ್ನ

ಹೆಂಡತಿ ಒಳ್ಳೆ ಚತುರೆಯಾಗಿ ಈಗಿನ ಕಾಲಕ್ಕೆ ತಕ್ಕಂತೆ ಸರಸಿಯಾಗಿರಬೇಕೆಂದು ಅಪೇಕ್ಷೆ. ಸುಭದ್ರಮ್ಮನವರೇ ಅವನ ಮನಸ್ಸಿನ ಮೇಲೆ ನಮ್ಮ ಶಾಂತೆಯ ರೂಪ ಲಾವಣ್ಯ ಬಿಂಬಿಸುವ ಹಾಗೆ ಮಾಡಿ ಅವನನ್ನು ದಾರಿಗೆ ತಂದಿರಬಹುದು. ಆ ವರನಿಗೆ ನಮ್ಮ ಶಾಂತೆಯನ್ನು ಕೊಟ್ಟರೆ ಎರಡು ಅರಗಿಣಿಗಳು ಕೂಡಿದಂತಾಗುತ್ತದೆ. ಅವರೂ ವಕೀಲರಾದ್ದರಿಂದ ಬೇಕಾದಷ್ಟು ಒಡವೆಯನ್ನಿಡುತ್ತಾರೆ. ಆದ್ದರಿಂದ ನಾವು ಆ ವರನಿಗೆ ಕೊಡಲೇಬೇಕು.

ಪಂಡಿತರು : - ಆಗಲಿ, ದೈವೇಚ್ಛೆ ಹೇಗಿದೆಯೋ ನೋಡೋಣ. ಅವನಿಗೆ ಕೊಡ ಬಾರದೆಂದು ನನಗೆ ಹಠವೇನೂ ಇಲ್ಲ.

ದೇವರಮ್ಮ : - ಅಷ್ಟೇ ಹೇಳಬೇಡಿ. ಕೊಡಬೇಕೆಂದೇ ಮನಸ್ಸು ಮಾಡಿ.

(ಸುಭದ್ರಮ್ಮ ಪ್ರವೇಶಿಸುವರು)

ದೇವರಮ್ಮ : - ಬನ್ನಿ ಅಮ್ಮ; ಸುಭದ್ರಮ್ಮನವರೆ, ಇಲ್ಲಿ ಬನ್ನಿ, ಇಲ್ಲಿ ಬನ್ನಿ ಮುಂದಣಿಗೆಯ ಮೇಲೆ.

ಪಂಡಿತರು :- ಬನ್ನಿ; ನಮ್ಮಂಥ ಬಡವರ ಮನೆಗೆ ನೀವು ವಿಶ್ವಾಸಪೂರ್ವಕವಾಗಿ ಬಂದದ್ದು ಬಹಳ ಸಂತೋಷ.

ಸುಭದ್ರಮ್ಮ : - ದೇವನಾಥಪಂಡಿತರೆ, ನಿಮ್ಮಂಥ ಪಂಡಿತದಂಪತಿಗಳ ದರ್ಶನಕ್ಕೆ ಎಂಥವರಾದರೂ ಬರಬೇಕಾದದ್ದೆ.

ದೇವರಮ್ಮ : - ನಮ್ಮ ಸುಭದ್ರಮ್ಮನವರು ನಮ್ಮ ಹೆಂಗಸರಲ್ಲೆಲ್ಲ ಒಳ್ಳೆಜಾಣರು.

ಪಂಡಿತರು : - ಅವರು ವಕೀಲರ ಕುಟುಂಬ. ಹೇಳಬೇಕಾದ್ದೇನು?

ಸುಭದ್ರಮ್ಮ : - ನಿಮ್ಮ ಮಗಳಿಗೆ ವರನನ್ನು ಗೊತ್ತುಮಾಡುವದಕ್ಕೆ ಯಾರೂ ಯಾವ ಜಾಣತನವನ್ನೂ ಉಪಯೋಗಿಸಬೇಕಾಗಿಲ್ಲ. ಅವಳ ರೂಪವೇ ಸಾಕು. ದೇವರಮ್ಮ ನವರು ಹೇಳಿದ ವರನ ವಿಷಯದಲ್ಲಿ ಮಾತನಾಡಿದೆ.

ದೇವರಮ್ಮ :- ಹಣ್ಣೋ, ಕಾಯೋ ?

ಸುಭದ್ರಮ್ಮ : - ಕಾಯಾಕಾದೀತಮ್ಮ? ನಿಮ್ಮ ಪಂಡಿತರ ತಪಃಪ್ರಭಾವವೆಲ್ಲ ಹಣ್ಣಾಯಿ ತೆಂದು ತಿಳಿದುಕೊಳ್ಳಿ. ಪಂಡಿತರೆ, ನಮ್ಮ ನೆರೆಮನೆಯ ದೇವೇಂದ್ರ ಚಕ್ರವರ್ತಿಗಳು ಈ ಊರಲ್ಲೆಲ್ಲ ಒಳ್ಳೆ ಹೆಸರಾದ ವಕೀಲರಷ್ಟೆ. ಅವರಮಗ, ನೀವು ನೋಡಿಯೇ ಇದ್ದೀರಿ.

ಕೈತೊಳೆದುಕೊಂಡು ಮುಟ್ಟಬೇಕು. ಈಗಿನ ಕಾಲದ ಇಂಗ್ಲೀಷು ವಿದ್ಯೆ ಯನ್ನಂತು ನುಂಗಿ ನೀರು ಕುಡಿದಿದ್ದಾನೆ. ಹೆಸರೋ ಕಾಮಸುಂದರಚಕ್ರವರ್ತಿ: ಯಾರೋ ಅವನನ್ನು ನೋಡಿ ಅವನಿಗೆ ತಕ್ಕ ಹೆಸರಿಟ್ಟಿದ್ದಾರೆ ನೋಡಿ. ನನಗೆ ಅವರ ಮನೆಯಲ್ಲಿ ಬಹಳ ಸಲಿಗೆ. ನಮ್ಮ ದೇವರಮ್ಮನವರು ಏನಾದರೂ ಮಾಡಿ ಆ ಸಂಬಂಧವನ್ನು ಗಂಟುಹಾಕಿಕೊಡಬೇಕೆಂದು ಬಹಳ ಹೇಳಿದರು. ನಾನು ಅದಕ್ಕೆ ಒಪ್ಪಿಸಿಕೊಂಡೇನೋ ಬಂದಿದ್ದೇನೆ. ಈ ಸಮಯವನ್ನು ನೀವು ಕಳೆದುಕೊಂಡರೆ ಇನ್ನು ಇಂಥ ಸಂಬಂಧ ದೊರೆಯುವದಿಲ್ಲ. ನೀವು ಹಿಂದಿನ ಕಾಲದವರು. ಹಿಂದಿನಕಾಲದ ಪದ್ಧತಿಯ ಮೇಲೆ ನಿಮಗೆ ಬಹಳ ಪ್ರೀತಿ ಇರಬಹುದು. ಅದೆಲ್ಲ ಹಳೇ ಕಾಲಕ್ಕೆ ಸರಿ. ಹಿಂದಿನ ಕಾಲದಲ್ಲಿ ಈಗಿನಷ್ಟು ನಾಗರಿಕತೆ ಇರಲಿಲ್ಲ. ಈಗಿನ ವಿದ್ಯೆ ಇರಲಿಲ್ಲ. ಬಹಳ ಹೇಳುವದೇನು? ಹೇಗೆ ಹೇಗೆ ಸುಖಾನುಭವವನ್ನು ಮಾಡಬಹುದೆಂಬುದೇ ಹಿಂದಿನವರಿಗೆ ತಿಳಿಯದು- ಕಾಮ ಸುಂದರಚಕ್ರವರ್ತಿಗೆ ಕೊಟ್ಟರೆ ನಿಮ್ಮ ಮಗಳು ತನ್ನರೂಪವನ್ನು ಸಾರ್ಥಕ ಮಾಡಿಕೊಳ್ಳುತ್ತಾಳೆ.

ದೇವರಮ್ಮ :- ಹೌದಮ್ಮ, ಹೌದು. ನೀವು ನಮ್ಮ ಭಾಗ್ಯಲಕ್ಷ್ಮಿಯಾಗಿ ಮನೆಗೆ ಬಂದು ಈ ಮಾತು ನುಡಿದಿದ್ದೀರಿ. ನಿಮ್ಮ ಮಾತೇ ನಮಗೆ ವೇದ. ಅಗತ್ಯವಾಗಿ ನಾವು ನಮ್ಮ ಹುಡುಗಿಯನ್ನು ಆ ವರನಿಗೇ ಕೊಟ್ಟದ್ದೂ ಕೊಟ್ಟದ್ದೇ.

ಪಂಡಿತರು : - ಸುಭದ್ರಮ್ಮನವರೆ, ನಾವು ಹಳೇ ಜನರು. ನಮಗೆ ಅದೃಷ್ಟದ ಮೇಲೆ ಬಹಳ ಭರವಸೆ. ದೇವರು ಯಾವದನ್ನು ತಂದು ಮುಂದೆ ನಿಲ್ಲಿಸುವನೊ ಅದನ್ನೇ ಮಹಾಪ್ರಸಾದವೆನ್ನುವವರು ನಾವು. ನೀವು ನಮ್ಮ ಹಿತಚಿಂತಕರಾಗಿ ಗೊತ್ತು ಮಾಡಿ ಕೊಂಡು ಬಂದಿದ್ದೀರಿ. ಆ ಮನೆಗೆ ನಮ್ಮ ಹುಡುಗಿಯನ್ನು ಕೊಡಬಾರದೆಂದೇನೂ ನನ್ನ ಮನಸ್ಸಿನಲ್ಲಿಲ್ಲ.

ದೇವರಮ್ಮ : - ನೋಡಿ ನೋಡಿ, ನಾನು ಮೊದಲೇ ನಿಮಗೆ ಹೇಳಿದ್ದೇನೆ. ಅಷ್ಟೇ ಆಡಬೇಡಿ. ಆ ಮನೆಯವರು ನಮ್ಮ ಹುಡುಗಿಯನ್ನು ತಂದುಕೊಂಡರೆ ಅದು ನಮ್ಮ ಪೂರ್ವಪುಣ್ಯದ ಪ್ರಭಾವವೆಂದು ತಿಳಿದುಕೊಳ್ಳಿ. ನಮ್ಮ ಹಿಂದಿನ ಕಾಲದ ಧರ್ಮವನ್ನೇ ಹಂಬಲಿಸುತ್ತಿರುವವರು ಎಷ್ಟು ಹಿಂದಕ್ಕೆ ಬೀಳುತ್ತಿದ್ದಾರೆ. ನೋಡಿ. ಹಿಂದಿನ ಧರ್ಮವು ನಮ್ಮ ಹೊಟ್ಟೆಗೇನೂ ಹಾಕುವದಿಲ್ಲ. ಬಹಳ ಸಂತೋಷದಿಂದ ಕೊಡುತ್ತೇನೆಂದು ಬಾಯಿಬಿಟ್ಟು ಹೇಳಿ. ಹುಡುಗಿ ಸುಖವಾಗಿ ಬಾಳಲಿ.

ಪಂಡಿತರು : - ಅದೇ ನನ್ನ ಇಷ್ಟ.

ದೇವರಮ್ಮ : - ಸುಭದ್ರಮ್ಮನವರೆ, ನಿಶ್ಚಯವಾಯಿತು. ಮಾತಾಡಿದರೆ ಹೋಯಿತು, ಮುತ್ತೊಡೆದರೆ ಹೋಯಿತು. ನಮ್ಮ ಮನೆಯವರು ಇನ್ನು ಮಾತು ಬದಲಾಯಿಸುವದಿಲ್ಲ. ಏನೋ ಅಮ್ಮ, ನಿಮ್ಮ ಸಹಾಯದಿಂದ ನಮ್ಮ ಶಾಂತೆಯು ಚಕ್ರವರ್ತಿಯ ಹೆಂಡತಿಯಾದಳು ಎನ್ನಿರಮ್ಮ, ಅದೇನು ಚಕ್ರವರ್ತಿಯೆಂಬ ಅಡ್ಡ ಹೆಸರಿನ ಅರ್ಥ?

ಸುಭದ್ರಮ್ಮ : - ಚಕ್ರವರ್ತಿಯೆಂದರೆ ರಾಜರಿಗೆಲ್ಲ ರಾಜನೆಂದು ಹೇಳುತ್ತಾರಮ್ಮ. ಅದರಲ್ಲಿ ಇನ್ನೇನರ್ಥವಿದೆಯೋ ನಮ್ಮ ಪಂಡಿತರಿಗೆ ಗೊತ್ತು.

ದೇವರಮ್ಮ : - (ಗಂಡನ ಕಡೆ ನೋಡಿ) ಅದೇನು? ಹಾಗೇಕೆ ಹೆಸರಿಟ್ಟಿದ್ದಾರೆ?

ಪಂಡಿತರು :-(ನಗುತ್ತ) ಸಂಸಾರಚಕ್ರದಲ್ಲಿಯೇ ಎಡೆಬಿಡದೆ ಸುತ್ತುತ್ತಿರುವರೆಂಬರ್ಥದಲ್ಲಿ ಅವರಿಗೆ ಆ ಹೆಸರು ಬಂದಿದೆ.

ದೇವರಮ್ಮ : - ಬಹು ಚೆನ್ನಾಗಿದೆ. ಅದೇ ನಮಗೆ ಬೇಕಾದದ್ದು. ಸಂಸಾರಕ್ಕೇ ಚೆನ್ನಾಗಿ ಅಂಟಿಕೊಂಡಿದ್ದರೆ ತಾನೆ ಈ ಲೋಕದಲ್ಲಿ ಸುಖ? ಸುಭದ್ರಮ್ಮನವರೆ, ನಿಜವಾಗಿ ನಿಮ್ಮ ಉಪಕಾರವನ್ನು ನಾನೆಂದೂ ಮರೆಯುವದಿಲ್ಲ. ನಾವು ಸಂತೋಷದಿಂದ ಒಪ್ಪಿದ ಸಂಗತಿಯನ್ನು ಅವರಿಗೆ ತಿಳಿಸಿ ಇನ್ನು ಮದುವೆಗೆ ಕರೆದುಕೊಂಡು ಬರುವದೊಂದೇ ತಡ.

ಸುಭದ್ರಮ್ಮ : - ಒಳ್ಳೇದಮ್ಮಾ, ನಾನುಹೊರಡುತ್ತೇನೆ.

ಪಂಡಿತರು : - ಆಗಲಮ್ಮ, ಬಹಳ ಸಂತೋಷ.

ದೇವರಮ್ಮ : - (ಸ್ವಲ್ಪ ದೂರ ಸುಭದ್ರಮ್ಮನ ಹಿಂದೆ ಹೋಗಿ) ನಮ್ಮವರಲ್ಲಿ ಸ್ವಲ್ಪ ಧರ್ಮದ ಜಡತ್ವವಿದ್ದರೂ ಬೀಗರು ಹುಡುಗಿಯ ಕಡೆ ನೋಡಿ ಮದುವೆ ಮಾಡಿಕೊಳ್ಳುವಂತೆ ಮಾಡುವದು ನಿಮ್ಮ ಮೇಲೆ ಬಿದ್ದ ಭಾರ. (ಬಂದು ಗಂಡನ ಕಡೆ ನೋಡಿ)ಇನ್ನು ಬೀಗರನ್ನು ಬರಮಾಡಿಕೊಳ್ಳುವದಕ್ಕೆ ಬೇಗ ಸಿದ್ಧಗೊಳಿಸಬೇಕು. ನನಗೆ ಅವಸರ. ನೀವೂ ಮುಂದಿನ ಕೆಲಸ ಮಾಡಿ.

ಪಂಡಿತರು : - ಆಗಲಿ.

(ಇಬ್ಬರೂ ಹೋಗುವರು)

(ಶಾಂತಾದೇವಿ, ಇಂದಿರೆ- ಇಬ್ಬರೂ ಗೌರೀಪೂಜೆಗೆ ಬರುತ್ತ)

ಇಂದಿರೆ : - ಶಾಂತಾ, ನೀನೊಳ್ಳೆ ಅದೃಷ್ಟವಂತೆ. ದೊಡ್ಡ ವಕೀಲರ ಸೊಸೆಯಾಗುವೆ. ನಿನ್ನ ರೂಪವು ಕಾಮಸುಂದರನ ಮನಸ್ಸನ್ನು ಹಾರಿಸಿದೆ. ಈ ಮದುವೆಗೆ ಅಡಚಣೆ ಬರದಂತೆ ಗೌರಿಯನ್ನು ಬೇಡಿಕೊ.

ಶಾಂತಾದೇವಿ :- ಇಂದಿರೆ, ರೂಪಕ್ಕೆ ಮನಸ್ಸನ್ನು ಸೋತ ಮದುವೆಗೆ ಆಡಚಣೆ ಬರಬಾರದೆಂದು ಬಯ್ಯುವದು ಸೃಷ್ಟಿಧರ್ಮಕ್ಕೆ ವಿರೋಧವಲ್ಲವೆ?

ಇಂದಿರೆ : -ಅದು ಹೇಗೆ?

ಶಾಂತಾದೇವಿ :- ರೂಪವು ಕ್ಷಣಕ್ಷಣಕ್ಕೆ ಬದಲಾಗತಕ್ಕದ್ದು. ಆದ್ದರಿಂದಲೂ ಆ ಮೆಚ್ಚುಗೆ ಬದಲಾಗಬಹುದು. ಇದರ ಮೇಲೆ ಈಶ್ವರನು ಸೃಷ್ಟಿಮಾಡಿರುವ ರೂಪವನ್ನು ನೋಡಿ ದೇವರು ಬಗೆಬಗೆಯಾಗಿ ಸೃಷ್ಟಿಮಾಡಿಕೊಳ್ಳಬಹುದು. ಆದ್ದರಿಂದಲೂ ಆ ಮೆಚ್ಚುಗೆ ಬದಲಾಗಬಹುದು. ಹಾಗಾಗಬಾರದೆಂದು ಕೋರುವದು ಹೇಗೆ ಸಿದ್ಧಿಸೀತು!

ಇಂದಿರೆ : - ಈಗ ನಿನ್ನ ವೇದಾಂತದ ಮಾತನ್ನು ಮುಂದುಮಾಡಬೇಡ. ಕಾಮಸುಂದರಚಕ್ರವರ್ತಿಯು ಒಳ್ಳೆ ನವನಾಗರಿಕ. ಅವನಿಗೆ ಇಂಥ ಮಾತು ಸೊಗಸುವದಿಲ್ಲ. ಅವನ ಮನಸ್ಸು ಬದಲಾಗದಂತೆ ದೇವಿಯನ್ನು ಬೇಡಿಕೊ.

ಶಾಂತಾದೇವಿ :- ಇಂದಿರೆ, ನೀನು ನನ್ನ ನಿಯಮವನ್ನು ಚೆನ್ನಾಗಿ ತಿಳಿಯಲಿಲ್ಲ.

ಇಂದಿರೆ : - ಅದೇನು? ಸ್ವಲ್ಪ ಹೇಳು.

ಶಾಂತಾದೇವಿ : - ನಮ್ಮ ಇಂಥದ್ದೊಂದು ಇಷ್ಟವನ್ನು ಪೂರ್ಣಮಾಡೆಂದು ನಾವು ಕೇಳಬಾರದು. ಆ ಇಷ್ಟವು ಮುಂದೆ ನಮಗೆ ಒಳ್ಳೆಯದನ್ನೇ ಮಾಡುವದೊ ಕೆಟ್ಟದ್ದನ್ನೆ ಮಾಡುವದೋ ನಮಗೆ ತಿಳಿಯುವದಿಲ್ಲ. ಆದ್ದರಿಂದ ನಾವಾಗಿ ಏನನ್ನೂ ಬಯಸ ಬಾರದು. ನಮಗೆ ಯಾವದು ಹಿತವೊ ಅದನ್ನು ದೇವಿಯೇ ತಿಳಿದು ಮಾಡುವಳು.

(ಎಂದಿಬ್ಬರೂ ಅಂಗಳದಲ್ಲಿದ್ದ ದೇವಿಯ ಗುಡಿಗೆ ಹೋಗಿ ದೇವಿಯ ಮುಂದೆ ಕುಳಿತು)

ಶಾಂತಾದೇವಿ : - (ಹಮೀರಕಲ್ಯಾಣಿ-ಏಕತಾಳ)

ಪಾಲಿಸೆನ್ನನೀಗ ಪಾರ್ವತಿ । ಕುಲಗಿರೀಂದ್ರ ಸುತೆ । ಮುನಿಸನ್ನುತೆ ||ಪ||

ದಿವಾಕರ ಕೋಟಿ । ಪ್ರಭಾವಮಯಳಾದ ದಿವೌಕಸಸಂಘ । ಪರಿಸ್ತುತೆಯೆ ||1||

ಮಹೇಶ್ವರಪೂರ್ಣ । ಮನೋರಥಾಂಗಿಯೆ ಮಹೇಶ್ವರಿ ಭಕ್ತ । ರಭೀಷ್ಟಕರಿ ||2||

ಶರಣ್ಯೇ ವರೇಣ್ಯೆ । ಸುಕಾರುಣ್ಯಮೂರ್ತೆ ಸುರೇಂದ್ರನುತೆ ಚಿ । ಚ್ಛರೀರಯುತೆ ||3||

ಇಂದಿರೆ : - ಶಾಂತಾ, ಇದೇನು? ನಾನು ಈ ಮದುವೆಯನ್ನು ನೆರವೇರಿಸೆಂದು ಮನಸ್ಸಿನಲ್ಲಿ ಮಾಡಿಕೊಂಡು ದಿಟ್ಟಿಸುತ್ತಿರುವಾಗಲೇ ದೇವಿಯ ಎಡಗಡೆಯ ಹೂ ಉದುರಿತಲ್ಲ !

ದೇವರಮ್ಮ : - (ಬೇಗ ಬಂದು) ಶಾಂತಾ, ಚೆನ್ನಾಗಿ ಹರಿಸಿಕೊ. ನಿನಗೆ ಈ ವರನೊಡನೆ ಮದುವೆಯಾದರೆ ದೇವಿಗೆ ಮುತ್ತಿನಮುಕುರವನ್ನು ಮಾಡಿಸಿಡುತ್ತೇನೆಂದು ಹೇಳಿಕೊ.

ಶಾಂತಾದೇವಿ : - ಅಮ್ಮ, ನಮ್ಮ ದೇವಿಯು ಲಂಚಕ್ಕೊಡಂಬಡುವವಳಲ್ಲ. ಅವಳು ತನಗೆ ತಿಳಿದದ್ದನ್ನು ಮಾಡುತ್ತಾಳೆ.

ದೇವರಮ್ಮ : - ಬೇಡವೇ. ಇನ್ನು ಇಂಥವನು ನಿನಗೆ ಸಿಕ್ಕಲಾರ. ಎಣ್ಣೆ ಬಂದಾಗ ಕಣ್ಣುಮುಚ್ಚಿಕೊಳ್ಳಬಾರದು.

ಸುಭದ್ರಮ್ಮ : - (ಬೇಗ ಬಂದು ನಿಟ್ಟುಸುರಿಟ್ಟು) ದೇವರಮ್ಮ !

ದೇವರಮ್ಮ :- ಬನ್ನಿ ಬನ್ನಿ; ಇದೇನಿರಮ್ಮ ಲಕ್ಷಣವಾಗಿ ನಿಟ್ಟುಸಿರುಬಿಟ್ಟಿರಿ !

ಸುಭದ್ರಮ್ಮ : -ಏನು ಹೇಳಮ್ಮ. ನಿಮ್ಮ ಹುಡುಗಿ ಗೌರೀಪೂಜೆಯನ್ನು ಮಾಡಿದಳೋ?

ದೇವರಮ್ಮ : - ಮಾಡಿದಳು, ಬನ್ನಿ. ಶಾಂತಾ, ಇವರಿಗೆ ಅರಸಿನ, ಕುಂಕುಮ, ತಾಂಬೂಲ, ಗಂಧ, ಹೂ- ಎಲ್ಲವನ್ನೂ ಕೊಟ್ಟು ನಮಸ್ಕಾರಮಾಡು ಆಶೀರ್ವಾದ ಮಾಡುತ್ತಾರೆ.

ಸುಭದ್ರಮ್ಮ : - ಇರಲಿ. ಈಗಲೇ ಏನವಸರ?

ದೇವರಮ್ಮ : - (ನಡುಗುತ್ತ) ಸುಭದ್ರಮ್ಮನವರ ಏನಿರಮ್ಮ, ನಿಮ್ಮ ಮಾತು ನನಗೇಕೋ ನಡುಕವನ್ನುಂಟುಮಾಡಿದೆ. ಇನ್ನೇನಾದರೂ ಹೊಸ ಸುದ್ದಿಯನ್ನು ತಂದಿದ್ದೀರೋ?

ಸುಭದ್ರಮ್ಮ : - ಏನು ಮಾಡುವದಮ್ಮ, ಯತ್ನವಿಲ್ಲ.

ದೇವರಮ್ಮ : - ಏನಿರಮ್ಮ ಅದು?

ಸುಭದ್ರಮ್ಮ : - ಏನೋ ಅಮ್ಮ, ಈಗಿನ ಕಾಲದ ಬೆಡಗು ನನಗೂ ತಿಳಿಯದು. ನಾನೂ ಹಳಬಳೆ. ಮೋಸಹೋದೆ.

ದೇವರಮ್ಮ : - ನಿಮ್ಮ ದಮ್ಮಯ್ಯ, ಅದೇನು ಹೇಳಿರಮ್ಮ?

ಸುಭದ್ರಮ್ಮ : - ಏನು ಹೇಳಲಮ್ಮ? ಸಾವಿರ ಚಿತ್ರ ಒಂದು ಮಶಿ ನುಂಗಿತು.

ದೇವರಮ್ಮ : - ಹೇಳಿರಮ್ಮ, ಅದೇನು?

ಸುಭದ್ರಮ್ಮ : - ಹೇಳುವದಕ್ಕೆ ನನಗೇ ನಾಚಿಕೆಯಾಗುತ್ತದೆ. ನಾನು ಅವರ ಮನೆ ಯವರನ್ನೆಲ್ಲ ಒಪ್ಪಿಸಿದ್ದೆ. ಮನೆಯವರು ತಮ್ಮ ಮಾತನ್ನು ತಮ್ಮ ಹುಡುಗ ತೆಗೆದು

ಹಾಕುವದಿಲ್ಲವೆಂದು ತಿಳಿದು ನನಗೆ ಒಪ್ಪಿಗೆಯನ್ನು ಕೊಟ್ಟಿದ್ದರು. ಈಗ ಎಣ್ಣೆಶಾಸ್ತ್ರಕ್ಕೆ ಕರೆಯುವದಕ್ಕೆ ಹೋದರಂತೆ. ಅವನು ತಲೇ ಅಲ್ಲಾಡಿಸಿಬಿಟ್ಟನಂತೆ.

ದೇವರಮ್ಮ : - ಸುಭದ್ರಮ್ಮನವರೆ, ಅವನಿಗೆ ಇನ್ನೂ ನಮ್ಮ ಹುಡುಗಿಗಿಂತ ಸುಂದರಿಯೆ?

ಸುಭದ್ರಮ್ಮ : - ನಿಮ್ಮ ಹುಡುಗಿಯ ಸೌಂದರ್ಯವೇನೋ ಸಾಕು; ನಿಮ್ಮ ಹುಡುಗಿಯಲ್ಲಿ ಈಗಿನ ಕಾಲಕ್ಕೆ ತಕ್ಕ ಥಳಕು ಇಲ್ಲವಂತೆ. ಹಣೆ ತುಂಬ ಕುಂಕುಮ ಇಡಬಾರದಂತೆ. ಭಜನೆ ಬೇಡವಂತೆ. ದೇವರ ಹುಚ್ಚು ಇರಬಾರದಂತೆ. ಸಂಗೀತ ಬರಬೇಕಂತೆ. ಏನೇನೋ ಹಲುಬುತ್ತಾನೆ. ಅಂತು ತನಗೆ ಶಾಂತೆಬೇಡವಂತೆ. ಬಿಡಲೇಳಿ. ದೇವರು ಎಲ್ಲಾದರೂ ಗಂಟುಹಾಕಿಯೇ ಇದ್ದಾನೆ. ನಿಮ್ಮವರ ತಪಃ ಪ್ರಭಾವಕ್ಕೆ ಒಳ್ಳೆ ಸಂಬಂಧವೇ ದೊರೆಯುತ್ತದೆ. ಚೋಟುದ್ದ ಹುಡುಗ. ಹಿರಿಯರ ಮಾತು ಲಕ್ಷ್ಯವೇ ಇಲ್ಲ. ಇವನು ನಿಮಗೆ ಸರಿಯಲ್ಲ ಬಿಡಿ. ಅವನಿಗೇ ಅದೃಷ್ಟವಿಲ್ಲ. ಅವನ ಹಣೆಯ ಬರಹದಲ್ಲಿ ಅವನ ಭಾಗಕ್ಕೆ ಕರಿ ಕರಡೀ ಮರಿಯನ್ನು ಬರೆದಿರಬಹುದು.

ದೇವರಮ್ಮ : - ಸುಭದ್ರಮ್ಮನವರೆ, ಮುಂದೇನು ಗತಿ? ನಾನು ಏನೇನೋ ಹೇಳಿ ಮನೆಯವರನ್ನು ಒಪ್ಪಿಸಿದ್ದೆನು. ಈಗ ಅವರಿಗೆ ಹೇಗೆ ಮುಖಾ ತೋರಿಸಲಿ? ಇನ್ನೇನು ಮಾಡಲಿ? ಅವನು ನಿಮ್ಮಂಥವರ ಮಾತನ್ನು ಕೂಡ ತಿರಸ್ಕರಿಸಿದ್ದಾನೆ. ಇದನ್ನು ಕಂಡರೆ ನನಗೇಕೋ ಮೈ ಉರಿಯುತ್ತದೆ.

ಸುಭದ್ರಮ್ಮ : - ನಾನು ಮನೆಗೆ ಹೊರಡುತ್ತೇನಮ್ಮ.

ದೇವರಮ್ಮ : - ಆಗಲಮ್ಮ, ನೀವೇನು ಮಾಡೀರಿ? ನಾನೂ ಒಳಗೆ ಹೋಗಿ ಅವರನ್ನು ಕಂಡು ಮುಂದಿನ ಯೋಚನೆ ನಡೆಸುತ್ತೇನೆ. (ಶಾಂತೆಯ ಕಡೆಗೆ ತಿರುಗಿ) ಶಾಂತಾ, ಇಂದಿರಾ, ಬನ್ನಿರಮ್ಮ ಒಳಕ್ಕೆ. ದೇವಿ ಏನುಮಾಡಿಸುತ್ತಾಳೋ ಅದಾಗುತ್ತದೆ. ನಮ್ಮ ಉದ್ದೇಶವೇ ನಡೆಯಬೇಕೆಂದರೆ ನಾವೆಷ್ಟರವರು? ನಿಜವಾಗಿ ಮನೆಯಲ್ಲಿ ಅವರು ಹೇಳುವ ಮಾತೇ ಸರಿ. ನಮ್ಮದೆಲ್ಲ ಬರೀ ಚಪಲ.

ಇಂದಿರೆ : - ನಡೆಯಿರಮ್ಮ, ಅವನದು ತೀರ ಅತಿ, ನಮಗೆ ಶಕುನವೂ ಆಗಲಿಲ್ಲ.

(ಎಲ್ಲರೂ ಹೋಗುವರು)

## (ಶಾಂತೆಗೆ ತಕ್ಕಗಂಡ)

(ಪಡುಶಾಲೆಯಲ್ಲಿ ದೇವನಾಥಪಂಡಿತರೂ ದೇವರಮ್ಮನೂ ಕುಳಿತಿರುವರು)

ದೇವರಮ್ಮ : - ಮಾಡಿದ ಗಣಪತಿ ಮಂಗನಾಯಿತು. ಇನ್ನೇನು ಮಾಡಬೇಕು?

ಪಂಡಿತರು : - ಮಾಡುವದೇನು? ಶಾಂತೆ ಹುಟ್ಟುವದಕ್ಕಿಂತಲೂ ಅವಳ ಗಂಡ ಮೊದಲೇ ಹುಟ್ಟಿಯೇ ಇದ್ದಾನೆ. ಅದು ನಮಗೆ ಗೊತ್ತಿಲ್ಲ , ಇಷ್ಟೆ.

ದೇವರಮ್ಮ : - ಎರಡೂ ಅರಗಿಣಿಗಳಂತಿರುವವೆಂದು ನಾನು ಬಹಳ ಆಶೆ ಯನ್ನಿಟ್ಟುಕೊಂಡಿದ್ದೆ.

ಪಂಡಿತರು : - ಅರಗಿಣಿಯು ಅರಸುಗಿಣಿಯ ಜೊತೆಗೆ ಹೇಗೆ ಸೇರೀತು?

ದೇವರಮ್ಮ : - ನಿಜವಾಗಿ ಅವನು ಇಷ್ಟು ದೂರ ಮುಂದೆ ಹೋಗಿದ್ದಾನೆಂದು ನನಗೆ ತಿಳಿಯಲಿಲ್ಲ.

ಪಂಡಿತರು : - ಮುಂದಕ್ಕಾದರೂ ಹೋಗಿರಲಿ; ಹಿಂದೆಯಾದರೂ ಉಳಿದಿರಲಿ. ಧರ್ಮದ ಮೇಲೆ ಅಕ್ಕರೆಯಿಲ್ಲದವರ ಮನೆಗೆ ಶಾಂತೆಯನ್ನು ಅಟ್ಟುವದು ನನಗೆ ಒಗ್ಗುವದಿಲ್ಲ.

ದೇವರಮ್ಮ : - ನೀವು ಹೇಳುವುದು ನಿಜವೆ. ಆದರೆ ಧರ್ಮಕ್ಕೆ ಹತ್ತಿ ಕೊಂಡಿರುವವರಿಗೆ ಈ ಕಾಲದಲ್ಲಿ ಏಳಿಗೆ ಇಲ್ಲವಲ್ಲ!

ಪಂಡಿತರು :- ಧರ್ಮಕ್ಕೆ ಹತ್ತಿಕೊಂಡಿರುವವರಿಗೆಂದಿಗೂ ಏಳಿಗೆಗೆ ಕೊರತೆ ಯಾಗುವದಿಲ್ಲ.

ದೇವರಮ್ಮ : - ನೋಡಿ. ಈಗ 'ಧರ್ಮ, ಧರ್ಮ' ಎಂದು ಹಳೇ ಪದ್ದತಿಯಲ್ಲಿರುವ ಜನಕ್ಕೆಲ್ಲ ಹೊಟ್ಟೆಗೇ ತಟ್ಟಾಟವಾಗಿದೆ. ಈಗಿನ ಕಾಲದ ನಾಗರಿಕತೆಯನ್ನು ತೋರಿಸಿದ ಹೊರತು ಸರಕಾರದ ಕೆಲಸವಂತು ಸಿಕ್ಕುವದೇ ಇಲ್ಲವಂತೆ. ಈಗಿನ ಕಾಲದಲ್ಲಿ ಯಾರಲ್ಲಿ ಬೇಕಾದರೂ ಉಣ್ಣಬಹುದಂತೆ ; ಯಾರಲ್ಲಿ ಬೇಕಾದರೂ ನಂಟತನವನ್ನು ಮಾಡ ಬಹುದಂತೆ. ಹೀಗೆಲ್ಲ ಮಾಡಿದ ಬಿಳೀ ಜನರನ್ನೇ ದೇವರು ಮೇಲಕ್ಕೇರಿಸಿದ್ದಾನಂತೆ.

ಪಂಡಿತರು : - ಮೇಲಕ್ಕೇರಿಸಿದ್ದನ್ನೆಲ್ಲ ಏಳಿಗೆಯೆಂದು ತಿಳಿಯಬಾರದು.

ದೇವರಮ್ಮ : - ಅದು ಹೇಗೆ?

ಪಂಡಿತರು : - ಹಿರಣ್ಯಕಶಿಪು ಪ್ರಹ್ಲಾದನನ್ನು ಬೆಟ್ಟದ ಮೇಲಕ್ಕೇರಿಸಿದ್ದನಷ್ಟೆ.

ದೇವರಮ್ಮ : - ನೀವೇನಾದರೂ ಹೇಳಿ ಬಾಯಿಕಟ್ಟಿಬಿಡುತ್ತೀರಿ. ಧರ್ಮವು ಯಾರಿಗೆ ದುಡ್ಡನ್ನು ತಂದುಕೊಟ್ಟಿದೆ ?

ಪಂಡಿತರು : - ದುಡ್ಡು ಒಳ್ಳೆ ಪದಾರ್ಥವಾಗಿದ್ದರೆ ಧರ್ಮವು ಅದನ್ನು ತಂದು ಕೊಡುತ್ತಿತ್ತು. ಅದು ತಂದೆ ಮಕ್ಕಳನ್ನೂ ಅಗಲಿಸುತ್ತದೆ; ಅಣ್ಣತಮ್ಮಂದಿರನ್ನೂ ಬೇರೆ ಮಾಡುತ್ತದೆ.

ದೇವರಮ್ಮ : - ದುಡ್ಡೇ ದೊಡ್ಡಪ್ಪನಲ್ಲವೆ? ದುಡ್ಡಿಲ್ಲದಿದ್ದರೆ ಸುಖವೆಲ್ಲಿ?

ಪಂಡಿತರು : - ಧರ್ಮದಲ್ಲಿ.

ದೇವರಮ್ಮ : - ಬರೀ ಧರ್ಮದಿಂದ ಯಾರು ಸುಖಿಗಳಾಗಿದ್ದಾರೆ?

ಪಂಡಿತರು : - ಧರ್ಮಕ್ಕೆ ಹತ್ತಿಕೊಂಡಿರುವವರನ್ನು ನೀನು ತೋರಿಸಿದರೆ ಅವರು ಸುಖಿಗಳಾಗಿರುವದನ್ನು ನಾನು ತೋರಿಸುತ್ತೇನೆ.

ದೇವರಮ್ಮ : - ನಮ್ಮ ಬೀದಿಯಲ್ಲಿರುವ ವಕೀಲರುಗಳೆಲ್ಲ ಧರ್ಮಿಷ್ಠರಲ್ಲವೆ?

ಪಂಡಿತರು : - ಎಂದಿಗೂ ಅಲ್ಲ. ಅವರು ಧರ್ಮದ ಮಾತುಗಳನ್ನಾಡುತ್ತಿರಬಹುದು. ಯಾರು ದೇವರ ವಿಚಾರದಲ್ಲಿಯೇ ಇರುವರೊ ಅವರು ಧರ್ಮಿಷ್ಠರು. ವಕೀಲರೆಲ್ಲ ವ್ಯವಹಾರದ ಮಾತಿನವರು. ಅವರಿಗೆ ದುಡ್ಡಿನಿಂದ ಸಿಕ್ಕುವಂಥ ದುಃಖಮಿಶ್ರಿತ ಸುಖವು ಸಿಕ್ಕಬಹುದು. ಧರ್ಮದಿಂದ ಸಿಕ್ಕುವಂಥ ಶುದ್ಧ ಸುಖವು ಅವರ ಪಾಲಿಗಿಲ್ಲ.

ದೇವರಮ್ಮ : - ಮನೆಮಾರು ಬಿಟ್ಟು ದೇವರ ವಿಚಾರವನ್ನೇ ಯಾರು ಮಾಡುತ್ತಾರೆ.

ಪಂಡಿತರು : - ಚಿದ್ಗಿರಿಯ ಮೇಲಿರುವ ನಿಜಾನಂದರ ವಿಷಯವನ್ನು ನೀನು ಕೇಳಿಲ್ಲವೇ?

ದೇವರಮ್ಮ : - ಒಳ್ಳೆ ಉದಾಹರಣೆ ಹೇಳಿದಿರಿ ! ಅವರಿಗೇನು ಸುಖ ? ಅವರು ಭಿಕ್ಷುಕರು.

ಪಂಡಿತರು : - ಅವರ ಸುಖದ ಆಳವನ್ನು ನಾವು ಕಾಣಲಾರೆವು. ಅವರದು ಅಷ್ಟು ಸುಖ!

ದೇವರಮ್ಮ :- ಅದೇನೋ ನನಗೆ ತಿಳಿಯದು. ನಮ್ಮ ಹುಡುಗಿ ಸುಖವಾಗಿ ಬಾಳುವ ಹಾಗೆ ಮಾಡಬೇಕು.

ಪಂಡಿತರು : - ನಾನೂ ಅಂಥ ಸಮಯವನ್ನೇ ಎದುರು ನೋಡುತ್ತಿದ್ದೇನೆ. ನೀನು ಅವಸರಗೊಂಡು ಮಗಳನ್ನು ಕಾಮಸುಂದರನಿಗೆ ಕಟ್ಟುವ ಯೋಚನೆನಡೆಸಿದೆ.

ದೇವರಮ್ಮ : - ನನ್ನಿಂದ ತಪ್ಪಾಯಿತು ಬಿಡಿ. ಇನ್ನು ಅವಳನ್ನು ಒಳ್ಳೆ ಕಡೆಗೆ ಕೊಡಿಸುವ ಭಾರ ನಿಮ್ಮದೇ.

ಪಂಡಿತರು : - ಆ ಭಾರವನ್ನು ನನ್ನ ಮೇಲೆ ಹಾಕಬೇಡ. ನಾನು ಮುದುಕ. ಹೊರಲಾರೆ. ದೇವರ ಮೇಲೆ ಹಾಕು. ಬರೀ ನಮ್ಮ ಮಾತಿನಿಂದೇನು? ಭಜನೆಯ ಹೊತ್ತಾಯಿತು. ಶಾಂತೆಯನ್ನು ಅವಳ ಜೊತೆಯವರೊಡನೆ ಬರಹೇಳು.

ದೇವರಮ್ಮ : - (ಒಳಗೆ ಹೋಗಿ ಬಂದು) ಇಗೋ ಬಂದರು.

(ಶಾಂತೆ, ಇಂದಿರೆ, ಇನ್ನಿಬ್ಬರು ಹುಡುಗಿಯರು ಬಂದು ಕುಳಿತುಕೊಳ್ಳುವರು)

ಪಂಡಿತರು : - (ಹೆಂಡತಿಯನ್ನು ಕುರಿತು) ದೇವರ ಮನೆಯ ಬಾಗಿಲನ್ನು ತೆಗೆ.

(ದೇವರಮ್ಮನು ಬಾಗಿಲನ್ನು ತೆಗೆಯುವಳು. ಪೂಜೆಗೊಂಡ ಪಾರ್ವತೀ ಪರಮೇಶ್ವರರು ಬೆಳ್ಳಿಯ ಬೆಟ್ಟದ ಮೇಲೆ ಶೋಭಿಸುತ್ತಿರುವರು. ಭಜನೆಗಾರಂಭವಾಯಿತು.)

ಪಂಡಿತರು :- ಸಾಂಬ ಸದಾಶಿವ ಸಾಂಬ ಸದಾಶಿವ ಸಾಂಬ ಸದಾಶಿವ ಸಾಂಬ ಶಿವ (ಎಲ್ಲರೂ ಹೇಳುವರು)

ಪಂಡಿತರು : - ಸಾಂಬ ಸದಾಶಿವ,ಶಂಭೋ ಶಂಕರ,ಶರಣಂಮೇ ತವ ಚರಣ ಯುಗಂ.

(ಎಲ್ಲರೂ ಹೇಳುವರು)

ಪಂಡಿತರು : -ಶಂಭೋಶಂಕರ, ಗೌರೀಶ, ಶಾಂತ ದಯಾಪರ, ವಿಶ್ವೇಶ

(ಎಲ್ಲರೂ ಹೇಳುವರು)

(ಆತ್ಮಾರಾಮನು ಬಂದು ಪಂಡಿತರಿಗೆರಿಗಿ ಕುಳಿತುಕೊಳ್ಳುವನು)

ಪಂಡಿತರು :- ಆತ್ಮಾರಾಮ, ಎರಡುಮೂರು ದಿನಗಳಿಂದ ನೀನು ಬರಲಿಲ್ಲ. ಎಲ್ಲಿಗೆ ಹೋಗಿದ್ದೆ?

ಆತ್ಮಾರಾಮನು : - ಚಿದ್ಗಿರಿಗೆ ಹೋಗಿದ್ದೆ.

ದೇವರಮ್ಮ : -ಏನಪ್ಪ ಮಗು. ಈ ಚಿಕ್ಕ ವಯಸ್ಸಿನಲ್ಲಿ ಸಂನ್ಯಾಸಿಗಳ ಬೆನ್ನುಹಿಡಿದು ಹೋಗಬಹುದೆ?

ಆತ್ಮಾರಾಮ : - ಯಾವದನ್ನು ಕಲಿಯುವದಕ್ಕೂ ಬಾಲ್ಯವೇ ತಕ್ಕ ಕಾಲವೆಂದು ಪಂಡಿತರ ಬಾಯಿಂದ ಕೇಳಿದ್ದೆನು. ಆದ್ದರಿಂದ ಹೋದೆ.

ದೇವರಮ್ಮ : - ಏನಾದರೂ ಕಲಿಯಬೇಕೆನ್ನುವವರು ಅವರ ಕಡೆಗೆ ಹೋಗುವದುಂಟೆ?

ಆತ್ಮಾರಾಮ : - ಅವರಿಂದ ಕಲಿಯಬೇಕಾದ ಪಾಠವನ್ನು ಕಲಿಯುವ ಬಯಕೆಯುಳ್ಳವರು ಬಹುಕಡಮೆಯಾದ್ದರಿಂದ ಅಲ್ಲಿಗೆ ಯಾರೂ ಹೋಗುವದಿಲ್ಲವೇ ಹೊರತು ಅವರಿಂದ ಕಲಿಯತಕ್ಕದ್ದು ಬಹಳವಿರುವದೆಂದು ನನಗೆ ತೋರುತ್ತದೆ.

ದೇವರಮ್ಮ : - (ಗಂಡನನ್ನು ಕುರಿತು) ಇಂಥ ಎಳೇ ಹುಡುಗರಿಗೆ ಸಂನ್ಯಾಸಿಗಳ ಕಡೆಯ ದಾರಿಯನ್ನು ತೋರಿಸಿದರೆ ಇವರ ಸಂಸಾರವನ್ನು ಮುಳುಗಿಸಿದಂತಾಗುವದಿಲ್ಲವೆ?

ಪಂಡಿತರು : - ಇಲ್ಲ. ಅಷ್ಟೇ ಅಲ್ಲ; ತೇಲಿಸಿದಂತಾಗುತ್ತದೆ. ಸಂಸಾರವೆಂಬ ಸಮುದ್ರದಲ್ಲಿ ಮುಳುಗಿ ಗುಟುಕುನೀರುಕುಡಿಯದೆ ಹೇಗೆ ಈಸಬಹುದೆಂಬುದನ್ನು ಅವರು ಹೇಳಿಕೊಡುತ್ತಾರೆ.

ದೇವರಮ್ಮ : - ಈಗ ಸಂಸಾರವನ್ನು ಮಾಡುವವರೆಲ್ಲ ಅವರಿಂದ ಈಸು ಕಲಿತವರೇನು?

ಪಂಡಿತರು : - ಅಲ್ಲವಾದ್ದರಿಂದಲೇ ಅವರು ಸಂಸಾರಸಾಗರದಲ್ಲಿ ಮುಳುಗಿ ತಳಮಳಿಸುತ್ತ ತೇಲುಗಣ್ಣುಮೇಲುಗಣ್ಣಾಗಿದ್ದಾರೆ. ನಮ್ಮ ಆತ್ಮಾರಾಮನು ಈಸು ಕಲಿಯುವದಕ್ಕೆ ಹೋಗಿದ್ದನೆಂದು ತೋರುತ್ತದೆ.

ಇಂದಿರೆ : - ಹಾಗಾದರೆ ಆತ್ಮಾರಾಮನು ಸಂಸಾರಸಾಗರದಲ್ಲಿ ಈಸುವದಕ್ಕಾಗಿ ಮದುವೆಯಾಗಬೇಕಲ್ಲ!

ಶಾಂತೆ : - ಇಂದಿರೆ, ನಿನಗೇಕೆ ಈ ಮಾತು?

ಆತ್ಮಾರಾಮ : - ನಾನು ಮದುವೆಯನ್ನು ಮಾಡಿಕೊಳ್ಳಬೇಕೆಂದೂ ಇಲ್ಲ; ಮಾಡಿಕೊಳ್ಳಬಾರದೆಂದೂ ಇಲ್ಲ.

ಇಂದಿರೆ : - ಏನಿದು! ಶಾಂತೆಯ ಮನಸ್ಸೂ ಇವನ ಮನಸ್ಸೂ ಒಂದೇ ಆಗಿಕಾಣುತ್ತದಲ್ಲ!

ಶಾಂತೆ : - ಇಂದಿರೆ, ಅಧಿಕಪ್ರಸಂಗವನ್ನು ಬಿಡು.

ಇಂದಿರೆ : - ಈಗ ಪ್ರಸಂಗವು ಯಾವದು?

ಶಾಂತೆ : - ಭಜನೆ.

ಪಂಡಿತರು : - ಒಳ್ಳೆಯದು

ಶಿವ ಹರ, ಶಂಭೋಗೌರೀಶಾ, ಭವಹರಶಂಕರ, ಗಿರಿಜೇಶಾ, (ಎಲ್ಲರೂ ಹೇಳುವರು)

ಪಂಡಿತರು : - ಹರ ನಮಃ ಪಾರ್ವತೀಪತಯೇ

ಎಲ್ಲರೂ - ಹರ ಹರ ಮಹಾದೇವ

ಪಂಡಿತರು :- ಇನ್ನು ಎಲ್ಲರೂ ಭೋಜನಕ್ಕೆ ತೆರಳೋಣ.

(ಎಲ್ಲರೂ ಹೋಗುವರು)

(ಎಡಕೋಣೆಯಲ್ಲಿ ದೇವನಾಥಪಂಡಿತರೂ ದೇವರಮ್ಮನೂ ಇರುವರು)

ದೇವರಮ್ಮ : - ಅದೇನು? ನೀವು ನಮ್ಮಹುಡುಗಿಗೆ ಆತ್ಮಾರಾಮನನ್ನು ಆರಿಸಿದಂತೆ ಕಾಣುತ್ತದೆ.

ಪಂಡಿತರು : - ಅವನಲ್ಲಿ ಕನ್ಯೆಯನ್ನು ದಾನವಾಗಿ ತೆಗೆದುಕೊಳ್ಳುವ ಯೋಗ್ಯತೆ ಇದೆ.

ದೇವರಮ್ಮ : - ತರುಣರೆಲ್ಲ ಯೋಗ್ಯರೇ. ಅವನದೇನು ಹೆಚ್ಚು?

ಪಂ : - ಬರೀ ಪಶುಸೌಖ್ಯಕ್ಕಾದರೆ ನೀನು ಹೇಳಿದ್ದು ಸರಿ. ಮನುಷ್ಯ ಸೌಖ್ಯಕ್ಕಾದರೆ ಕನ್ಯಾದಾನದ ಅಧಿಕಾರವೇ ಬೇರೆ.

ದೇ : - ಅದೇನು? ನನಗೆ ಸ್ವಲ್ಪ ಹೇಳಿ.

ಪಂ : - ಜಿತೇಂದ್ರಿಯನು ಕನ್ಯಾದಾನಕ್ಕೆ ಅರ್ಹನು.

ದೇ : - ವಿರಕ್ತರಿಗೆ ಮಗಳನ್ನು ಕೊಡಬಾರದೆನ್ನುತ್ತಾರಲ್ಲ?

ಪಂ : - ನಿಜ. ಜಿತೇಂದ್ರಿಯರಲ್ಲ ವಿರಕ್ತರಲ್ಲ.

ದೇ : - ಅದು ಹೇಗೆ?

ಪಂ : - ಸಂಸಾರದಲ್ಲಿರುವವನಾದರೂ ತಮ್ಮ ಇಂದ್ರಿಯಗಳ ಬೆನ್ನುಹತ್ತಿ ಹೋಗದೆ ಇರುವವರುಂಟು.

ದೇ : - ಅದೊಂದು ದೊಡ್ಡ ಯೋಗ್ಯತೆಯೆ?

ಪಂ : - ಒಂದು ದೊಡ್ಡ ರಾಷ್ಟ್ರವನ್ನು ಅನಾಯಾಸವಾಗಿ ಗೆಲ್ಲಬಹುದು; ಇಂದ್ರಿಯಗಳನ್ನೂ ಮನಸ್ಸನ್ನೂ ಗೆಲ್ಲುವದು ಸುಲಭವಲ್ಲ. ಅವುಗಳನ್ನು ಗೆದ್ದವನೇ ಗಂಡು. ಗಂಡಸಿಗಷ್ಟೆ ಮಗಳನ್ನು ಕೊಡಬೇಕು?

ಗಂಡು : - ನೀವು ಇಂಥ ಗುಣಗಳನ್ನು ನೋಡುತ್ತೀರೇ ಹೊರತು ಹುಡುಗಿಗೆ ಗಂಡು ಅನುರೂಪನಾಗಿರಬೇಕೆಂಬುದನ್ನು ನೋಡುವದಿಲ್ಲ.

ಪಂ : - ನಿನ್ನದು ಹೆಂಗಸರ ಬುದ್ಧಿ. ವರನಲ್ಲಿ ಗುಣವನ್ನು ನೋಡಬೇಕೇ ಹೊರತು ರೂಪವನ್ನು ನೋಡಬೇಕಾದ್ದಿಲ್ಲ.

ದೇ : - ನಮ್ಮ ಹುಡುಗಿಯ ರೂಪಿನಲ್ಲಿ ಕೊರತೆ ಇದ್ದರೆ ಯಾರಾದರೂ ಮದುವೆಮಾಡಿಕೊಳ್ಳುವರೇನು?

ಪಂ : - ಗುಣವು ಚೆನ್ನಾಗಿ ಕಂಡರೆ ರೂಪದಲ್ಲಿ ಕೊರತೆ ಇದ್ದರೂ ವಿವೇಕಿಗಳು ಅದನ್ನು ದೋಷವಾಗಿ ಎಣಿಸುವದಿಲ್ಲ. ಆದರೆ ಒಂದು ದೃಷ್ಟಿಯಿಂದ ನೋಡಿದರೆ ಹೆಣ್ಣಿಗೆ ರೂಪವು ಬೇಕು. ಏಕೆಂದರೆ ನಮ್ಮ ಶಾಸ್ತ್ರದಲ್ಲಿ ಹೆಣ್ಣುಭೋಗ್ಯವಸ್ತು. ಭೋಗ್ಯವಸ್ತು ಭೋಕ್ತನು ಮೆಚ್ಚುವಂತಿರಬೇಕಾಗುತ್ತದೆ. ಭೋಕ್ತನಾದ ಗಂಡಿನಲ್ಲಿ ರೂಪು ಮುಖ್ಯವಲ್ಲವೇ ಅಲ್ಲ.

ದೇ : - ರೂಪೆಂದರೆ ಕಣ್ಣು, ಮೂಗು-ಮೊದಲಾದದ್ದರ ಅಂದದ ಮಾತಿರಲಿ. ಆತ್ಮಾರಾಮನಲ್ಲಿ ಅದರ ಕೊರತೆಯೂ ಏನೂ ಇಲ್ಲ. ಮೈಬಣ್ಣಚೆನ್ನಾಗಿರಬೇಡವೆ?

ಪಂ : - ಆತ್ಮಾರಾಮನು ನೀಲಮೇಘಶ್ಯಾಮನಾಗಿ ಎಷ್ಟು ಚೆನ್ನಾಗಿದ್ದಾನೆ!

ದೇ : - ಆ ಕಪ್ಪನ್ನು ಹೊಗಳುವದಕ್ಕೇ ನಿಮ್ಮ ಪಾಂಡಿತ್ಯವನ್ನೇ ವೆಚ್ಚ ಮಾಡುತ್ತೀರಲ್ಲ!

ಪಂ : - ಕಪ್ಪನ್ನು ಹೊಗಳುವ ಪಾಂಡಿತ್ಯವೇ ಪಾಂಡಿತ್ಯ. ನಮ್ಮ ದೇಶದಲ್ಲಿ ಕಪ್ಪಿಗೆ ಬಹಳ ಹೆಚ್ಚುಗಾರಿಕೆ. ನಮ್ಮ ದೇವರಾದ ಕೃಷ್ಣನೂ ಕಪ್ಪು, ರಾಮನೂ ಕಪ್ಪು. ನಮ್ಮ ಪೂರ್ವದೇಶದ ಸಂಸ್ಕೃತಿಯ ದೃಷ್ಟಿಯಿಂದ ಕಪ್ಪಿನ ಮೇಲೆ ನಮಗೆ ಬಹಳ ಅಭಿಮಾನ. ಈಚೀಚೆಗೆ ಪಶ್ಚಿಮದೇಶದ ಬಿರುಗಾಳಿ ಬೀಸಿ ನಮ್ಮ ಸಂಸ್ಕೃತಿಯೆಲ್ಲ ತಲೆಕೆಳಕಾಗಿ ಬಿಳೀಬಣ್ಣವು ಅಟ್ಟಕ್ಕೇರಿದೆ. ನಾನೇನೋ ಆತ್ಮಾರಾಮನೇ ನಮ್ಮ ಹುಡುಗಿಗೆ ತಕ್ಕವರನೆಂದು ತಿಳಿಯುತ್ತೇನೆ.

ದೇ : - ಒಂದು ಪಕ್ಷ ಬಣ್ಣದ ಮಾತನ್ನು ಬಿಟ್ಟರೂ ಈಗಿನ ಕಾಲದ ಇಂಗ್ಲೀಷುವಿದ್ಯೆ ಎಳ್ಳಷ್ಟೂ ಬರದೆಹೋದಮೇಲೆ ಅವರ ಬಾಳು ಹೇಗೆ ನೆಟ್ಟಗಾಗುತ್ತದೆ.

ಪಂ : - ನಿನಗೆ ತಿಳಿಯದು. ಇಂಗ್ಲೀಷಾದರೂ ಆಗಲಿ, ಯಾವದಾದರೂ ಆಗಲಿ, ವ್ಯವಹಾರದ ವಿದ್ಯೆಯನ್ನೆಲ್ಲ ನಮ್ಮ ಪೂರ್ವಿಕರು ಅವಿದ್ಯೆಯೆಂದು- ಎಂದರೆ ಅಜ್ಞಾನವೆಂದು ತಿಳಿಯುತ್ತಾರೆ ನಮ್ಮ ಆತ್ಮಾರಾಮನು ಕಲಿಯಲಿಚ್ಛಿಸುವದು ನಿಜ ವಾದ ವಿದ್ಯೆ. ಆದ್ದರಿಂದ ಅವನೇ ಸರಿಯಾದ ವಿದ್ಯಾರ್ಥಿ.

ದೇ : - ಇನ್ನೇನು ಮಾಡುವದು ! ಚೆನ್ನಾಗಿ ವಿಚಾರಮಾಡಿ ಮಾಡಿಬಿಡಿ. ಹುಡುಗಿಗೆ ವಯಸ್ಸಾಯಿತು. ಏನೋ ಅವಳ ಹಣೆಯಲ್ಲಿ ಬರೆದದ್ದಾಗುತ್ತದೆ. ಈಗಿನ ಕಾಲದಲ್ಲಿ ಇಂಗ್ಲೀಷು ಕಲಿತರೂ ಹೊಟ್ಟೆಗಿಲ್ಲದೆ ಬೀದಿಬೀದಿ ಅಲೆಯುವವರೂ ಇದ್ದಾರೆ.

ಪಂ : - ನಾನು ಆತ್ಮಾರಾಮನ ಮನೆಯವರೊಡನೆ ಮಾತನಾಡಿ ಗೊತ್ತು ಮಾಡಿದ್ದೇನೆ. ಇನ್ನು ಮದುವೆಯ ಕೆಲಸವನ್ನು ಮುಂದುವರಿಸೋಣ ನಡೆ.

(ಇಬ್ಬರೂ ಹೋಗುವರು)

## (ಆತ್ಮಾರಾಮನ ವೈರಾಗ್ಯ)

(ಆತ್ಮಾರಾಮನೂ ಶಾಂತಾದೇವಿಯೂ ಕೋಣೆಯಲ್ಲಿ ಕುಳಿತಿರುವರು)

ಆತ್ಮಾರಾಮ : - ಪ್ರಿಯೆ, ದೊಡ್ಡ ದೊಡ್ಡ ಹಣಗಾರರೂ ವಿದ್ಯಾವಂತರೂ ಹಿಡಿಯಲಿಚ್ಛಿಸುವ ನಿನ್ನ ಕೈಯನ್ನು ನೀನು ನನಗೆ ನೀಡಿದ್ದು ಬಹಳ ಆಶ್ಚರ್ಯ ವಾಗಿದೆ.

ಶಾಂತಾದೇವಿ : - ಹಣದ ಬೆಲೆ ಜನರು ಕಟ್ಟುವದೇ ಬೇರೆ; ನಮ್ಮ ತಂದೆ ಕಟ್ಟುವದೇ ಬೇರೆ. ಇನ್ನು ವಿದ್ಯೆ ವಿಷಯದಲ್ಲಿ ನೋಡಿದರೂ ಜನರು ವಿದ್ಯೆಯೆನ್ನುವದೇ ಬೇರೆ, ನಮ್ಮ ತಂದೆ ವಿದ್ಯೆಯೆನ್ನುವದೇ ಬೇರೆ.

ಆತ್ಮಾರಾಮ :- ಅದೇನು ಸ್ವಲ್ಪ ಬಿಡಿಸಿ ಹೇಳು.

ಶಾಂತಾದೇವಿ :- ಹಣವು ಹೊಟ್ಟೆಬಟ್ಟೆಗೆ ಬೇಕಾದರೂ ನಿಜವಾದ ಸುಖವನ್ನು ಕೊಡುವ ವಸ್ತುವಲ್ಲವೆಂದೂ ಧರ್ಮವಿಚಾರವನ್ನರಿಯುವದೇ ವಿದ್ಯೆಯೆಂದೂ ನಮ್ಮ ತಂದೆಯ ಅಭಿಪ್ರಾಯ.

ಆತ್ಮಾರಾಮ :- ಅವರೇನೋ ಪಂಡಿತರು. ಇದರ ಮೇಲೆ ಅವರ ಮನಸ್ಸು ವೈರಾಗ್ಯದಿಂದ ತುಂಬಿದ್ದು. ಅವರ ಭಾವನೆಗಳೆಲ್ಲ ಹೀಗೆಯೆ. ಇವು ಈಗಿನ ಕಾಲ ದವರಿಗೆ ಒಪ್ಪಾಗುವದಿಲ್ಲ.

ಶಾಂತಾದೇವಿ :- ಒಬ್ಬರಿಗೆ ಒಪ್ಪಾಗಲಿ, ಬಿಡಲಿ; ನಿಜವು ನಿಜವೆ.

ಆತ್ಮಾರಾಮ : - ನಿನ್ನ ಮನಸ್ಸು ಈ ಅಭಿಪ್ರಾಯಗಳನ್ನು ಹಿಡಿದುಕೊಂಡದ್ದು ನನಗೆ ಆಶ್ಚರ್ಯವನ್ನುಂಟುಮಾಡಿದೆ.

ಶಾಂತಾದೇವಿ : -ನನ್ನ ಸುದೈವದಿಂದ ನಾನು ಚಿಕ್ಕಂದಿನಿಂದಲೂ ತಂದೆಯ ಶಿಕ್ಷಣೆಯಲ್ಲಿಯೇ ಬೆಳೆದವಳಾದ್ದರಿಂದ ನನ್ನ ಅಭಿಪ್ರಾಯಗಳೂ ಹಾಗೆಯೇ ಆಗಿವೆ.

ಆತ್ಮಾರಾಮ : - ಆ ಅಭಿಪ್ರಾಯಗಳೇ ನಿಜವಾದವುಗಳೆಂದು ಹೇಳುವದು ಹೇಗೆ?

ಶಾಂತಾದೇವಿ : - ಅನುಭವದಿಂದ ಹಣವಿಲ್ಲದಿರುವ ಸಾಧುಸತ್ಪುರುಷರು ಹಣಗಾರರಿಗಿಂತ ಸುಖಿಗಳಾಗಿಯೂ ಹಣಗಾರರಿಗಿಂತ ಮೇಲಿನ ಅಂತಸ್ತಿನವರಾಗಿಯೂ ಇರುವದೇ ಸಾಕ್ಷಿ. ಉಳಿದ ವಿದ್ಯೆಗಳು ಬಗೆಬಗೆಯ ಬಯಕೆಗಳ ಬಾಯಾರಿಕೆ ಗಳನ್ನು ಹುಟ್ಟಿಸಿ ತಳಮಳಗೊಳಿಸುವಾಗ ಧರ್ಮವಿದ್ಯೆಯು ಬಯಕೆಗಳನ್ನು ತಳಕ್ಕೆ ತುಳಿದು ಮನಸ್ಸಿನ ಮೇಲೆ ಶಾಂತಿಯ ಅಲೆಗಳನ್ನು ಹರಿಸುವದೇ ಸಾಕ್ಷಿ.

ಆತ್ಮಾರಾಮ : - ನಾನೂ ಸ್ವಲ್ಪ ಅದೇ ಹುಚ್ಚಿನವನಾದರೂ ನಿಜವಾಗಿ ನನಗೆ ನಿನ್ನಷ್ಟು ಜ್ಞಾನವಿಲ್ಲ.

ಶಾಂತಾದೇವಿ : - ತಿಳಿದವರು ಹೇಳುವದೇ ಹಾಗೆ. ಆದಿರಲಿ. ಮೊನ್ನೆ ನೀವು ನಿಜಾನಂದರ ಕಡೆಗೆ ಹೋಗಿದ್ದಿರಂತೆ. ಅದೇನು ವಿಶೇಷ? ನನಗೆ ಸ್ವಲ್ಪ ಹೇಳಿ.

ಆತ್ಮಾರಾಮ : - ಅದನ್ನು ನಿನಗೆ ಹೇಳಿದರೆ ನಿನ್ನ ಮನಸ್ಸಿಗೆ ಕಳವಳದ ಬೀಜವನ್ನು ಬಿತ್ತಿದಂತಾಗುತ್ತದೆ.

ಶಾಂತಾದೇವಿ : - ಅದೇಕೆ? ಹಾಗೇನೂ ಇಲ್ಲ. ಅದು ನನಗೆ ಹಿತಕರವಾಗಿಯೇ ಇರುವದು. ನನ್ನ ಓರಗೆಯವರಿಗೆ ಆ ಮಾತು ರುಚಿಸದೆ ಇರಬಹುದು. ನನಗೆ ಹಾಗಲ್ಲ.

ಆತ್ಮಾರಾಮ : - ನಿನ್ನ ಓರಗೆಯವರಿಗಿಂತ ನಿನಗೆ ಹೆಚ್ಚು ಧರ್ಮಬುದ್ಧಿ ಇರಬಹುದು. ಆದಮಾತ್ರಕ್ಕೆ ಆ ನನ್ನ ನಡೆವಳಿಕೆಯು ನಿನ್ನ ಮನಸ್ಸಿಗೆ ಒಗ್ಗೀತೆಂದು ಹೇಳಲಾರೆನು.

ಶಾಂತಾದೇವಿ : - ಕೊನೆಗೆ ನೀವು ಸಂನ್ಯಾಸಿಯಾಗುವದಕ್ಕೆ ಹೋಗಿದ್ದೆನೆಂದರೂ ನಾನು ಅದರ ಮೇಲೆ ವಿರೋಧ ಬುದ್ಧಿಯನ್ನು ಮಾಡುವದಿಲ್ಲ.

ಆತ್ಮಾರಾಮ : - ಓಹೋ ! ನೀನಾಗಲೆ ಹೇಗೋ ನನ್ನ ಗುಟ್ಟನ್ನು ಕಂಡುಹಿಡಿದಿದ್ದಿ.

ಶಾಂತಾದೇವಿ : -ಇಲ್ಲ. ಇಲ್ಲ; ಅದು ನನ್ನ ಬರೀ ಊಹೆ.

ಆತ್ಮಾರಾಮ : - ಮಹರ್ಷಿ ಸಮಾನರಾದವರ ಮಗಳು ನೀನು. ಬರೀ ಮಗಳಲ್ಲ; ಅವರಿಗೆ ತಕ್ಕ ಮಗಳು. ನಿನ್ನ ಮನಸ್ಸಿನಲ್ಲಿ ಸುಳ್ಳು ಕಲ್ಪನೆಯುಂಟಾದೀತೇ ?

ಶಾಂತಾದೇವಿ : - ಇದೇನಿದು ! ಇಷ್ಟು ಉಪಚಾರವನ್ನು ಹೇಳುತ್ತೀರಿ !

ಆತ್ಮಾರಾಮ : - ಉಪಚಾರವಲ್ಲ; ನಿಜಸ್ಥಿತಿ !

ಶಾಂತಾದೇವಿ : - ಹಾಗಾದರೆ ಸ್ವಾಮಿಗಳೇನೆಂದರು?

ಆತ್ಮಾರಾಮ : - ನಿನ್ನನ್ನು ಮದುವೆಮಾಡಿಕೋ ಎಂದರು.

ಶಾಂತಾದೇವಿ : - ಸರಿ, ಸರಿ; ಈಗ ನಿಮ್ಮ ಮಾತೆಲ್ಲ ಹಾಸ್ಯವೆಂದು ಸ್ಪಷ್ಟವಾಯಿತು.

ಆತ್ಮಾರಾಮ : - ಅದೇಕೆ ಹಾಸ್ಯ? ಸಂನ್ಯಾಸಕ್ಕೆ ತಕ್ಕ ಯೋಗ್ಯತೆ ಇಲ್ಲದವನಿಗೆ ಮದುವೆಯಾಗೆಂದು ಸ್ವಾಮಿಗಳು ಹೇಳಬಾರದೆ?

ಶಾಂತಾದೇವಿ :- ಮದುವೆಯಾಗೆಂದು ಹೇಳಬಹುದು. ಅದರಲ್ಲಿ ನನ್ನನ್ನೇ ಎಂದು ಅವರೇಕೆ ಹೇಳುತ್ತಾರೆ?

ಆತ್ಮಾರಾಮ : - ನಿನ್ನನ್ನೇ ಎಂದು ನಿನ್ನ ಹೆಸರು ಹಿಡಿದು ಅವರೇನೂ ಹೇಳಲಿಲ್ಲ. ಧಾರ್ಮಿಕ ಪ್ರವೃತ್ತಿಯುಳ್ಳವಳನ್ನು ಮದುವೆಯಾಗೆಂದರು. ಈಗಿನ ಚಪಲೆಯರಲ್ಲಿ ಧಾರ್ಮಿಕ ಪ್ರವೃತ್ತಿಯುಳ್ಳವರು ನಿನ್ನ ಹೊರತು ಯಾರಿದ್ದಾರೆ? ಆದ್ದರಿಂದ ಅವರು ನಿನ್ನನ್ನೇ ಮದುವೆಯಾಗೆಂದು ಹೇಳಿದರೆಂದು ನಾನು ತಿಳಿದುಕೊಂಡೆನು.

ಶಾಂತಾದೇವಿ : - ನಿಮ್ಮ ಮನಸ್ಸಿನಲ್ಲಿ ವೇದಾಂತದ ಕಲ್ಪನೆಗಳಿಗಿಂತಲೂ ಕಾವ್ಯದ ಕಲ್ಪನೆಗಳು ಬಲವಾಗಿ ಬೇರುಬಿಟ್ಟುಕೊಂಡಿರುವದೆಂದು ತೋರುತ್ತದೆ. ಆದ್ದರಿಂದಲೇ ಸ್ವಾಮಿಗಳು ನಿಮಗೆ ಹಾಗೆ ಹೇಳಿರಬಹುದು. ಹೋಗಲಿ ಬಿಡಿ. ನೀವು ನಿಮ್ಮ ಗುಟ್ಟನ್ನು ಬಿಟ್ಟುಕೊಡುವದಿಲ್ಲ.

ಆತ್ಮಾರಾಮ : - ಗುಟ್ಟಿದ್ದರಷ್ಟೆ ಬಿಟ್ಟುಕೊಡುವದು?

ಶಾಂತಾದೇವಿ : - ಹಾಗಾದರೆ ಮದುವೆಯಾದರೂ ಮೋಕ್ಷವನ್ನು ಪಡೆಯ ಬಹುದೋ ?

ಆತ್ಮಾರಾಮ : - ಮದುವೆಯಾದವರು, ಮದುವೆಯಾಗದವರು, ಆದ ಮದುವೆ ಯನ್ನೂ ತೊರೆದವರು ಯಾರೇ ಆಗಲಿ ಇಂದ್ರಿಯಗಳನ್ನೂ ಮನಸ್ಸನ್ನೂ ಪ್ರಾಪಂಚಿಕ

ಸುಖದ ಬೆನ್ನುಹತ್ತಿ ಮುಂದುಮುಂದಕ್ಕೆ ಓಡಿಹೋಗದಂತೆ ಬಿಗಿಹಿಡಿದು ತಮ್ಮ ತಮ್ಮ ಆತ್ಮಸ್ವರೂಪದಲ್ಲಿ ನೆಲೆಗೊಳಿಸಿದರೆ ಅಂಥವರಿಗೆಲ್ಲ ಮೋಕ್ಷವೆ.

ಶಾಂತಾದೇವಿ : - ಮನಸ್ಸನ್ನು ಆತ್ಮಸ್ವರೂಪದಲ್ಲಿ ನೆಲೆಗೊಳಿಸಬೇಕೆನ್ನುತ್ತೀರಲ್ಲ। ಮನಸ್ಸನ್ನು ವಿಷ್ಣುವಿನಲ್ಲಿಯೋ ಶಿವನಲ್ಲಿಯೋ ನೆಲೆಗೊಳಿಸಬೇಕಲ್ಲವೇ?

ಆತ್ಮಾರಾಮ : - ಮೊದಮೊದಲು, ವಿಷ್ಣುವಿನಲ್ಲಿಯೋ ಶಿವನಲ್ಲಿಯೋ, ನೆಲೆಗೊಳಿಸಿ ಮನಸ್ಸಿಗೆ ಕದಲದೆ ಒಂದು ಕಡೆ ನಿಲ್ಲುವ ಯೋಗ್ಯತೆಯನ್ನು ತಂದುಕೊಂಡು ಆಮೇಲೆ ಆತ್ಮ ಸ್ವರೂಪದಲ್ಲಿ ನೆಲೆಗೊಳಿಸಬೇಕು.

ಶಾಂತಾದೇವಿ : - ಆತ್ಮ ಸ್ವರೂಪವು ಶಿವವಿಷ್ಣುಗಳಿಗಿಂತ ಹೆಚ್ಚಿನದೆ ?

ಆತ್ಮಾರಾಮ : - ಸಂಶಯವೇಕೆ? ನಾವು ಕಲ್ಪನೆ ಮಾಡಿದರೆ ವಿಷ್ಣು; ನಾವು ಕಲ್ಪನೆ ಮಾಡಿದರೆ ಶಿವ. ಇಷ್ಟೇಕೆ ನಾವು ಕಲ್ಪನೆ ಮಾಡಿದರೇ ಬ್ರಹ್ಮಾಂಡ. ನಮ್ಮ ಜ್ಞಾನದ ಸಂಬಂಧವನ್ನು ಹೊಂದದೆ ಸ್ವತಂತ್ರವಾಗಿ ವಿಷ್ಣುವೂ ಇಲ್ಲ; ಶಿವನೂ ಇಲ್ಲ; ಜಗತ್ತೂ ಇಲ್ಲ.

ಶಾಂತಾದೇವಿ : - ನಾವು ತಿಳಿಯದೆ ಇರುವ ದೇವತೆಗಳೂ ಜಗತ್ತು ಇರಬಹುದಷ್ಟೇ?

ಆತ್ಮಾರಾಮ : - ನಮಗೆ ತಿಳಿಯದ ದೇವತೆಗಳೆಂಬ ಮುಂತಾದ ರೂಪದಲ್ಲಿ ಅವೂ ನಮ್ಮ ಜ್ಞಾನಕ್ಕೆ ಸಂಬಂಧಪಟ್ಟೇ ಇರುವವು.

ಶಾಂತಾದೇವಿ : - ನಮ್ಮ ಆತ್ಮನು ಅಷ್ಟನ್ನೆಲ್ಲ ಒಳಕೊಂಡಿರುವದೆಂದು ನೀವು ಹೇಳುವ ಮಾತು ಶಾಸ್ತ್ರಕ್ಕೆ ಸಮ್ಮತವೇ?

ಆತ್ಮಾರಾಮ : - ಸಮ್ಮತವಾದ್ದರಿಂದಲೇ ಅದು 'ನೀನು ಬ್ರಹ್ಮ' ಎಂದು ಹೇಳುತ್ತಿರುವದು. ಹಾಗಲ್ಲದೆ ನಾವು ನಿಜವಾಗಿಯೂ ಕ್ಷುದ್ರಜೀವಿಗಳೇ ಆಗಿದ್ದ ಪಕ್ಷದಲ್ಲಿ ಒಂದು ದನಕಾಯುವವರಿಗೂ ಗೊತ್ತಿರುವದರಿಂದ ಅದನ್ನು ಹೇಳಿ ಕೊಡುವದಕ್ಕೆ ಶಾಸ್ತ್ರವು ಬೇಕಿಲ್ಲ. ಯಾರಿಗೂ ತಿಳಿಯದ್ದನ್ನು ಹೇಳಿದ್ದರಲ್ಲವೇ ಶಾಸ್ತ್ರ?

ಶಾಂತಾದೇವಿ :- ನಾವು ಬ್ರಹ್ಮರಾದರೆ ನಮ್ಮಲ್ಲಿ ಜಗತ್ತಿನ ಸೃಷ್ಟಿಸ್ಥಿತಿಲಯಗಳು ಅನುಭವವಿರಬೇಕಲ್ಲ!

ಆತ್ಮಾರಾಮ : - ಇದ್ದೇ ಇದೆ. ಗಾಢನಿದ್ರೆಯಲ್ಲಿ ಜಗತ್ತೆಲ್ಲ ನಮ್ಮಲ್ಲಿ ಲಯವಾಗಿರುವದು. ಎಚ್ಚರವಾಗುತ್ತಲೇ ಅದು ಹೊರಬೀಳುವದು. ನಾವು ಹೊರ ಮುಖವಾದರೆ ಸೃಷ್ಟಿ; ಒಳಮುಖವಾದರೆ ಲಯ.

ಶಾಂತಾದೇವಿ : - ಈಗ ಈ ಮಾತನ್ನು ಕೇಳಿ ನಿಜವಾಗಿ ನನಗೆ ಗಾಬರಿಯಾಗುತ್ತದೆ.

ಆತ್ಮಾರಾಮ : - ಆ ಗಾಬರಿಯನ್ನು ಎಚ್ಚರಗೊಂಡವನು ಕನಸನ್ನು ನೆನೆಸಿಕೊಂಡಾಗ ಆಗುವ ಗಾಬರಿ.

ಶಾಂತಾದೇವಿ : - ನಿಜವಾಗಿ, ಈ ವಿಷಯವನ್ನು ಚೆನ್ನಾಗಿ ತಿಳಿದುಕೊಳ್ಳಬೇಕು.

ಭಕ್ತ : - (ಪ್ರವೇಶಿಸಿ) ಆತ್ಮಾರಾಮ, ಮಾರುತಿಯ ಗುಡಿಯಲ್ಲಿ ಭಜನೆಯಾರಂಭ ವಾಗಿದೆ. ಪ್ರತಿದಿನವೂ ಮೊದಲು ಬರುತ್ತಿದ್ದ ನೀನುಮದುವೆಯಾದ ಮರು ದಿನವೇ ಕೊನೆಯವನಾಗಬೇಕೆ? ಮದುವೆಯಾದವರಿಗೂ ಮೋಕ್ಷ ಉಂಟೆಂದು ನಿಜಾನಂದರು ಹೇಳಿದರೆನ್ನುತ್ತೀಯಲ್ಲ ! ಆ ಮಾತು ನಿಜವೆ?

ಆತ್ಮಾರಾಮ :- ಗೆಳೆಯನೆ, ನಿನ್ನ ಹಾಸ್ಯವು ಸಾಕು. ಇಲ್ಲಿಯೂ ಸ್ವಲ್ಪ ಆತ್ಮ ವಿಚಾರವು ಹೊರಟಿದ್ದು ನನ್ನ ಮನಸ್ಸು ಅದರಲ್ಲಿ ಮುಳುಗಿದ್ದದ್ದರಿಂದ ಭಜನೆಯ ವಿಷಯವು ನೆನಪಿಗೆ ಬರಲಿಲ್ಲ. ಇಗೊ ಹೊರಟೆ. (ಪ್ರಿಯೆಯ ಕಡೆ ತಿರುಗಿ) ಪ್ರಿಯೆ, ಭಜನೆಯನ್ನು ಮುಗಿಸಿಕೊಂಡು ಬರುತ್ತೇನೆ. (ಎಂದು ಹೋಗುವನು)

ಶಾಂತಾದೇವಿ : - ನೀವು ಬರುವ ಹೊತ್ತಿಗೆ ಉಪಹಾರವನ್ನು ಸಿದ್ಧಗೊಳಿಸುತ್ತೇನೆ.

(ಎಂದು ಹೋಗುವಳು)

(ಮಲಗುವ ಮನೆಯಲ್ಲಿ ಮಂಚದ ಮೇಲೆ ಆತ್ಮಾರಾಮನೂ ಶಾಂತಾದೇವಿಯೂ ಕುಳಿತಿರುವರು)

ಶಾಂತಾದೇವಿ : - ಇದೇನು, ಭಜನೆ ಈ ದಿನ ಬಹಳ ಹೊತ್ತಾಯಿತು?

ಆತ್ಮಾರಾಮ : -ಭಜನೆಯ ಕಾಲಕ್ಕೆ ಸರಿಯಾಗಿ ಮುಗಿಯಿತು. ಆಮೇಲೆ ಒಬ್ಬಿಬ್ಬರು ಗೆಳೆಯರು ಆತ್ಮವಿಚಾರವನ್ನು ತೆಗೆದರು. ಅದು ನನಗೆ ಹೊತ್ತನ್ನೂ ತಿಳಿಯಗೊಡಲಿಲ್ಲ.

ಶಾಂತಾದೇವಿ : - ಭಜನೆಯಮಂಡಳಿಯವರೂ ಆತ್ಮವಿಚಾರವನ್ನು ಮಾಡುವರೇನು?

ಆತ್ಮಾರಾಮ : - ಎಲ್ಲರೂ ಮಾಡುವದಿಲ್ಲ. ಮಾಡುವದುತ್ತಮ. ವಿಚಾರವನ್ನು ಮಾಡುವದಕ್ಕೆ ಮನಸ್ಸನ್ನು ಸಿದ್ಧಗೊಳಿಸುವದೇ ಭಜನೆಯ ಕೆಲಸ. ಆದ್ದರಿಂದ ಭಜನೆಯಿಂದ ಮನಸ್ಸು ಶುದ್ಧವಾಗುತ್ತ ಬಂದ ಹಾಗೆಲ್ಲ ವಿಚಾರವನ್ನು ಬೆಳೆಸುತ್ತ ಹೋಗಬೇಕು; ವಿಚಾರವನ್ನು ಮಾಡುವವನ ಯೋಗ್ಯತೆಯು ಹೆಚ್ಚಿನದು. ಆದ್ದರಿಂದ ಎಲ್ಲರೂ ಅದರಲ್ಲಿ ತೊಡಗುವದಿಲ್ಲ.

**ಶಾಂತಾದೇವಿ** : - ಗಂಡಸರಿಗೇ ಎಲ್ಲರಿಗೂ ಆಗದ ಮೇಲೆ ಇನ್ನು ನನ್ನಂಥವಳ ಪಾಡೇನು?

**ಆತ್ಮಾರಾಮ** : - ಅದಕ್ಕೆ ಗಂಡಸು ಹೆಂಗಸೆಂಬ ಭೇದವಿಲ್ಲ. ಚಿತ್ತಶುದ್ಧಿಯಾದವರು ಯಾರಾದರೂ ಮಾಡಬಹುದು.

**ಶಾಂತಾದೇವಿ** :- ಚಿತ್ತದಲ್ಲಿರುವ ಅಶುದ್ಧಿಯೆಂಬುದು ಯಾವದು?

**ಆತ್ಮಾರಾಮ** : - ನನಗೆ ಸುಖವನ್ನು ಕೊಡೆಂದು ಹೊರಗಣ ವಸ್ತುಗಳ ಮುಂದೆ ಬಾಯಿ ನೀರು ಸುರಿಸುವದೇ ಮನಸ್ಸಿನ ಅಶುದ್ಧಿ. ಇದನ್ನು ನಿನಗೆ ತಿಳಿಯುವಂತೆ ಹೇಳಬೇಕಾದರೆ ನನಗೆ ಸುಖವನ್ನು ಕೊಡೆಂದು ನೀನು ನನ್ನ ಮುಂದೆ ಬಾಯಿ ನೀರು ಸುರಿಸುವದೂ ನಾನು ನಿನ್ನ ಮುಂದೆ ಬಾಯಿ ನೀರು ಸುರಿಸುವದೂ ಚಿತ್ತದ ಅಶುದ್ಧಿಯೆ.

**ಶಾಂತಾದೇವಿ** : - ಈ ಹಾಸ್ಯದ ವಿವರಣೆ ನನಗೆ ಬೇಡ. ನಾನು ಈಗ ನಿಜವನ್ನು ತಿಳಿದುಕೊಳ್ಳಬೇಕೆಂದು ವಿಚಾರಕ್ಕೆ ಕೂತಿದ್ದೇನೆ. ಹೆಂಗಸರಿಗೆ ಇಂಥ ವಿಷಯವನ್ನು ಹೇಳಬಹುದಷ್ಟೆ?

**ಆತ್ಮಾರಾಮ** : - ಪ್ರಿಯೆ, ಹೆಂಗಸರೇ ನಿಜವಾದ ಅಧಿಕಾರಿಗಳೆಂದರೂ ಒಪ್ಪುತ್ತದೆ. ಶಿವನು ತನ್ನ ಪ್ರಿಯೆಯಾದ ಪಾರ್ವತಿಗೇ ಹೇಳಿದ್ದಾನೆ. ನಮ್ಮ ಕನ್ನಡ ವೇದಾಂತ ಗ್ರಂಥಗಳಲ್ಲಿಯೂ ಎಷ್ಟೋ ಕವಿಗಳು ವೇದಾಂತವನ್ನು ಗಂಡನು ಹೆಂಡತಿಗೆ ಹೇಳಿದಂತೆ ಕಥೆಯನ್ನು ಕಟ್ಟಿ ಅದರೊಳಗೆ ತುಂಬಿದ್ದಾರೆ.

**ಶಾಂತಾದೇವಿ** : - ಹೆಂಗಸರೇ, ನಿಜವಾದ ಅಧಿಕಾರಿಗಳೆನ್ನುವದರಿಂದ ನೀವಿನ್ನೂ ಹಾಸ್ಯದ ಸರಣಿಯನ್ನು ಬಿಟ್ಟಿಲ್ಲವೆಂದು ತೋರುತ್ತದೆ.

**ಆತ್ಮಾರಾಮ** : -ಅದು ಹಾಸ್ಯವಲ್ಲ; ನಿಜಸ್ಥಿತಿಯು, ಗಂಡಸರು ಕೆಲಸಕ್ಕೆ ಬಾರದ ಅನೇಕ ವಿಷಯಗಳನ್ನು ಓದಿಯೋ ತಿಳಿದೋ ಅನೇಕ ಸಂಶಯಗಳನ್ನು ಹೊಂದುತ್ತಾರೆ. ಗುರುವಿನ ಮಾತಿನಲ್ಲಿ ಶ್ರದ್ಧೆ ಕಡಿಮೆ. ಹೆಂಗಸರಿಗೆ ಆ ಸಂಶಯಗಳು ಬರುವದಿಲ್ಲ. ಅವರು ಗುರುವಿನ ಮಾತನ್ನು ವೇದವಾಕ್ಯವೆನ್ನುತ್ತಾರೆ. ಆದ್ದರಿಂದ ಅವರನ್ನು ಹೆಚ್ಚಿನ ಅಧಿಕಾರಿಗಳೆಂದೆನು.

**ಶಾಂತಾದೇವಿ** : - ಹಾಗಾದರೆ ಹೆಂಗಸರಿಗೆಲ್ಲ ಬೇಗ ಮುಕ್ತಿಯಾಗಬೇಕು. ಶಾಸ್ತ್ರವು ಗಂಡಸರನ್ನೇ ಹೆಚ್ಚಿನವರೆಂದು ಹೇಳುತ್ತಂತಲ್ಲ.

**ಆತ್ಮಾರಾಮ** :- ನಿಜ, ಹೆಂಗಸರಿಗೆ ವಿಚಾರಕಡಿಮೆ. ವಿಚಾರದ ದೃಷ್ಟಿಯಿಂದ ಶಾಸ್ತ್ರವು ಗಂಡಸರ ಜನ್ಮವನ್ನು ಹೆಚ್ಚಿನದೆಂದು ಹೇಳುತ್ತದೆ. ಬರೀ ಶ್ರದ್ಧೆಯ ದೃಷ್ಟಿಯಿಂದ ಹೆಂಗಸರು ಹೆಚ್ಚಿನವರು.

**ಶಾಂತಾದೇವಿ** : - ಅದು ಹೇಗಾದರೂ ಇರಲಿ. ಹೆಂಗಸರಿಗೂ ಉಪದೇಶ ಮಾಡಬಹುದಷ್ಟೆ?

**ಆತ್ಮಾರಾಮ** :- ಹೆಂಗಸರಿಗೂ ಉಪದೇಶಮಾಡಬಹುದಿಷ್ಟೇ. ಅಲ್ಲ. ಹೆಂಗಸರೇ ಗಂಡಸಿಗೂ ಉಪದೇಶಮಾಡಬಹುದು.

**ಶಾಂತಾದೇವಿ** : - ಇನ್ನು ನಾನು ಮಾತಾಡುವದಿಲ್ಲ. ನೀವು ಎಲ್ಲವನ್ನೂ ಹಾಸ್ಯಕ್ಕೇ ತಿರುಗಿಸುತ್ತೀರಿ.

**ಆತ್ಮಾರಾಮ** : - ಪ್ರಿಯೆ, ಮುನಿಸಿಕೊಳ್ಳಬೇಡ. ನಿನಗೆ ವಿಚಾರವು ಸಾಲದ್ದರಿಂದ ತತ್ತ್ವಾರ್ಥವಾದ ನನ್ನ ಮಾತು ನಿನಗೆ ಹಾಸ್ಯವಾಗಿ ತೋರುತ್ತದೆ.

**ಶಾಂತಾದೇವಿ** : - ಹಾಗಾದರೆ ಹೆಂಗಸರೆಲ್ಲಿಯಾದರೂ ಗಂಡಸರಿಗೆ ಉಪದೇಶ ಮಾಡಿದ್ದುಂಟೆ?

**ಆತ್ಮಾರಾಮ** : - ಇಲ್ಲದೆ ಏನು ! ಯೋಗವಾಶಿಷ್ಠದಲ್ಲಿ ಚೂಡಾಲೆಯು ತನ್ನ ಗಂಡನಾದ ಶಿಖಿಧ್ವಜನಿಗೆ ಉಪದೇಶಮಾಡಲಿಲ್ಲವೇ?

**ಶಾಂತಾದೇವಿ** : - ಏನೋ! ನನಗೆ ದಿಕ್ಕುತೋಚುವುದೇ ಇಲ್ಲ. ಇರಲಿ. ಮನಸ್ಸಿನ ಹರಿದಾಟವು ತಪ್ಪುವದು ಹೇಗೆ?

**ಆತ್ಮಾರಾಮ** : - ಹೊರಗಣ ವಸ್ತುಗಳೆಲ್ಲ ದುಃಖವನ್ನುಂಟುಮಾಡುವವುಗಳೆಂದು ಬುದ್ಧಿಯನ್ನು ಹೇಳಿ ಮನಸ್ಸಿಗೆ ವೈರಾಗ್ಯವನ್ನು ಮೈಗೂಡಿಸಬೇಕು.

**ಶಾಂತಾದೇವಿ** :- ವೈರಾಗ್ಯವೆಂದಕೂಡಲೆ ನನಗೆ ನೆನಪಾಯಿತು. ನೋಡಿ, ನನ್ನ ತಮ್ಮನು ಈಗಾಗಲೇ ವೈರಾಗ್ಯದಿಂದ ಮೊದಲು ಒಪ್ಪತ್ತೂಟವನ್ನು ಬಿಟ್ಟನು. ಆಮೇಲೆ ಒಳ್ಳೆ ಬಟ್ಟೆಯನ್ನು ಹಾಕಿಕೊಳ್ಳುವುದನ್ನು ಬಿಟ್ಟನು. ಸಿನಿಮಾನಾಟಕಗಳನ್ನು ತೊರೆದನು.

ಅವನು ಒಳ್ಳೆಯ ಹಾಡುಗಾರ. ಆದರೂ ಈಚೀಚೆಗೂ ಸಂಗೀತಕ್ಕೆ ಹೋಗುವದನ್ನೂ ಬಿಟ್ಟಿದ್ದಾನಂತೆ. ಅವನಿನ್ನೇನು ಬೇಗ ವಿರಕ್ತನಾಗುತ್ತಾನೆಂದು ತೋರುತ್ತದೆ.

**ಆತ್ಮಾರಾಮ :** - ನೀನು ಯೋಚನೆಮಾಡಬೇಡ. ಒಂದೊಂದಾಗಿ ಬಿಡುತ್ತಾ ಬಂದವನು ಸಂನ್ಯಾಸಿಯಾಗುವದಿಲ್ಲ. ಬಿಡಬೇಕಾದ ವಿಷಯಗಳಿಗೆ ಜಗತ್ತಿನಲ್ಲಿ ಲೆಕ್ಕವೇ ಇಲ್ಲ. ಆದ್ದರಿಂದ ಅವನಿಗೆ ಪೂರ್ಣವಿರಕ್ತಿಯುಂಟಾಗುವುದಿಲ್ಲ.

**ಶಾಂತಾದೇವಿ :** - ಹಾಗಾದರೆ ಪೂರ್ಣ ವೈರಾಗ್ಯವು ಹೇಗೆ ಉಂಟಾಗುತ್ತದೆ?

**ಆತ್ಮಾರಾಮ :** - ಇಗೋ ಹೀಗೆ (ಎಂದು ಹೋಗುವನು)

**ಶಾಂತಾದೇವಿ :** - (ಸ್ವಲ್ಪ ಹೊತ್ತುನೋಡಿ) ಏನಿದು! ಪ್ರಾಣಕಾಂತನು ಏನೋ ಒಂದು ಅವಸರ ಕೆಲಸಕ್ಕೆ ಹೋಗುವಂತೆ ಎದ್ದುಹೋದನು. ಇಷ್ಟು ಹೊತ್ತಾದರೂ ಹಿಂದಿರುಗಲಿಲ್ಲ. (ಎಂದು ಸುತ್ತಮುತ್ತ ಹುಡುಕಿ) ನಾನು ಅವನೊಡನೆ ವೈರಾಗ್ಯದ ಮಾತನ್ನು ಎತ್ತಿದ್ದೇ ಅಪರಾಧವಾಗಿ ತೋರುತ್ತದೆ. ಈ ನನ್ನ ಪ್ರಿಯನು ನನ್ನೊಡನೆ ಕೇವಲ ಪ್ರಾಪಂಚಿಕನಂತೆ ಸರಸಿಯಾಗಿಕಂಡರೂ ಮನಸ್ಸಿನಲ್ಲಿ ಒಳ್ಳೆ ವಿರಕ್ತನು. ಪೂರ್ಣ ವಿರಕ್ತಿಯು ಹೇಗುಂಟಾಗುವದೆಂದು ನಾನು ಕೇಳಿದ್ದಕ್ಕೆ ಇಗೋ ಹೀಗೆಂದು ಅದನ್ನು ನನಗೆ ಉಪದೇಶಿಸಿದನೆಂದು ತೋರುತ್ತದೆ. ಇರಲಿ. ನನಗೆ ಅವನ ವಾಕ್ಯವೇ ವೇದವಾಕ್ಯ. ನಾನೂ ಹಾಗೆ ವೈರಾಗ್ಯವನ್ನು ಹೊಂದಿ ಇನ್ನು ತಂದೆ ತಾಯಿಗಳ ಕಡೆಗೂ ಹೋಗದೆ ಪತಿಯ ಮಾರ್ಗವನ್ನೇ ಹಿಡಿದು ನಾನೂ ನಿಜಾನಂದರನ್ನೇ ಆಶ್ರಯಿಸಿ ನನ್ನ ಜನ್ಮವನ್ನು ಸಾರ್ಥಕಮಾಡಿಕೊಳ್ಳುವೆನು.

(ಎಂದು ಹೋಗುವಳು)

## (ಶಾಂತೆಯ ಇಷ್ಟಸಿದ್ಧಿ)

(ಮಠದಲ್ಲಿ ನಿಜಾನಂದರು ಇಬ್ಬರು ಶಿಷ್ಯರಿಗೆ ಉಪದೇಶವನ್ನು ಮಾಡುತ್ತಿರುವರು)

ನಿಜಾನಂದರು : - ವಿಠ್ಠಲಾ, ನೀನು ಓದಿದ ವೇದಾಂತ ಗ್ರಂಥದ ಸಾರಾಂಶವೇನು?

ವಿಠ್ಠಲ : - ಆತ್ಮ ಒಂದೇ ನಿಜ; ಜಗತ್ತೆಲ್ಲ ಸುಳ್ಳು.

ನಿಜಾನಂದರು : - ವೆಂಕಟೇಶ, ಜಗತ್ತೆಲ್ಲ ಸುಳ್ಳೆಂಬುದು ಹೇಗೆ?

**ವೆಂಕಟೇಶ :** - ನಮಗೆ ಎಚ್ಚರ. ಕನಸು, ನಿದ್ರೆ - ಎಂಬ ಮೂರು ಅನುಭವಗಳಿವೆ. ಈ ಜಗತ್ತು ಎಚ್ಚರವೆಂಬ ಒಂದವಸ್ಥೆಯಲ್ಲಿರುವದೇ ಹೊರತು ಉಳಿದರೆಡರಲ್ಲಿಲ್ಲ . ಜಗತ್ತು

ನಿಜವಾಗಿ ಇರುವದಾದರೆ ಎಲ್ಲ ಅವಸ್ಥೆಗಳಲ್ಲಿಯೂ ಇರಬೇಕಾಗಿತ್ತು. ಹಾಗಿಲ್ಲವಾದ್ದರಿಂದ ಜಗತ್ತು ಸುಳ್ಳು.

**ರಂಗನಾಥ :** - (ಪ್ರವೇಶಿಸಿ ಎರಗಿ ಕುಳಿತುಕೊಳ್ಳುವನು)

**ನಿಜಾನಂದರು :** - (ವಿಠ್ಠಲವನ್ನು ಕುರಿತು) ಆತ್ಮವು ಯಾವಾಗಲೂ ಇರುವದೆಂದು ತಿಳಿಯುವದು ಹೇಗೆ?

**ವಿಠ್ಠಲ :** - ಆತ್ಮವು ಜ್ಞಾನಸ್ವರೂಪವು. ಅದೇ ನಮಗೆ ಎಚ್ಚರದಲ್ಲಿಯೂ ಕನಸಿನಲ್ಲಿ ಯೂ ಅನೇಕವಾದ ವಿಷಯಗಳನ್ನು ಬೆಳಗುತ್ತಲಿರುವದು. ಅದು ಗಾಢನಿದ್ರೆಯಲ್ಲಿ ಕೂಡ ಜಾಗರೂಕವಾಗಿದ್ದೇ ಇರುವದು. ಗಾಢನಿದ್ರೆಯಲ್ಲಿ ವಿಷಯಗಳೇ ಇಲ್ಲದ್ದರಿಂದ ಅದು ಏನನ್ನೂ ಬೆಳಗುವದಿಲ್ಲ.

**ರಂಗನಾಥ :** - ವಿಷಯಗಳು ಗಾಢನಿದ್ರೆಯವನಿಗೆ ಕಾಣದಿದ್ದರೂ ಆಗ ಹತ್ತಿರ ದಲ್ಲಿ ಎಚ್ಚರವಾಗಿದ್ದು ನೋಡುವವನಿಗೆ ಕಂಡೇ ಕಾಣುವದು. ಆದ್ದರಿಂದ ಗಾಢ ನಿದ್ರೆಯಲ್ಲಿ ವಿಷಯಗಳೇ ಇಲ್ಲವೆಂದು ಹೇಗೆ ಹೇಳುತ್ತಿ?

**ವಿಠ್ಠಲ :** - ರಂಗನಾಥ, ನೀನು ನಡುನಡುವೆ ಮಾತ್ರ ಬಂದು ಶ್ರವಣ ಮಾಡುವವನಾದ್ದರಿಂದ ಇಂಥ ಸಂಶಯಗಳು ಬರುತ್ತವೆ. ಈ ಜಗತ್ತು ಎಚ್ಚರವೆಂಬ ಅವಸ್ಥೆಗೆ ಕಟ್ಟುಬಿದ್ದದ್ದು. ಎಚ್ಚರದಲ್ಲಿರುವವರಿಗೆಲ್ಲ ಇದು ಕಂಡೇ ಕಾಣುವದು. ಗಾಢ ನಿದ್ರೆಯೆಂಬ ಅವಸ್ಥೆಗೆ ಹೋದವರಿಗೆ ಯಾರಿಗಾದರೂ ಜಗತ್ತು ಕಂಡದ್ದುಂಟೋ?

**ರಂಗನಾಥ :** - ಇಲ್ಲ.

**ವಿಠ್ಠಲ :**- ಆದ್ದರಿಂದಲೆ ನಾನು ಗಾಢನಿದ್ರೆಯಲ್ಲಿ ವಿಷಯಗಳಿಲ್ಲವೆಂದು ಹೇಳಿದ್ದು.

**ನಿಜಾನಂದರು :** - (ವಿಠ್ಠಲನನ್ನು ಕುರಿತು) ಗಾಢನಿದ್ರೆಯಲ್ಲಿ ಯಾವ ವಿಷಯವನ್ನೂ ಬೆಳಗದೆ ಹೋದ ಮೇಲೆ ಜ್ಞಾನವು ಆಗ ಇತ್ತೆಂಬುದಕ್ಕೆ ಗುರ್ತೇನು?

**ವಿಠ್ಠಲ :** - ಆಗ ಯಾವ ವಿಷಯವೂ ಇಲ್ಲವೆಂಬರ್ಥವನ್ನು ಬೆಳಗಿದ್ದೇ ಗುರ್ತು. ಇಷ್ಟು ಹೊತ್ತು ನಾನು ಏನನ್ನೂ ಅರಿಯದೆ ಇದ್ದೆನೆಂದು ನಮಗೆ ನೆನಪಾಗುವದಷ್ಟೆ. ಇದು ಆಗ ನಮಗೆ ಈ ಅನುಭವವಿತ್ತೆಂಬುದನ್ನು ತೋರಿಸುತ್ತದೆ.

**ನಿಜಾನಂದರು :** - ಸರಿ. ಚೆನ್ನಾಗಿ ತಿಳಿದುಕೊಂಡಿದ್ದಿ (ಎಂದು ರಂಗನಾಥನ ಕಡೆ ತಿರುಗಿ) ರಂಗನಾಥ, ಇಂಥ ವಿಚಾರಗಳನ್ನು ಮೊದಲಿಂದಲೂ ತಪ್ಪದೆ ಕೇಳಬೇಕು. ಕೆಲವು ದಿನಗಳಿಂದ ನೀನು ಇಲ್ಲಿಗೇಕೆ ಬರಲಿಲ್ಲ?

ರಂಗನಾಥ : - ನಮ್ಮ ಮನೆಯವರೊಡನೆ ನಾನು ಉತ್ತರದೇಶದ ಯಾತ್ರೆಗೆ ಹೋಗಿದ್ದೆನು.

ನಿಜಾನಂದರು : - ಏನು ವಿಶೇಷವನ್ನು ತಿಳಿದುಕೊಂಡು ಬಂದೆ?

ರಂಗನಾಥ : - ಆ ಯಾತ್ರೆಯು ತಿಳಿದುಕೊಂಡು ಬರುವದಕ್ಕೆ ಹೋದ ಜಾತಿ ಯದಲ್ಲ. ಹೋದ ಹೋದ ಕಡೆಗಳಲ್ಲೆಲ್ಲ ತಮ್ಮಂಥ ಸಾಧುಗಳನ್ನು ಹುಡುಕಿ ಮಾತುಕತೆಗಳನ್ನಾಡಿದರೆ ಏನಾದರೂ ಹೆಚ್ಚಿನ ವಿಷಯ ತಿಳಿದೀತು. ನಮ್ಮವರು ಹೊರಟದ್ದು ಬೇರೆ ಬೇರೆ ಸ್ಥಳಗಳನ್ನು ನೋಡುವ ಕುತೂಹಲದಿಂದ. ಅದು ನಡೆಯಿತು. ಆದರೂ ತಮ್ಮ ಮುಂದೆ ಹೇಳಬೇಕಾದ ಒಂದು ವಿಶೇಷವಿದೆ.

ನಿಜಾನಂದರು : - ಏನು! ಏನು !! ಅಗತ್ಯವಾಗಿ ಹೇಳು.

ರಂಗನಾಥ : - ಪಂಚವಟಿಗೆ ಹೋಗಿದ್ದಾಗ ಅಲ್ಲೊಬ್ಬರು ಹೊಸ ಸಾಧುಗಳು ಬಂದಿರುವರೆಂದು ಸುದ್ದಿಯನ್ನು ಕೇಳಿ ಅವರ ದರ್ಶನಕ್ಕೆ ಹೋದೆನು. ಅವರು ಯಾವಾಗಲೂ ಧ್ಯಾನದಲ್ಲಿ ಮೈಮರೆತಿರುತ್ತಾರೆ. ಇನ್ನೂ ಚಿಕ್ಕ ವಯಸ್ಸು. ಯಾವಾಗಲೋ ಅವರು ಹೊರಮುಖರಾದಾಗ ಒಬ್ಬರೊಡನೆ ತಾವು ನಿಜಾನಂದರ ಶಿಷ್ಯರೆಂದು ಹೇಳಿದರಂತೆ. ಆದ್ದರಿಂದಲೇ ನಾನು ಅವರನ್ನು ನೋಡುವದಕ್ಕೆ ಹೋದೆನು. ಅವರು ಮೌನದಿಂದಿದ್ದದ್ದರಿಂದ ಮಾತಾಡಲಾಗಲಿಲ್ಲ.

ಶಾಂತಾ : - (ಪ್ರವೇಶಿಸಿ ಅಡ್ಡಬಿದ್ದು) ಮಹಾಸ್ವಾಮಿ. ದೀನಳಾದ ನನ್ನನ್ನು ಶಿಷ್ಯಳಾಗಿ ಭಾವಿಸಿ ಉದ್ಧಾರಮಾಡಬೇಕು.

ನಿಜಾನಂದರು :- ಸುಮಂಗಲಿಯಾದ ನೀನು ಪತಿಯನ್ನು ಬಿಟ್ಟು ಏಕೆ ಬಂದೆಯಮ್ಮ !

ಶಾಂತಾ :- ಮಹಾಸ್ವಾಮಿ, ನನ್ನ ಪತಿಯು ಕೆಲವು ದಿನಗಳ ಹಿಂದೆ ತಮ್ಮ ಬಳಿಗೆ ಬಂದು ತಮ್ಮ ಶಿಷ್ಯರಾಗಿದ್ದರಂತೆ. ಈಗ ಅವರು ಒಮ್ಮೆಗೇ ಪೂರ್ಣವಿರಕ್ತರಾಗಿ ಮನೆಯನ್ನು ಬಿಟ್ಟು ಎಲ್ಲಿಗೋ ಹೋಗಿಬಿಟ್ಟಿದ್ದಾರೆ. ಆದ್ದರಿಂದ ನಾನು ತಮಗೆ ಶರಣುಬಂದಿದ್ದೇನೆ.

ರಂಗನಾಥ : - ಗುರುಗಳವರೆ, ನಾನು ಹೇಳಿದ ಮಾತಿಗೂ ಇದಕ್ಕೂ ಏನಾದರೂ ಸಂಬಂಧವಿರಬಹುದೆ?

ನಿಜಾನಂದರು : - ಅದನ್ನು ಈಗ ಹೇಗೆ ಹೇಳಲಾದೀತು? (ಶಾಂತೆಯ ಕಡೆಗೆ ತಿರುಗಿ) ಅಮ್ಮಾ, ನಿನ್ನ ಹೆಸರೇನು?

ಶಾಂತಾ : - ಶಾಂತಾ

**ನಿಜಾನಂದರು** :- ನಿನ್ನ ಹೆಸರು ನಿನಗೆ ಅನ್ವರ್ಥವಾಗಲಿ. ನಿನ್ನ ತಾಯಿ ತಂದೆಗಳೆಲ್ಲಿರುವರು?

**ಶಾಂತಾ** : - ಊರಲ್ಲಿ ತಾಯಿ ತಂದೆಗಳಿರುವರು. ಆದರೆ ನಾನು ಪತಿಯ ಮನೆಯಲ್ಲಿಯೇ ಇದ್ದು ಜೀವನವನ್ನು ಸಾರ್ಥಕಮಾಡಿಕೊಳ್ಳಬೇಕೆನ್ನುತ್ತೇನೆ. ಬರೀ ಹೊಟ್ಟೆಬಟ್ಟೆಗಳ ಯೋಚನೆ ಇದ್ದ ಪಕ್ಷದಲ್ಲಿ ನಾನು ತಾಯಿ ತಂದೆಗಳ ಬಳಿಗೇ ಹೋಗುತ್ತಿದ್ದೆನು. ನನಗೆ ಆತ್ಮೋನ್ನತಿಯ ಹಂಬಲು ಹತ್ತಿರುವದರಿಂದ ಪತಿಯ ಬಳಿಯಲ್ಲಿದ್ದೇ ನಾನು ಜನ್ಮವನ್ನು ನೀಗಬೇಕೆಂದಿದ್ದೇನೆ. ಪತಿಯು ಸಮೀಪ್ಯ ದಲ್ಲಿಲ್ಲದಿರುವದರಿಂದ ಪತಿಯ ಗುರುಗಳಾದ ತಾವೇ ನನಗೆ ರಕ್ಷಕರೆಂದು ಭಾವಿಸಿದ್ದೇನೆ.

**ವಿಠ್ಠಲ** : - ಈಕೆಯ ಮನೋಭಾವವು ಬಹು ಉಚ್ಚತರವಾಗಿದೆ.

**ವೆಂಕಟೇಶ** : - ಈಕೆಯ ವಿನಯವು ಅನುಕರಣೀಯವಾಗಿದೆ.

**ನಿಜಾನಂದರು** : -ಆಗಲಮ್ಮ. ನಮ್ಮ ಆಶ್ರಮದಲ್ಲಿ ಜಪತಪಗಳನ್ನು ಮಾಡಿಕೊಂಡು ಸುಖವಾಗಿರು. ದೇವರು ನಿನಗೆ ಸರ್ವಶ್ರೇಯಸ್ಸನ್ನೂ ಮಾಡುವನು. ನಮ್ಮ ಆಶ್ರಮದಲ್ಲಿ ತಪಸ್ವಿನಿಯಾಗಿರುವವರಲ್ಲಿ ನೀನೊಬ್ಬಳಾಗಿರು.

**ದೀನದಾಸ** : - (ಪ್ರವೇಶಿಸಿ ನಮಸ್ಕರಿಸುವನು)

**ನಿಜಾನಂದರು** : - ಓಹೋ ! ದೀನದಾಸ, ನಿನಗೆ ದೇವರು ಒಳ್ಳೆಯದನ್ನು ಮಾಡಲಿ. ಏನುವಿಶೇಷ?

**ದೀನದಾಸ** : - ಮಹಾಸ್ವಾಮಿ, ನಾಳೆ ಬರುವ ಉತ್ತರಾಯಣ ಪರ್ವಕಾಲದಲ್ಲಿ ಪಂಚವಟಿಯಲ್ಲಿ ಸಾಧುಗಳೆಲ್ಲ ಸಭೆಗೂಡಿ ಈ ಕಾಲದಲ್ಲಿ ಧರ್ಮಸ್ಥಾಪನೆಗೇನು ಮಾಡಬೇಕೆಂಬುದನ್ನು ನಿರ್ಣಯಿಸಬೇಕಾಗಿರುವದು. ಅದಕ್ಕೆ ತಾವು ಅಧ್ಯಕ್ಷರಾಗಿ ದಯಮಾಡಬೇಕೆಂದು ಪ್ರಾರ್ಥನೆ.

**ನಿಜಾನಂದರು** : - (ಶಿಷ್ಯರನ್ನು ಕುರಿತು) ಧರ್ಮೋದ್ಧಾರದ ಯೋಚನೆಯು ಅಗತ್ಯವಾಗಿ ಮುಂದುವರಿಯಬೇಕಾಗಿದೆ. ಆದ್ದರಿಂದ ನಾನು ಈಗಲೇ ಹೊರಡುತ್ತೇನೆ. ನೀವೆಲ್ಲರೂ ನಾನು ಬರುವವರೆಗೆ ನಿತ್ಯನಿಯಮಗಳನ್ನು ನಡೆಸಿಕೊಂಡಿರಿ. ಬಂದ ಮೇಲೆ ಮತ್ತೆ ಇಂದಿನ ವಿಚಾರವನ್ನು ಮುಂದುವರಿಸೋಣ.

**ಎಲ್ಲರೂ** : - ಅಪ್ಪಣೆ.

ರಂಗನಾಥ : - ಮಹಾಸ್ವಾಮಿ, ಪಂಚವಟಿಗೆ ಹೋದಾಗ ಈಗ ನಾನು ಹೇಳಿದ್ದು ನೆನಪಿನಲ್ಲಿರಬೇಕು.

ನಿಜಾನಂದರು : - ಅದು ಈಶ್ವರೇಚ್ಛೆಯನ್ನವಲಂಬಿಸಿದ್ದು ! ಹೊರಡೋಣ.

(ಎಲ್ಲರೂ ಹೋಗುವರು)

(ಪಂಚವಟಿಯಲ್ಲಿ ಆತ್ಮಾರಾಮನು ಧ್ಯಾನಾರೂಢನಾಗಿರುವನು.)

ನಿಜಾನಂದರು : - (ಪ್ರವೇಶಿಸಿ) ಓಹೋ! ಇವನು ಆತ್ಮಾರಾಮನು. ಈಗ ಇವನು ನಿಜವಾಗಿ ಆತ್ಮಾರಾಮನೇ ಆಗಿರುವನು. ಆಹಹ ! ಇವನು ಎಂತಹ ದೃಢಪ್ರಯತ್ನ ಶಾಲಿಯು ! ತನ್ನ ಶ್ರದ್ಧಾಬಲದಿಂದ ಎಂತಹ ಬಲವಾದ ಸಮಾಧಿಯನ್ನು ತಂದುಕೊಂಡಿರುವನು !! ಒಳ್ಳೇದು. ಈಗಲೇ ಇವನಿಗೆ ಪೂರ್ಣಾನುಗ್ರಹಮಾಡಿ ಎಚ್ಚರಗೊಳಿಸುವೆನು. (ಎಂದು ತಲೆಯ ಮೇಲೆ ಅಭಯಹಸ್ತವನ್ನಿಡುವನು).

ಆತ್ಮರಾಮ : - (ಕಣ್ಣುಬಿಟ್ಟು) ಏನಿದು ! ಎಂದೆಂದೂ ಕಾಣದ ಆನಂದ !! (ಎಂದು ಸುತ್ತಲೂ ನೋಡಿ) ಓಹೋ ! ಇದು ಗುರುಗಳ ಅನುಗ್ರಹದ ಫಲ (ಎಂದು ಗುರುಗಳಿಗೆ ಅಡ್ಡಬೀಳುವನು.)

ನಿಜಾನಂದರು : - (ಅವನನ್ನೆಬ್ಬಿಸಿ) ಆತ್ಮಾರಾಮ, ನೀನು ಆತ್ಮಾರಾಮನಾದೆ. ಏಳು.

ಆತ್ಮರಾಮ : - ಮಹಾಸ್ವಾಮಿ, ತಮ್ಮ ಕೃಪಾಕಟಾಕ್ಷದಿಂದ ನಾನು ಧನ್ಯನಾದೆನು.

ನಿಜಾನಂದರು : - ನೀನು ನಮ್ಮ ಆಶ್ರಮದಿಂದ ಹೊರಟವನು ಊರಿಗೆ ಹೋಗಲಿಲ್ಲವೆ?

ಆತ್ಮರಾಮ : - ಹೋಗಿದ್ದೆನು ಮಹಾಸ್ವಾಮಿ; ತಾವು ಹೇಳಿದ ಸಾಧನವನ್ನು ಬೇಗ ಪೂರ್ಣಮಾಡಿಕೊಳ್ಳಬೇಕೆಂದು ಇಲ್ಲಿಗೆ ಬಂದೆನು.

ನಿಜಾನಂದರು : - ಪೂರ್ಣವಾಯಿತು. ಇನ್ನು ನಡೆ, ನಮ್ಮೊಡನೆ ಆಶ್ರಮಕ್ಕೆ. ಇಲ್ಲಿ ಸಾಧುಗಳ ಸಭೆ ಸೇರುವದು. ಆ ಕಾರ್ಯಕಲಾಪಗಳನ್ನು ಮುಗಿಸಿಕೊಂಡು ಹೊರಡೋಣ. ಧರ್ಮದ ಸ್ಥಾಪನೆಗೇನು ಮಾಡಬೇಕೆಂಬ ವಿಷಯದಲ್ಲಿ ನೀನು ಮುಂದಾಳಾಗಿ ಕೆಲಸ ಮಾಡು. ನಡೆ ಹೋಗೋಣ.

ಆತ್ಮರಾಮ : - ಅಪ್ಪಣೆ (ಇಬ್ಬರೂ ಹೋಗುವರು).

(ಆಶ್ರಮದಲ್ಲಿ ಸ್ತ್ರೀಯರೂ ಪುರುಷರೂ ನಿಜಾನಂದರ ದಾರಿಯನ್ನು ನೋಡುತ್ತಿರುವರು.)

ವಿಠ್ಠಲ :- ಗುರುಮಹಾರಾಜರು ಈ ದಿನ ಇಷ್ಟುಹೊತ್ತಿಗೆ ಬರುತ್ತೇವೆಂದು ನಿರೂಪವನ್ನು ಕಳುಹಿಸಿದ್ದಾರೆ; ಇನ್ನೇನು ಬರುವ ಸಮಯ !

ಶಾಂತಾ : - ನನ್ನ ಮನಸ್ಸು ಇಷ್ಟು ದಿನ ನಿಂತಿದ್ದರೂ ಈಗ ನಿಲ್ಲಲ್ಲೊಲ್ಲದಲ್ಲ !

ಭವಾನಮ್ಮ : - ಶಾಂತಾ, ಎಲ್ಲ ಸಂದರ್ಭಗಳಲ್ಲಿಯೂ ಮನಸ್ಸನ್ನು ಶಾಂತವಾಗಿ ಇಟ್ಟುಕೊಂಡಿರಬೇಕೆಂದು ಗುರುಗಳು ಹೇಳಿಲ್ಲವೇ?

ಶಾಂತಾ : - ಭವಾನಮ್ಮ, ಅದು ಗೊತ್ತಿದೆ. ಆದರೆ ಅದು ಈಗ ನನ್ನ ಹಿಡಿತಕ್ಕೆ ದಕ್ಕುವದಿಲ್ಲ.

ಭವಾನಮ್ಮ : - ನಿನಗೆ ನಮ್ಮೆಲ್ಲರಿಗೂ ಗುರುಗಳ ಮೇಲೆ ಭಕ್ತಿಯ ಭರವು ಹೆಚ್ಚಾದ್ದರಿಂದ ಸಂತೋಷವು ಉಕ್ಕುತ್ತಿರುವಂತೆ ತೋರುತ್ತದೆ.

ನಿಜಾನಂದರು : - (ಆತ್ಮಾರಾಮನೊಡನೆ ಪ್ರವೇಶಿಸಿ) ಜಯ ಜಯ ರಘುವೀರ ಸಮರ್ಥ!

ವಿಠ್ಠಲ : - (ಮುಂದೆ ಬಂದು ಅಡ್ಡಬೀಳುವನು)

ರಂಗನಾಥ : - ಓಹೊ! ನಮ್ಮ ಪಂಚವಟಿಯ ಸಾಧುಗಳೂ ಬಂದಿದ್ದಾರೆ !

ಶಾಂ : - (ಆತ್ಮಾರಾಮನನ್ನು ದಿಟ್ಟಿಸುವಳು)

ಭ : - ಶಾಂತಾ, ಇದು ಆಶ್ರಮ. ಹಾಗೆ ದೃಷ್ಟಿಯನ್ನು ಸಡಿಲಬಿಡಬಾರದು.

(ಒಬ್ಬೊಬ್ಬರಾಗಿ ನಮಸ್ಕರಿಸುತ್ತಿರುವರು)

ಶಾಂ : - ಬಿಗಿಹಿಡಿಯುವದು ನನ್ನ ಕೈಲಾಗದ ಮಾತು.

ಭ : - ಗುರುಗಳೇನಾದರೂ ತಿಳಿದುಕೊಂಡಾರು?

ಶಾಂ : - ಗುರುಗಳು ಯಥಾರ್ಥವನ್ನೇ ತಿಳಿದುಕೊಳ್ಳುತ್ತಾರೆ.

ಭ :-ಹಾಗಾದರೆ ಆತ್ಮೋದ್ಧಾರಕ್ಕೆಂದು ಬಂದ ನಿನಗೆ ವಿರುದ್ಧ ಫಲವಾಗುವದಿಲ್ಲವೆ?

ಶಾಂ : - ಏನಾದರೆ ಅದೇ ನನಗೆ ಆತ್ಮೋದ್ಧಾರವೆಂದು ತಿಳಿಯುತ್ತೇನೆ.

ಭ : - ಇದರ ಮೇಲೆ ನಿನ್ನಿಷ್ಟ. ಆಶ್ರಮಕ್ಕೆ ಕೆಟ್ಟ ಹೆಸರು ಬರಬಾರದು. (ಎಂದು ಮುಂದೆ ಹೋಗಿ ಎರಗುವಳು.)

ಶಾಂ - (ಹಿಂದೆಯೇ ಹೋಗಿ ಗುರುಗಳಿಗೆ ಅಡ್ಡಬಿದ್ದು ಆತ್ಮಾರಾಮನಿಗೂ ಅಡ್ಡಬೀಳುವಳು.)

ನಿಜಾನಂದರು : - ಶಾಂತಾ ಏನಿದು, ಈ ಸಾಧುಗಳನ್ನು ನೀನು ಬಲ್ಲೆಯೆಂದು ತೋರುತ್ತದೆ. (ಎಂದು ಆತ್ಮಾರಾಮನನ್ನು ನಿಟ್ಟಿಸುವರು.)

ಆ : - (ತಲೆತಗ್ಗಿಸುವನು.)

ಭ : - ಶಾಂತಾ, ಕೊನೆಗೂ ನೀನು ನಿನ್ನ ಮನಸ್ಸನ್ನು ಹರಿಯಬಿಟ್ಟೆ.

ಶಾಂ : - (ತಲೇ ತಗ್ಗಿಸುವಳು.)

ನಿಜಾನಂದರು :- ಶಾಂತಾ, ಇವರು ಯಾರೆಂದು ತಿಳಿದು ನೀನು ಅಡ್ಡಬಿದ್ದೆ?

ಶಾಂ : - ಪತಿಯೆಂದು ತಿಳಿದು

ನಿಜಾನಂದರು :- ಏನು, ಏನು !

ಭ : - ಶಾಂತಾ, ಏನಿದು !ಏನೇನೋ ಕನವರಿಸುತ್ತೀಯಲ್ಲ !!

ನಿಜಾನಂದರು :- ಆತ್ಮಾರಾಮ, ಇವಳು ನಿನ್ನ ಸತಿಯೆ?

ಆ : - ನಿಜ.

ರಂಗನಾಥ : - ಈಕೆ ಬಂದಾಗ ನಾನು ಈ ಹೊಸ ಸಾಧುಗಳ ಸುದ್ದಿಯನ್ನು ಹೇಳುತ್ತಿದ್ದಾಗ ನಾನು ಹೇಳುವ ಸುದ್ದಿಗೂ ಈಕೆಗೂ ಸಂಬಂಧವಿರಬಹುದೆಂದು ನೆನೆಸಿದ್ದು ನಿಜವೇ ಆಯಿತು.

ನಿಜಾನಂದರು : -ಆತ್ಮಾರಾಮ, ನಡೆದ ಸಂಗತಿಯೇನು? ವಿವರಿಸು.

ಆ : - ಮಹಾಸ್ವಾಮಿ, ನಾನು ತಮ್ಮಪ್ಪಣೆಯನ್ನು ಪಡೆದು ಹೋದಮೇಲೆ ನನಗೆ ಈಕೆಯೊಡನೆ ಮದುವೆಯಾಯಿತು. ಒಂದು ದಿನ ಪೂರ್ಣವೈರಾಗ್ಯವು ಬರುವದು ಹೇಗೆಂಬ ಮಾತು ನಡೆದಾಗ ಒಂದೊಂದಾಗಿ ವಿಷಯವನ್ನು ಬಿಡುವದು ಸರಿ ಯಾದ ವೈರಾಗ್ಯವಲ್ಲವೆಂದು ಹೇಳಿ ಎಲ್ಲವನ್ನೂ ಒಮ್ಮೆಗೇ ಬಿಟ್ಟು ಹೊರಡುವದೇ ವೈರಾಗ್ಯವೆಂದು ತೋರಿಸುವದಕ್ಕೆಂದು ಮನೆಯಿಂದ ಹೊರಬಿದ್ದೆನು. ಆಮೇಲೆ ಆ ಸಂದರ್ಭವನ್ನು ಹಾಗೆಯೇ ಸದುಪಯೋಗ ಮಾಡಿಕೊಳ್ಳಬೇಕೆಂದು ಪಂಚವಟಿಗೆ ಹೋಗಿ ತಮ್ಮ ಹಿಂದಿನ ಉಪದೇಶದಂತೆ ಧ್ಯಾನವನ್ನು ಸಾಧಿಸುತ್ತಿದ್ದೆನು. ಇಷ್ಟೆ.

(ಎಲ್ಲರೂ ಆಶ್ಚರ್ಯದಿಂದ ಕೇಳುವರು.)

ನಿಜಾನಂದರು : - ಬಹಳ ಸಂತೋಷ. ನೀನು ತ್ರಿಕರಣ ಶುದ್ಧಿಯಿಂದ ವಿರಕ್ತನಾಗಿದ್ದರಿಂದ ಭಗವಂತನು ನಿನಗೂ ಶ್ರೇಯಸ್ಸನ್ನು ಮಾಡಿದನು. ನಿನ್ನ ಪತ್ನಿಯೂ ಜಗತ್ತಿಗೇ ಮೇಲುಪಂಕ್ತಿಯಾಗಿ ತಾನೂ ಧರ್ಮಾನುಷ್ಠಾನದಲ್ಲಿ ಮುಂದುವರಿದು ನಿನಗೆ ಧರ್ಮದಲ್ಲಿಯೂ ಅನುರೂಪಳಾಗಿರುವಳು. ಗೃಹಸ್ಥರು ಸಾಧಿಸಬೇಕಾದ ಸುಖದ ಪರಮಾವಧಿಯನ್ನು ನೀನು ಸಾಧಿಸಿದೆ. ಗಂಡಹೆಂಡಿರು ಧರ್ಮಾಭಿವೃದ್ಧಿಗೆ ಒಬ್ಬರಿಗೊಬ್ಬರು ಸಹಾಯಕರಾಗಿದ್ದರೆ ಭಗವಂತನು ಅಗತ್ಯವಾಗಿ ಸಂತೋಷಿಸುವನು. ಇದುವರೆಗೆ ನೀನು ಹೆಂಡತಿಯನ್ನಗಲಿದ್ದದ್ದು ಸಾಧನ ರೂಪವಾದ ವೈರಾಗ್ಯ. ಇನ್ನು ನೀನು ನಿನ್ನ ಹೆಂಡತಿಯನ್ನು ಅದರಿಸು. ಹೆಂಡತಿ ಯೊಡನೆ ಇದ್ದರೂ ಇಂದ್ರಿಯ ಗಳ ಸೆಳೆತಕ್ಕೆ ಸಿಕ್ಕದಿರುವದೇ **ಪರಮವೈರಾಗ್ಯ** ನೀನಿನ್ನು ಆ ಉದಾಹರಣೆಯನ್ನು ತೋರಿಸು.

ಭ : - ಶಾಂತಾ, ನಾನು ನಿನ್ನನ್ನು ಏನೇನೋ ದೋಷದೃಷ್ಟಿಯಿಂದ ನೋಡಿದೆನು. ಕ್ಷಮಿಸಮ್ಮ.

ಶಾಂ : - ನೀವು ಕೊಟ್ಟ ಎಚ್ಚರಿಕೆಯು ನಿಜವಾಗಿ ನೆನಪಿನಲ್ಲಿಡತಕ್ಕದ್ದೆ. ಅದು ನನ್ನ ಹಿತಕ್ಕಾಗಿ ಹೇಳಿದ್ದು.

ನಿಜಾನಂದರು : -ಶಾಂತಾ, ನೀನು ಪತಿಯಗಲಿದ ಕಾಲದಲ್ಲಿ ದೇಹೇಂದ್ರಿಯಗಳ ಸುಖವನ್ನು ಕಡೆಗಂಡು ತಪಶ್ಚರ್ಯೆಯನ್ನು ನಡೆಸಿ ಧರ್ಮದಲ್ಲಿ ಚೆನ್ನಾಗಿ ಮುಂದು ವರಿದೆ. ಭಗವಂತನು ಈಗ ನಿನ್ನ ಮೇಲೆ ಕೃಪೆದೋರಿ ನಿನ್ನ ಪತಿಯನ್ನು ನಿನ್ನ ಬಳಿಗೆ ತಂದು ಬಿಟ್ಟಿರುವನು. ನಿನ್ನ ಸಂಸಾರವು ಹುಟ್ಟುಸಾವುಗಳರ್ಥದ ಸಂಸಾರ ವಲ್ಲ; ಒಳ್ಳೆಸಾರವತ್ತೆಂಬರ್ಥದ ಸಂಸಾರ. ನಿನಗಿನ್ನೇನಾಗಬೇಕು?

ಶಾಂ : - ಗುರುಮಹಾರಾಜ, ಹೆಂಗಸರ ಮನಸ್ಸು ಗಂಡಸರದ್ದಕ್ಕಿಂತ ಬಹಳ ಚಂಚಲವಾದದ್ದು ಮತ್ತು ಹೊರಗಣ ಸುಖವನ್ನೇ ಹೆಚ್ಚು ಬಹುಮಾನಿಸುವ ಜಾತಿಯದು. ಇನ್ನು ಮೇಲೆ ಹೆಂಗಸರ ಮನಸ್ನೂ ಹಿಡಿತಕ್ಕೆ ದಕ್ಕಿ ಪತಿಯನ್ನೂ ಧರ್ಮಾನುಷ್ಠಾನದಲ್ಲಿ ಮುಂದುವರಿಸಿ ಆತ್ಮೋನ್ನತಿಯನ್ನು ಮಾಡಿಕೊಳ್ಳುವಂತೆ ಅನುಗ್ರಹಿಸಬೇಕು.

ನಿಜಾನಂದರು :- ಅಗತ್ಯವಾಗಿ ಹಾಗೆಯೇ ಆಗಲಿ.

ಎಲ್ಲರೂ : - ಗುರುಮಹಾರಾಜಾ ಗುರು ಜಯ ! ಜಯ ಪರಬ್ರಹ್ಮ ಸದ್ಗುರು!!

(ನಾಟಕ ಮುಗಿಯಿತು.)

*****

# 11. ಇಲ್ಲದಿರುವಿಕೆಯೆಂಬ (ಅಭಾವವೆಂಬ) ಉಪಾಧಿ

ಉಪಾಧ್ಯಾಯ : - ಇಂದು ಯಾವದರ ಪಾಠ?

ಶಿಷ್ಯ : - ಪಂಚದಶೀ

ಉಪಾಧ್ಯಾಯ : - ಇವತ್ತು ಮೊದಲು ಮಾಡಬೇಕಾದ ಶ್ಲೋಕವು ಯಾವದು?

ಶಿಷ್ಯ : - **'ಯಥಾ ವಿಧಿರುಪಾಧಿಃ ಸ್ಯಾತ್ಪ್ರತಿಷೇಧಸ್ತಥಾ ನ ಕಿಮ್ ।**
**ಸುವರ್ಣಲೋಹಭೇದೇನ ಶೃಙ್ಖಲಾತ್ವಂ ನ ಭಿದ್ಯತೇ ॥'**

ಉಪಾಧ್ಯಾಯ :- ಹಿಂದೆ ನಡೆದ ವಿಷಯವೇನು?

ಶಿಷ್ಯ : - ಅಂತಃಕರಣದೊಡನೆ ಕೂಡಿರುವದು ಜೀವನ ಲಕ್ಷಣ; ಅಂತಃಕರಣದೊಡನೆ ಕೂಡಿಲ್ಲದಿರುವದು ಬ್ರಹ್ಮನ ಲಕ್ಷಣ- ಎಂಬುದು ಹಿಂದಿನ ವಿಷಯ.

ಉಪಾಧ್ಯಾಯ :- ಈ ಅಭಿಪ್ರಾಯವು ಮನಸ್ಸಿಗೆ ಹಿಡಿಯಿತಷ್ಟೆ?

ಶಿಷ್ಯ : - ಇರುವ ವಸ್ತು ಉಪಾಧಿಯಾಗಬಹುದೇ ಹೊರತು ಇಲ್ಲದಿರುವಿಕೆಯು ಹೇಗೆ ಉಪಾಧಿಯಾದೀತೆಂದು ನಿನ್ನೆಯೇ ಸಂಶಯವು ತಲೆದೋರಿತ್ತು. ಅದರ ಪರಿಹಾರವನ್ನು ತಾವು ಇವತ್ತಿಗೆಂದು ನಿಲ್ಲಿಸೋಣವಾಯಿತು.

ಉಪಾಧ್ಯಾಯ :- ಸರಿ; ಇವತ್ತಿನ ಶ್ಲೋಕವು ಅದರ ಪರಿಹಾರವನ್ನು ಹೇಳುವದು. ಶ್ಲೋಕದ ಈ ತಾತ್ಪರ್ಯವನ್ನು ಲಕ್ಷ್ಯದಲ್ಲಿಟ್ಟುಕೊಂಡು ಅದರ ಅರ್ಥವನ್ನು ಹೊರಡಿಸುವ ಯತ್ನವನ್ನು ಮಾಡು.

ಶಿಷ್ಯ : - ವಿಧಿ, ನಿಷೇಧ- ಎಂಬ ಮಾತುಗಳು ಇಂಥ ಕರ್ಮಗಳನ್ನು ಮಾಡಬೇಕೆಂಬ ಮತ್ತು ಇಂಥ ಕರ್ಮಗಳನ್ನು ಮಾಡಬಾರದೆಂಬ ಅರ್ಥವನ್ನು ಕೊಡುವ ಮಾತುಗಳಾಗಿ ಹಿಂದೆ ಬಂದಿದೆ. ಇಲ್ಲಿ ಆ ಅರ್ಥವೇ ಕೂಡುವುದಿಲ್ಲವಲ್ಲ !

ಉಪಾಧ್ಯಾಯ : - ಆದ್ದರಿಂದಲೇ ನಾನು ನಿನಗೆ ಶ್ಲೋಕದ ತಾತ್ಪರ್ಯದ ಸೂಚನೆಯನ್ನುಕೊಟ್ಟು ಅರ್ಥವನ್ನು ಹೊರಡಿಸುವ ಯತ್ನವನ್ನು ಮಾಡೆಂದದ್ದು.
ಮಾತುಗಳ ಅರ್ಥವನ್ನು ಆಯಾ ಸಂದರ್ಭಕ್ಕೆ ಹೊಂದುವಹಾಗೆ ತೆಗೆದುಕೊಳ್ಳಬೇಕು. ಮೇಲಿನ ಶ್ಲೋಕದಲ್ಲಿ ಅಂತಃಕರಣದೊಡನೆ ಕೂಡಿರುವ ಮತ್ತು ಕೂಡಿಲ್ಲದಿರುವ ವಿಚಾರ ಬಂದಿದೆಯಷ್ಟೆ. ಇಲ್ಲಿ ವಿಧಿ ಮತ್ತು ನಿಷೇಧ- ಎಂಬ ಮಾತುಗಳು ಆ

ಅರ್ಥವನ್ನೇ ಹೇಳುತ್ತವೆ. ವಿಧಿ ಎಂದರೆ ಇರುವದೆಂದರ್ಥ. ನಿಷೇಧವೆಂದರೆ ಇಲ್ಲದಿರುವಿಕೆಯೆಂದರ್ಥ. ಇನ್ನು ನಿನ್ನ ಪ್ರಯತ್ನವನ್ನು ಮುಂದೆ ನಡೆಸು.

ಶಿಷ್ಯ : - ಇರುವದು ಉಪಾಧಿಯಾದಂತೆ, ಇಲ್ಲದಿರುವಿಕೆ ಉಪಾಧಿಯಾಗಲಾರದೇನು? ಎಂಬುದು ಪೂರ್ವಾರ್ಧದ ಅರ್ಥ.

ಉಪಾಧ್ಯಾಯ : - ಅದರ ತಾತ್ಪರ್ಯವೇನು?

ಶಿಷ್ಯ : - 'ಇಲ್ಲದಿರುವಿಕೆ ಕೂಡ ಉಪಾಧಿಯಾಗಬಹುದು'- ಎಂಬುದು

ಉಪಾಧ್ಯಾಯ : - ಉತ್ತರಾರ್ಧದ ಅರ್ಥವನ್ನು ಹೊರಡಿಸು.

ಶಿಷ್ಯ : - ಅದು 'ಇಲ್ಲದಿರುವಿಕೆ ಕೂಡ ಉಫಾದಿಯಾಗಬಹುದೆಂಬ' ಅರ್ಥಕ್ಕೆ ದೃಷ್ಟಾಂತವನ್ನು ಕೊಟ್ಟಿರಬೇಕೆಂದು ತೋರುತ್ತದೆ. ಈ ದೃಷ್ಟಾಂತದಲ್ಲಿ ಬಂಗಾರ, ಕಬ್ಬಿಣ- ಎಂದೆರಡಿವೆ. ಅದರಲ್ಲಿ ಯಾವದೂ ಇಲ್ಲದ್ದಲ್ಲ. ಆದ್ದರಿಂದ ಇಲ್ಲದಿರುವಿಕೆ ಉಪಾಧಿಯಾಗಬಹುದೆಂಬ ಅಭಿಪ್ರಾಯವು ಮೊದಲು ಮನಸ್ಸಿಗೆ ಹಿಡಿಯಬೇಕಾಗಿದೆ.

ಉಪಾಧ್ಯಾಯ :- ಅದನ್ನು ಹೇಳುತ್ತೇನೆ; ಕೇಳು. ಶ್ರೀವಿದ್ಯಾರಣ್ಯರ ದಾರಿಯನ್ನು ಹಿಡಿದು ನೋಡಿದರೆ ಜಗತ್ತಿನಲ್ಲಿ ಇರುವ ವಸ್ತುವನ್ನು ಕುರಿತು ಅನುಭವವನ್ನು ಹಿಡಿದು ಹೇಳುವ ಬೇರೆ ಬೇರೆ ಮಾತುಗಳ ಮೇಲೆಲ್ಲ ಅವುಗಳ ಬುಡದಲ್ಲಿರುವ ವಸ್ತುವಿನ ಇರುವಿಕೆಯ ಬೆಳಕು ಬಿದ್ದು ಅವುಗಳಿಗೆಲ್ಲ ಪದಾರ್ಥವು ಇರುವದೆಂಬ ಮಾತಿಗೊಂದರ್ಥವಿದ್ದರೆ ಅದರ ಇಲ್ಲದಿರುವಿಕೆಯೆಂಬ ಮಾತಿಗೂ ಒಂದರ್ಥವಿರಲೇಬೇಕು. ಇರುವ ವಸ್ತುವಿನ ವಿಚಾರದಲ್ಲಿ ಅರ್ಥವಿಲ್ಲದ ಮಾತೇ ಇಲ್ಲ. ಆದ್ದರಿಂದ ಅದರ ಇಲ್ಲದಿರುವಿಕೆಯೆಂಬ ಮಾತಿಗೂ ಅರ್ಥವಿಲ್ಲದೆ ಇಲ್ಲ. ಈ ಕಾರಣದಿಂದಲೇ ಶಾಸ್ತ್ರಗಳು ಇಲ್ಲದಿರುವಿಕೆಯನ್ನು ಒಂದು ಇರುವ ಪದಾರ್ಥವಾಗಿ ಒಪ್ಪಿಕೊಂಡಿರುವವು ಅದೊಂದು ಇರುವ ಪದಾರ್ಥವಾದ ಮೇಲೆ ಉಪಾಧಿಯಾಗುವದಕ್ಕೆ ಅಡ್ಡಿಯೇನು?

ಶಿಷ್ಯ : - ಇಲ್ಲದಿರುವಿಕೆಯನ್ನು ಒಂದು ಇರುವ ಪದಾರ್ಥವೆನ್ನುವದು ವ್ಯವಹಾರಕ್ಕೆ ಒಪ್ಪದ ಮಾತಲ್ಲವೆ?

ಉಪಾಧ್ಯಾಯ :- ಶಾಸ್ತ್ರದ ಯಾವ ಮಾತೂ ವ್ಯವಹಾರಕ್ಕೆ ಹೊಂದದೆ ಇರುವದಿಲ್ಲ. ತಕ್ಕಷ್ಟು ವಿಚಾರವಿಲ್ಲದ್ದರಿಂದ ಅದು ವ್ಯವಹಾರಕ್ಕೆ ವಿರುದ್ಧವಾಗಿ ಕಾಣುತ್ತದೆ. ಇಲ್ಲದಿರುವಿಕೆಯನ್ನು ಇರುವ ಪದಾರ್ಥವೆಂದು ವ್ಯವಹಾರದಲ್ಲಿ ಉಪಯೋಗಿಸದೆ

ಇರುವ ಮನುಷ್ಯನೇ ಇಲ್ಲ. ಇಲ್ಲದಿರುವಿಕೆಯನ್ನು ಇರುವ ಪದಾರ್ಥವೆಂದು ಬಾಯಲ್ಲಿ ಒಪ್ಪದೆ ಹೋದರೂ ನಡೆವಳಿಕೆಯಲ್ಲಿ ಎಲ್ಲರೂ ತೋರಿಸುತ್ತಾರೆ.

ಶಿಷ್ಯ : - ಅದು ಹೇಗೆ?

ಉಪಾಧ್ಯಾಯ : - ಕಿವಿಗೊಟ್ಟು ಕೇಳು, ರಾಮಯ್ಯನೆಂಬುವನು ಒಂದು ಪಂಚಾಯತಿಯಲ್ಲಿ ಕುಳಿತಿರಲಿಲ್ಲವೆಂದು ಶಿವಪ್ಪನೆಂಬುವನು ನ್ಯಾಯಾಸ್ಥಾನದಲ್ಲಿ ಒಪ್ಪಿಸಿಕೊಡಬೇಕಾಗಿದೆ. ಅದಕ್ಕೆ ಅವನು ಕೃಷ್ಣರಾಯನನ್ನು ಸಾಕ್ಷಿಯಾಗಿ ಕರೆಯುತ್ತಾನೆ. ಕೃಷ್ಣರಾಯನು ನ್ಯಾಯಾಸ್ಥಾನಕ್ಕೆ ಬಂದಾಗ ನ್ಯಾಯಾಧಿಪತಿಯು ಅವನಿಂದ ಇದ್ದದ್ದನ್ನು ಇದ್ದ ಹಾಗೆ ಹೇಳುತ್ತೇನೆ' ಎಂದು ಆಣೆಮಾಡಿಸುತ್ತಾನೆ. ಆಮೇಲೆ ಕೃಷ್ಣರಾಯನು ಆ ಪಂಚಾಯಿತಿಯಲ್ಲಿ ರಾಮಯ್ಯನಿರಲಿಲ್ಲವೆಂದು ನುಡಿಯುತ್ತಾನೆ. ಇಲ್ಲದಿರುವಿಕೆಯನ್ನು ಇರುವ ಪದಾರ್ಥವೆಂಬ ಶಾಸ್ತ್ರದ ಹಾದಿಯವನಲ್ಲವಾದರೂ ವ್ಯವಹಾರದಲ್ಲಿ ನಿಪುಣನಾದ ಆ ನ್ಯಾಯಾಧಿಪತಿಯು ಆ ಸಾಕ್ಷಿಯನ್ನು ಪ್ರಾಮಾಣಿಕನೆಂದು ಒಪ್ಪಿಕೊಳ್ಳುತ್ತಾನೆ. ಇದ್ದದ್ದನ್ನು ಇದ್ದ ಹಾಗೆ ಹೇಳುತ್ತೇನೆಂದವನು 'ಇರಲಿಲ್ಲ' ಎಂದು ಹೇಳಿದರೆ ಇಲ್ಲದಿರುವಿಕೆಯು ಇರುವ ಪದಾರ್ಥ ವೆಂದಾಯಿತೋಇಲ್ಲವೋ?[1]

ಶಿಷ್ಯ : - ಸರಿ, ಸರಿ, ಇದೊಳ್ಳೆ ಚೆನ್ನಾಗಿದೆ ! ಇದರಿಂದ ಇಲ್ಲದಿರುವಿಕೆಯು ಇರುವ ಪದಾರ್ಥವೆಂದೊಪ್ಪಿಕೊಳ್ಳಬೇಕಾಯಿತು. ಆದರೆ ಅದು ಇರುವ ಪದಾರ್ಥವೆಂದು ಗ್ರಂಥಕರ್ತರೇ ಬಾಯಿಬಿಟ್ಟು ಹೇಳಿದ್ದರೆ ಚೆನ್ನಾಗಿತ್ತಲ್ಲ!

ಉಪಾಧ್ಯಾಯ : - ಇಲ್ಲದಿರುವಿಕೆಯು ಉಪಾಧಿಯಾಗಬಹುದೆಂದಾಗಲೆ ಅದು ಇರುವ ಪದಾರ್ಥವೆಂದು ಅವರು ಹೇಳಿದಂತೆಯೇ ಆಯಿತು.

ಶಿಷ್ಯ : -ನಿಜ, ನಿಜ. ಅದೂ ಒಪ್ಪತಕ್ಕದ್ದೆ. ಇನ್ನೊಂದು ಸಂಶಯವಿದೆ.

ಉಪಾಧ್ಯಾಯ :- ಅದೇನು?

---

1. ಇಲ್ಲಿ 'ಇರುವದು' ಎಂಬ ಮಾತನ್ನು ಎರಡರ್ಥದಲ್ಲಿ ಉಪಯೋಗಿಸಿರುವಂತೆ ತೋರುವದು. ಇಲ್ಲದಿರುವದನ್ನು ಪದಾರ್ಥವೆಂದು ತಾರ್ಕಿಕರೂ ಮೀಮಾಂಸಕರೂ ಒಪ್ಪುತ್ತಾರಾದರೂ ಅದನ್ನು 'ಇರುವ' ಪದಾರ್ಥವೆಂದು ಅವರು ಒಪ್ಪುವಂತೆ ತೋರಲಿಲ್ಲ.

(ಸಂಪಾದಕರು : ಅಧ್ಯಾತ್ಮ ಪ್ರಕಾಶ)

ಶಿಷ್ಯ : - ಇರುವ ವಸ್ತು ಉಪಾಧಿಯಾದಂತೆ ಇಲ್ಲದಿರುವಿಕೆಯನ್ನು ಉಪಾಧಿಯಾಗ ಬಾರದೇಕೆ? ಎಂಬುದು ಈಗ ನಡೆದಿರುವ ವಿಷಯ. ಇಲ್ಲದಿರುವಿಕೆಯೂ ಇರುವ ಪದಾರ್ಥವಾದರೆ ಎರಡು ಮಾತುಗಳ ಅರ್ಥವೂ ಒಂದೇ ಆಯಿತಲ್ಲ !

ಉಪಾಧ್ಯಾಯ : - ಹಾಗಲ್ಲ. ಅವೆರಡರ ಜಾತಿ ಬೇರೆ ಬೇರೆ. ಒಂದು ಇರುವ ವಸ್ತು; ಇನ್ನೊಂದು ಅದರ ಇಲ್ಲದಿರುವಿಕೆ.

ಶಿಷ್ಯ : - ಇಲ್ಲದಿರುವಿಕೆಯನ್ನು ಇರುವದೆನ್ನುವದಕ್ಕೆ ಮನಸ್ಸು ಒಗ್ಗಲೊಲ್ಲದಲ್ಲ ! ಇಲ್ಲದ್ದು ಇರುವದುಂಟೆ ?

ಉಪಾಧ್ಯಾಯ : - ಉಂಟು. ಒಂದು ಕಡೆ ಗಡಿಗೆಯ ಇಲ್ಲದಿರುವಿಕೆ, ಬಟ್ಟೆಯ ಇಲ್ಲದಿರುವಿಕೆ- ಮೊದಲಾದವು ಇರುವದೆನ್ನುವಾಗ ಯಾವದರ ಇಲ್ಲದಿರುವಿಕೆಯನ್ನು ಕುರಿತು ಹೇಳಲಾಗುತ್ತದೊ ಆ ವಸ್ತು ಹೇಳುವವನ ನೆನಪಿನಲ್ಲಿ ಎದ್ದುಕೊಂಡಿದ್ದು ಹೊರಗೆ ಇಲ್ಲದ್ದೆನಿಸುವದು.

ಶಿಷ್ಯ : - ಇಲ್ಲದ್ದು ಇರುವದಾದರೆ ಮೊಲದ ಕೋಡೂ ಇರಬೇಕಾಯಿತಲ್ಲ !

ಉಪಾಧ್ಯಾಯ : - ಇಲ್ಲದಿರುವ ವಸ್ತುಗಳೆಲ್ಲ ಇರುವವೆಂದು ಹೇಳುವದಕ್ಕೆ ನಾವು ಹೊರಟಿಲ್ಲ. ಇರುವಿಕೆ, ಇಲ್ಲದಿರುವಿಕೆ- ಎಂಬ ಧರ್ಮಗಳು ಇರುವ ಪದಾರ್ಥ ಗಳೆಂದು ಮಾತ್ರ ನಾವು ಹೇಳುತ್ತೇವೆ. ಮೊಲದ ಕೋಡು ಇಲ್ಲದಿರುವ ವಸ್ತುವೇ ಹೊರಡು ಇಲ್ಲದಿರುವಿಕೆಯ ಸ್ವರೂಪವಲ್ಲ. ಆದ್ದರಿಂದ ಅದು ಇರಬೇಕಾದದ್ದಿಲ್ಲ.

ಶಿಷ್ಯ : - ತಾವು ಮೇಲೆ ಹೇಳಿದಂತೆ ಇಲ್ಲದಿರುವಿಕೆಯು ಸ್ವತಂತ್ರವಾಗಿ ಇರುವಂಥಾ ದ್ದಾಗದೆ ಬುಡದಲ್ಲಿ ಇರುವ ವಸ್ತುವಿನ ಬಲದಿಂದ ಬಾಳುವದಾದರೆ ಅದರ ಬಾಳೊಂದು ಬಾಳೆ?

ಉಪಾಧ್ಯಾಯ : - ಅದೂ ಒಂದು ಬಾಳು ಏಕಾಗಬಾರದು? ಆಳು ಅರಸಿನ ಬೆಂಬಲದಿಂದ ಬಾಳುತ್ತಿದ್ದ ಮಾತ್ರಕ್ಕೇ ಅವನ ಬಾಳನ್ನು ಬಾಳಲ್ಲವೆನ್ನಲಾದೀತೆ?

ಶಿಷ್ಯ : - ಶ್ರೀವಿದ್ಯಾರಣ್ಯರೇ ಹಿಂದೆ ಶೂನ್ಯವಾದವನ್ನು ಖಂಡಿಸುವಾಗ ಇಲ್ಲದಿರುವಿಕೆ ಯನ್ನು ಇತ್ತೆಂದು ಹೇಳಬಾರದೆಂದು ಆಡಿ ತೋರಿಸಿದ್ದಾರಲ್ಲ?

ಉಪಾಧ್ಯಾಯ : - ಅದು ನೀನು ಎತ್ತಿದ್ದ ಮೊಲದ ಕೋಡಿನಂತೆ ಇರುವಿಕೆಯ ಸೆಲೆಯೇ ಇಲ್ಲದ್ದರ ವಿಷಯ. ಆದ್ದರಿಂದ ಹೇಗೆ ಹೇಗೆ ನೋಡಿದರೂ ಇಲ್ಲದಿರುವಿಕೆಯೆಂಬುದು ಇರುವ ವಸ್ತುವಾಗುತ್ತದೆ.

ಶಿಷ್ಯ : - ಆಗಲಿ. ಮುಂದೆ ಸಾಗೋಣ. ಇರುವ ವಸ್ತು ಮತ್ತು ಇಲ್ಲದಿರುವಿಕೆಯೆಂಬ ಉಪಾಧಿಗೆ ಉತ್ತರಾರ್ಧದಲ್ಲಿ ಬಂಗಾರದ ಮತ್ತು ಕಬ್ಬಿಣದ ದೃಷ್ಟಾಂತಗಳು ಹೇಗೆ ಹೊಂದುತ್ತವೆ?

ಉಪಾಧ್ಯಾಯ : - ಇಲ್ಲಿ ಬಂಗಾರವನ್ನೂ ಕಬ್ಬಿಣವನ್ನೂ ನೇರವಾಗಿ ಇರುವ ವಸ್ತುವಿಗೂ ಇಲ್ಲದಿರುವಿಕೆಗೂ ದೃಷ್ಟಾಂತವಾಗಿ ತೆಗೆದುಕೊಳ್ಳಬಾರದು. ಇರುವ ಪದಾರ್ಥವೂ ಇಲ್ಲದಿರುವಿಕೆಯೂ ಬೇರೆ ಬೇರೆ ಜಾತಿಯದೆಂದು ಹೇಳಿದೆವಷ್ಟೆ. ಇಲ್ಲಿ ಬಂಗಾರವೂ ಕಬ್ಬಿಣವೂ ಬೇರೆ ಬೇರೆ ಜಾತಿಯಾಗಿರುವದೇ ದೃಷ್ಟಾಂತ. ಬೇಡಿಯು ಬಂಗಾರದ ಜಾತಿಯದೇ ಆಗಿರಬೇಕೆಂಬ ನಿಯಮವಿಲ್ಲ; ಕಬ್ಬಿಣದ್ದಾದರೂ ಆಗಬಹುದು. ಓಡಾಟಕ್ಕೆ ಅಡ್ಡಿಯನ್ನು ಮಾಡುವ ವಿಷಯದಲ್ಲಿ ಬಂಗಾರವೂ ಕಬ್ಬಿಣವೂ ಎರಡೂ ಒಂದೇ. ಆದ್ದರಿಂದ ಇರುವ ವಸ್ತುವೂ ಅದರ ಇಲ್ಲದಿರುವಿಕೆಯೂ ಎರಡೂ ಉಪಾಧಿಯಾಗಬಹುದು.

ಶಿಷ್ಯ : - ನೇರವಾದ ದೃಷ್ಟಾಂತವನ್ನು ಕೊಡುವದನ್ನು ಬಿಟ್ಟು ಈ ಸುತ್ತು ದಾರಿಯೇಕೆ?

ಉಪಾಧ್ಯಾಯ : - ನಾವು ಇಲ್ಲಿ ಇದ್ದದ್ದಕ್ಕೆ ಅರ್ಥವನ್ನು ಹೇಳುವದಕ್ಕೆ ಕುಳಿತಿದ್ದೇವೆಯೇ ಹೊರತು ಗ್ರಂಥಕರ್ತರ ಮೇಲೆ ಕತ್ತೀ ಎತ್ತುವದಕ್ಕೆ ಕುಳಿತಿಲ್ಲ.

ಶಿಷ್ಯ : - ಕ್ಷಮಿಸಬೇಕು. ನನಗೂ ಗ್ರಂಥಕರ್ತರ ಮೇಲೆ ಗೌರವವಿದೆ. ನಾನು ಅವರ ಮೇಲೆ ಕತ್ತೀ ಎತ್ತಬೇಕೆಂದಿರುವವನಲ್ಲ. ಅವರ ಅಭಿಪ್ರಾಯವನ್ನು ತಿಳಿಯಲಿಚ್ಛಿಸುವೆನು. ದಯವಿಟ್ಟು ಹೇಳಬೇಕು.

ಉಪಾಧ್ಯಾಯ :- ಓಹೋ ಹಾಗೋ ! ಹಾಗಾದರೆ ಹೇಳುತ್ತೇನೆ. ಕೇಳು. ಗ್ರಂಥಕರ್ತರು ಉದ್ದೇಶವಿಲ್ಲದೆ ಹಾಗೆ ಮಾಡಿಲ್ಲ. ಈಗ ನಿನ್ನ ಆಕ್ಷೇಪಣೆಯೇನು? ಸ್ಪಷ್ಟವಾಗಿ ಹೇಳು.

ಶಿಷ್ಯ : - ದಾರ್ಷ್ಟಾಂತಿಕದಲ್ಲಿ ಒಂದು ಇರುವ ವಸ್ತು; ಇನ್ನೊಂದು ಇಲ್ಲದಿರುವಿಕೆ- ಹೀಗೆ ಇದೆ. ದೃಷ್ಟಾಂತದಲ್ಲಿಯೂ ಹಾಗೆಯೇ ಇದ್ದರೆ ಚೆನ್ನಾಗಿತ್ತು. ಹಾಗಿರದೆ ಬಂಗಾರ, ಕಬ್ಬಿಣ- ಎಂಬ ಎರಡೂ ಇರುವ ವಸ್ತುಗಳಾಗಿವೆ. ಹೀಗಿರಬಾರದಾಗಿತ್ತೆಂಬುದೇ ನನ್ನ ಆಕ್ಷೇಪ.

ಉಪಾಧ್ಯಾಯ : - ಈ ನಿನ್ನ ಆಕ್ಷೇಪಣೆಯೇ ಸರಿಯಲ್ಲ. ದೃಷ್ಟಾಂತವು ಎಲ್ಲ ಅಂಶಗಳಲ್ಲಿಯೂ ಸಮಾನವಾಗಿರಬೇಕಾದದ್ದಿಲ್ಲ. ಎಲ್ಲ ಅಂಶದಲ್ಲಿಯೂ ಸಮಾನ

ವಾದರೆ ಅವರೆಡೂ ಒಂದೇ ಆಗುವದೇ ಹೊರತು ಒಂದು ದಾರ್ಷ್ಟಾಂತಿಕವೂ ಒಂದು ದೃಷ್ಟಾಂಶವೂ ಆಗುವದಿಲ್ಲ. ಹೀಗಿರುವದರಿಂದ ಉಪಾಧಿಯು ಬೇರೆ ಬೇರೆ ಜಾತಿಯದಿರಬಹುದೆಂಬ ಅಂಶವನ್ನು ದಾರ್ಷ್ಟಾಂತಿಕವಾಗಿಟ್ಟುಕೊಂಡು ಅದಕ್ಕೆ ದೃಷ್ಟಾಂತವಾಗಿ ಕಟ್ಟಿಗೊಳಪಡಿಸುವ ಬೇಡಿಯು ಬೇರೆ ಬೇರೆ ಜಾತಿಯ ಧಾತುಗಳದ್ದಿರಬಹುದೆಂದು ಹೇಳಿದ್ದಾರೆ. ಇಲ್ಲಿ ಸುತ್ತುದಾರಿಯೆಂಬ ದೋಷವೆಲ್ಲಿ?

ಶಿಷ್ಯ : - ಸರಿ, ಸರಿ. ಈಗ ಗೊತ್ತಾಯಿತು. ತಮ್ಮ ವಿವರಣೆಯಿಂದ ಇಲ್ಲದಿರುವಿಕೆಯು ಒಂದು ಪದಾರ್ಥವೆಂದೂ ಅದು ಉಪಾಧಿಯಾಗಬಹುದೆಂದೂ ತಿಳಿದು ಶ್ಲೋಕದ ಅರ್ಥವು ಸಮಂಜಸವಾಯಿತು, ಅಂತಃಕರಣದೊಡನೆ ಕೂಡಿರುವನೆಂಬ ಗುರ್ತಿನಿಂದ ಜೀವವನ್ನೂ ಅಂತಃಕರಣದೊಡನೆ ಕೂಡಿಲ್ಲದಿರುವ ಗುರ್ತಿನಿಂದ ಬ್ರಹ್ಮವನ್ನೂ ನಿಲುಕಿಸಿಕೊಳ್ಳಬಹುದೆಂಬ ತಾತ್ಪರ್ಯವು ಮನಸ್ಸಿನಲ್ಲಿ ಮೂಡಿತು.

ಉಪಾಧ್ಯಾಯ : - ನೀನು ತಿಳಿದುಕೊಂಡದ್ದು ಯೋಗ್ಯವಾಗಿದೆ.

ಓಂ ತತ್ಸತ್

*****

# 12. ಸಂಸಾರದಲ್ಲೇನು ಸಾರ?

'ಸಂಸಾರದಲ್ಲೇನು ಸಾರ?' ಎಂದೊಡನೆ ಏನೂ ಇಲ್ಲವೆಂಬ ಉತ್ತರವನ್ನು ಇವನು ಎದುರು ನೋಡುತ್ತಾನೆಂಬ ಯೋಚನೆಯುಂಟಾಗಬಹುದು. ಇದು ಸಹಜವಾದದ್ದು. ಏಕೆಂದರೆ; ಸಂಸಾರವನ್ನು ಸುಖಮಯವಾಗಿ ಮಾಡಿಕೊಳ್ಳಬೇಕೆಂದು ಹಗಲೂ ಇರುಳೂ ಯುಗಯುಗಾಂತರಗಳಿಂದ ಪ್ರಯತ್ನವು ನಡೆದಿದ್ದರೂ ಸಂಸಾರದಲ್ಲಿರುವ ಯಾವನಿಗೂ ತಾನು ಸುಖಿಯಾದೆನೆನಿಸಿದ್ದು ಕಂಡುಬಂದಿಲ್ಲ; ಕೆಲಕೆಲವು ಮಟ್ಟಿಗೆ ಸುಖವು ಕಂಡರೂ ಅದು ದುಃಖದಲ್ಲಿಯೇ ಕೊನೆಗಾಣುತ್ತ ಬಂದಿರು ವದು ಎಲ್ಲರ ಅನುಭವದಲ್ಲಿಯೂ ಇದೆ. ಹೀಗೆ ಎಲ್ಲರಿಗೂ ತಿಳಿದ ವಿಷಯವನ್ನು ಈ ಲೇಖನದ ಮೂಲಕ ಕಿವಿಯಲ್ಲಿ ಊದುವದೇನೆಂದು ಕೇಳಬಹುದು. ಈ ವಿಷಯದಲ್ಲಿ ಹಿಂದಿನ ಮಹನೀಯರ ಅನುಭವವನ್ನು ತೋರಿಸಿ ಅದಕ್ಕೆ ಅವರು ಕಂಡುಹಿಡಿದಿರುವ ಮದ್ದನ್ನು ಎತ್ತಿ ಮುಂದೆ ಹಿಡಿಯುವದೇ ಇದರ ಉದ್ದೇಶ. ಆ ಮದ್ದು ಸಾಮಾನ್ಯವಾಗಿ ಮದ್ದು ಜನರಿಗೆ ಯಾರಿಗೂ ಹೊಳೆಯುವದಿಲ್ಲವಾದ್ದರಿಂದ ಅದನ್ನು ಬೆಳಕಿಗೆ ತರುವದು ಅಗತ್ಯವಾಗಿರುವದು. ಆದ್ದರಿಂದ ಈ ಲೇಖನದಲ್ಲಿ ನನ್ನ ತಲೆಯ ಕಲ್ಪನೆಗಳು ಹೆಚ್ಚಾಗಿರದೆ ಶ್ರುತಿಸ್ಮೃತಿಗಳ ಸಮ್ಮೇಲನವಾಗಿರುವಂತೆ ಅವುಗಳ ತಾತ್ಪರ್ಯಗಳನ್ನು ಸಾಲಾಗಿ ಪೋಣಿಸಿ ಅವು ಎದ್ದು ಕಾಣುವಂತೆ ಮಾಡುವೆನು. ವೇದದ ಮಾತುಗಳಲ್ಲಿ ಹುಸಿಯ ಸೆಲೆ ಇಲ್ಲದ್ದರಿಂದ ಈ ಲೇಖನದ ಅಭಿಪ್ರಾಯಗಳು, ಎಲ್ಲರಿಗೂ ಹೆಚ್ಚು ಆದರಣೀಯಗಳಾಗಿರುವವು.

ಇಂದ್ರಿಯಗಳು ಮತ್ತು ವಿಷಯಗಳ ಸೇರಿಕೆಯು ಸುಖವನ್ನೂ ದುಃಖವನ್ನೂ ಕೊಡತಕ್ಕವುಗಳು. ಬಂದುಹೋಗತಕ್ಕವುಗಳು, ನೆಲೆಯಾಗಿ ನಿಲ್ಲತಕ್ಕವುಗಳಲ್ಲ; (ಭ.2-14). ಈ ಸೇರಿಕೆಯ ಸುಖವು ಮೊದಮೊದಲು ಅಮೃತದಂತಿದ್ದ ಬಲವನ್ನೂ ವೀರ್ಯವನ್ನೂ ರೂಪವನ್ನೂ ಪ್ರಜ್ಞೆಯನ್ನೂ ಹಣವನ್ನೂ ಉತ್ಸಾಹವನ್ನೂ ಹಾಳುಮಾಡಿ ಅಧರ್ಮದಿಂದುಂಟಾಗುವ ನರಕಕ್ಕೆ ಗುರಿಮಾಡುವದರಿಂದ ಕೊನೆಗೆ ವಿಷದಂತಾಗುವದು. (ಭ.[1]18-38ಭಾ)[2] ಇಂಥ ಸುಖದ ಸವಿಗೆ ಮರುಳಾಗಿ ಮುಖವನ್ನು ಒಮ್ಮೆ ಅರಳಿಸಿಕೊಳ್ಳುತ್ತ ಒಮ್ಮೆ ಸುಕ್ಕಿಸಿಕೊಳ್ಳುತ್ತ ವ್ಯವಹರಿಸುತ್ತಿರುವದೇ ಸಂಸಾರ.

---

1. ಭ= ಭಗವದ್ಗೀತೆ. 2. ಭಾ=ಶಾಂಕರ ಭಾಷ್ಯ.

ಇದೊಂದು ಬಗೆಯ ಅಶ್ವತ್ಥವೃಕ್ಷ. ಮಾಯಾಶಕ್ತಿಯಿಂದ ಕೂಡಿದ ಬ್ರಹ್ಮವೇ ಇದರ ಬೇರು. ಅದು ಸೂಕ್ಷ್ಮವಾದ್ದರಿಂದಲೂ ಕಾರಣವಾದ್ದರಿಂದಲೂ ನೆಲೆಯಾಗಿರುವಂಥದ್ದಾದ್ದರಿಂದಲೂ ಮೇಲುಗಡೆಗಿರುವದೆನಿಸುವದು. ಬುದ್ಧಿ, ಮನಸ್ಸು-ಮೊದಲಾದವುಗಳೆ ಅದರ ಕೊಂಬೆಗಳು. ಅವು ಕೆಳಗಡೆಗಿರುವವು. ಇದು ನಾಳೆಗಿದ್ದೀತೋ ಇಲ್ಲವೋ ಎನಿಸುವುದರಿಂದ ಅಶ್ವತ್ಥವೆನಿಸುವದು. ಈ ಸಂಸಾರವೆಂಬ ಅರಳೀಮರವು ಎಂದಿನಿಂದಲೋ, ಎಡೆಬಿಡದೆ ಬೆಳೆದುಕೊಂಡು ಬಂದಿದೆ. ಇದಕ್ಕೆ ವೇದಗಳೇ ಎಲೆಗಳು. ಏಕೆಂದರೆ; ಎಲೆಗಳು ಮರವನ್ನು ಕಾಪಾಡುವಂತೆ ವೇದಗಳು ಧರ್ಮದ ಮತ್ತು ಅಧರ್ಮದ ಫಲಗಳನ್ನು ತೋರಿಸುತ್ತ ಸಂಸಾರವನ್ನು ಬೆಳೆಸಿಕೊಂಡು ಬರುವವು. ಆ ಫಲಗಳ ಸೆಳೆತಕ್ಕೆ ಸಿಕ್ಕಿ ಮನುಷ್ಯನು ಸಂಸಾರದಲ್ಲಿ ಮುಂದುವರಿಯುವನು. ಮನುಷ್ಯನ ತಿಳಿವಳಿಕೆಗೂ ಕರ್ಮಕ್ಕೂ ತಕ್ಕ ಫಲವಾಗಿ ಕೆಳಗಡೆಯ ಮನುಷ್ಯಜನ್ಮವನ್ನು ಮೊದಲು ಮಾಡಿಕೊಂಡು ಮೇಲುಗಡೆಯ ಬ್ರಹ್ಮಲೋಕದವರೆಗೂ ಇದರ ಕೊಂಬೆಗಳು ಕೆಳಗಡೆಗೂ ಮೇಲುಗಡೆಗೂ ಹರಡಿಕೊಂಡಿರುವವು. ಇವುಗಳೆಲ್ಲ ಸತ್ತ್ವ, ರಜ, ತಮ- ಎಂಬ ಗುಣಗಳಿಂದ ಮೈದುಂಬಿಕೊಳ್ಳುತ್ತಿರುವವು. ಸದ್ದು, ಸೋಂಕು-ಮೊದಲಾದ ವಿಷಯಗಳೇ ದೇಹವೆಂಬ ಕೊಂಬೆಗಳಲ್ಲಿ ಮೊಳೆತ ಚಿಗುರುಗಳು. ಈ ಮರದ ತಾಯಿಬೇರನ್ನು ಬ್ರಹ್ಮವೆಂದು ಮೇಲೆ ಹೇಳಿದ್ದಾಗಿದೆಯಷ್ಟೆ. ಧರ್ಮದಲ್ಲಿಯೋ ಅಧರ್ಮದಲ್ಲಿಯೋ ಮುಂದುವರಿಸುವಂಥ ಪ್ರೇಮ, ಹಗೆತನ- ಮೊದಲಾದ ವಾಸನೆಗಳು ಕೆಳಗಡೆಗೆ ಇಳಿದಿರುವ ಮರಿಬೇರುಗಳು. ಈ ಮರವನ್ನು ನೋಡಬೇಕೆಂದರೆ ಸಿಕ್ಕುವದಿಲ್ಲ. ಏಕೆಂದರೆ; ಇದು ಕನಸಿನಂತೆಯೋ ಬಿಸಿಲದೊರೆಯಂತೆಯೋ ಆಕಾಶದ ಅರಮನೆಯಂತೆಯೋ ಇರುವದು. ತೋರಿ ಹಾರುವ ಇದಕ್ಕೆ ತುದಿ ಮೊದಲುಗಳು ಇಲ್ಲ; ನಡುವೆಯೂ ಇಲ್ಲ. ಇದರ ಬೇರುಗಳೆಲ್ಲ ಬಲವಾಗಿ ಆಳಕ್ಕೆ ಇಳಿದುಕೊಂಡಿರುವವು(ಭ.15-1, 2,3,ಭಾ)

ಇದರ ವರ್ಣನೆಯ ಇನ್ನೊಂದು ಬಗೆಯನ್ನು ನೋಡಿ. ಇದು ಕತ್ತರಿಸಿ ಹೋಗುವ ಹುಟ್ಟುಗುಣವಾದ್ದರಿಂದ ಮರಕ್ಕೆ ಹೋಲುವದು. ಇದು ಗಳಿಗೆಗೊಂದೊಂದು ಬಗೆಯಾಗುವದು; ಬಾಳೆಯಕಂಬದಂತೆ ಹುರುಳಿಲ್ಲದ್ದು; ಅನೇಕರು ಅನೇಕ ಬಗೇಯಾಗಿ ಹೇಳುವ ಹಾಗಿದ್ದು ನಿಜವನ್ನು ಹುಡುಕಿದರೆ ಇದು ಹೀಗೆಯೇ ಸರಿಯೆಂದು ತಿಳಿಯುವದಕ್ಕಾಗದಿರುವದು; ಅಜ್ಞಾನ, ಬಯಕೆ; ಕರ್ಮ- ಎಂಬ ಕಣ್ಣಿಗೆ ಕಾಣದ ಬೀಜದಿಂದ ಹುಟ್ಟಿದ್ದು, ಸೂಕ್ಷ್ಮದೇಹಗಳ ಒಟ್ಟಿನ ಅಭಿಮಾನಿಯಾದ ಹಿರಣ್ಯಗರ್ಭನೇ ಇದರ ಮೊಳಕೆ. ಬಯಕೆಗಳೇ ಇದನ್ನು ಬೆಳೆಸುವ ನೀರು. ಬುದ್ಧಿ,

ಇಂದ್ರಿಯಗಳು, ವಿಷಯಗಳು- ಇವೇ ಚಿಗರುಗಳು. ಯಜ್ಞ, ದಾನ, ತಪಸ್ಸು- ಮೊದಲಾದ ಕ್ರಿಯೆಗಳೇ ಇದರ ಹೂಗಳು. ಸುಖ ದುಃಖಗಳ ವೇದನೆಯೇ ಇದರ ರಸ. ಇದು ಬ್ರಹ್ಮನೇ ಮೊದಲಾದ ಪಕ್ಷಿಗಳು ಮಾಡಿದ ಲೋಕಗಳೆಂಬ ಗೂಡುಳ್ಳದ್ದು. ಪ್ರಾಣಿಗಳು, ಸುಖದಿಂದಲೋ ದುಃಖದಿಂದಲೋ ನಗುವ, ಅಳುವ, ಚಪ್ಪಾಳೆಹೊಡೆಯುವ ಮತ್ತು ಬಾಯಿ ಬಡಿದುಕೊಳ್ಳುವ ಗದ್ದಲವೇ ಈ ಮರದ ಸದ್ದು. ಬಯಕೆ ಮತ್ತು ಕರ್ಮಗಳೆಂಬ ಬಿರುಗಾಳಿಗಳಿಂದ ಇದು ಯಾವಾಗಲೂ ಹೊಯ್ದಾಡುತ್ತಿರುವದು. ಸ್ವರ್ಗ, ನರಕ, ಪಶು, ಪಿಶಾಚಿ- ಮೊದಲಾದ ಜನ್ಮಗಳೇ ಇದರ ಕೊಂಬೆಗಳು (ಕ.[1]-15-1ಭಾ)

ಇದು ಹೀಗಿದ್ದರೂ ಇದರ ಮೇಲೆ ಯಾರಿಗೂ ಬೇಸರ ಉಂಟಾಗುವದಿಲ್ಲ. ಇದಕ್ಕಿಂತ ಹೆಚ್ಚಿನ ಸುಖದ ಸುಳಿವು ತಿಳಿಯದಿರುವದೇ ಇದಕ್ಕೆ ಕಾರಣ. ಅದು ಯಾರ ಮನಸ್ಸಿಗೆ ಹೊಳೆಯುತ್ತದೋ ಅವರು ಈ ಮರವನ್ನು ಎಡಗಾಲಿಂದೊದೆ ಯದೆ ಬಿಡುವದಿಲ್ಲ. ಇದು ಸರ್ವಸಾಮಾನ್ಯವಾಗಿ ಎಲ್ಲರಿಗೂ ಹೊಳೆಯದಿದ್ದರೂ ಪುಣ್ಯಶಾಲಿಗಳಿಗೆ ಹೊಳೆಯುವದು. ತಾನು ಬರಿಗೈಯಾಗುವಷ್ಟು ದಾನಮಾಡಿ ವಿಶ್ವಜಿತ್ತೆಂಬ ಯಾಗವನ್ನು ಮಾಡಿ ಅನ್ನದಾನದಿಂದ ಹೆಸರುಕೊಂಡ ವಾಜಶ್ರವನ ಸತ್ಪುತ್ರನಾದ ನಚಿಕೇತನಿಗೆ ಯಮನು ಒಂದಾನೊಂದು ಪ್ರಸಂಗಕ್ಕೆ ಕಟ್ಟುಬಿದ್ದು ಮೂರು ವರಗಳನ್ನು ಕೊಟ್ಟನು. ಮೂರನೆ ವರವನ್ನು ಕೇಳುವ ಸಮಯ ಒದಗಿದಾಗ ಅವರಿಬ್ಬರಿಗೂ ನಡೆದ ಮಾತುಗಾರಿಕೆಯು ಈ ಸಂದರ್ಭಕ್ಕೆ ಚೆನ್ನಾಗಿ ಒಪ್ಪುತ್ತದೆ.

ನಚಿಕೇತ: - ಮನುಷ್ಯನು ಸತ್ತ ಮೇಲೆ ಅವನ ಶರೀರ, ಇಂದ್ರಿಯ, ಮನಸ್ಸು, ಬುದ್ಧಿ, ಇವುಗಳಿಗೆಲ್ಲ ಬೇರೆಯಾಗಿ ಮತ್ತೊಂದು ದೇಹಕ್ಕೆ ಹೋಗಿ ಸೇರಿಕೊಳ್ಳುವ ಆತ್ಮನೆಂಬ ವಸ್ತುವೊಂದುಂಟೆಂದು ಕೆಲವರೂ, ಇಲ್ಲವೆಂದು ಕೆಲವರೂ, ಹೇಳುವರು. ಇದರ ನೆಲೆ ನನಗೆ ತಿಳಿಯದಾಗಿದೆ. ಮುಂದಿನ ನನ್ನ ಒಳ್ಳೆ ಅಥವಾ ಕೆಟ್ಟಗತಿಯು ಈ ತಿಳಿವಳಿಕೆಯ ಬಾಲವನ್ನು ಹಿಡಿದುಕೊಂಡಿರುವಂತೆ ತೋರುತ್ತದೆ. ಅಂಥದ್ದೊಂದು ಆತ್ಮವಿದ್ದರಷ್ಟೆ, ನಾನು ಅದರ ಹಿತಕ್ಕಾಗಿ ಒಳ್ಳೆಯ ಕರ್ಮದಲ್ಲಿ ತೊಡಗಬೇಕಾಗುವದು? ಆದ್ದರಿಂದ ಇದನ್ನು ನನಗೆ ತಿಳಿಸು (ಕ.1-20)[1]

---

1. ಕ = ಕಠೋಪನಿಷತ್ತು.

ಯಮ : - ಅಪ್ಪ, ಹಿಂದೆ ದೇವತೆಗಳು ಕೂಡ ಈ ವಿಷಯದಲ್ಲಿ ಸಂಶಯವನ್ನು ಹೊಂದಿದ್ದರು. ಇದು ಬಹು ಸೂಕ್ಷ್ಮವಾದ ವಿಷಯ. ಎಷ್ಟು ಬಾರಿ ಕೇಳಿದರೂ ಸಾಮಾನ್ಯನಿಗೆ ಎಂದಿಗೂ ಚೆನ್ನಾಗಿ ತಿಳಿಯತಕ್ಕದ್ದಲ್ಲ. ಆದ್ದರಿಂದ ಸಂಶಯಕ್ಕೆ ದಾರಿ ಇಲ್ಲದ ಇನ್ನೊಂದನ್ನು ಕೇಳು. ಹಣಗಾರನು ಸಾಲಗಾರನನ್ನು ಪೀಡಿಸುವಂತೆ ನನ್ನನ್ನು ಈ ವಿಷಯದಲ್ಲಿ ಪೀಡಿಸಬೇಡ. (ಕ. 1-21).

ನಚಿಕೇತ : - ಓಹೋ, ಈ ವಿಷಯದಲ್ಲಿ ದೇವತೆಗಳೂ ಸಂಶಯಗೊಂಡು ವಿಚಾರಮಾಡಿದರಲ್ಲವೆ? ನೀನು ಅದನ್ನು ಚೆನ್ನಾಗಿ ತಿಳಿಸಬಲ್ಲವನು. ನಿನ್ನ ಹಾಗೆ ಚೆನ್ನಾಗಿ ತಿಳಿಸಬಲ್ಲ ಪಂಡಿತರು ಬೇರೆ ಯಾರೂ ಇಲ್ಲ. ನಾನು ಕೇಳುವದು ಶಾಶ್ವತ ಸುಖಕ್ಕೆ ದಾರಿಯಾದದ್ದು. ಇದಕ್ಕೆ ಸಮಾನವಿನ್ನೊಂದಿಲ್ಲ. ಉಳಿದವುಗಳೆಲ್ಲ ಮೂರುಗಳಿಗೆಯ ಬಾಳಿನ ಸುಖವನ್ನು ಮಾತ್ರ ಕೊಡತಕ್ಕವು. (ಕ.1-22).

ಯಮ : - ಮಗು, ನೂರು ವರ್ಷ ಬಾಳುವಂಥ ಮಕ್ಕಳು ಮುಮ್ಮಕ್ಕಳನ್ನು ಬಯಸು; ಬೇಕಾದಷ್ಟು ದನಕರುಗಳನ್ನೂ ಆನೆಗಳನ್ನೂ ಹಣಗಳನ್ನೂ ಕುದುರೆಗಳನ್ನೂ ವಿಸ್ತಾರ ವಾದ ಭೂಮಂಡಲದ ಏಕಾಧಿಪತ್ಯವನ್ನೂ ಬಯಸು; ತಾನು ಬೇಗ ಸಾಯುವ ವನಾದರೆ ಇವೆಲ್ಲ ವ್ಯರ್ಥವಾದ್ದರಿಂದ ನಿನಗೆ ಎಷ್ಟು ಕಾಲ ಬದುಕಬೇಕೆನಿಸುವದೋ ಅಷ್ಟು ಕಾಲ ಬಲವಾದ ಶರೀರವನ್ನೂ ಪುಷ್ಟಿಯಾದ ಇಂದ್ರಿಯಗಳನ್ನೂ ಹೊಂದಿರು. (ಕ.1-23). ಇದಕ್ಕೆ ಸಮವೆಂದು ನಿನಗೆ ಇನ್ನೇನು ತೋರಿದರೂಬಯಸು;ಬೇಕಾದಷ್ಟು ಬಂಗಾರ, ರತ್ನ , ಹಣ - ಇವುಗಳನ್ನೂ ಇವುಗಳೊಡನೆ ಬಹುಕಾಲ ಬದುಕಿರುವದನ್ನೂ ಬಯಸು; ಬಹಳ ಹೇಳುವದೇನು! ಈ ದೊಡ್ಡ ಜಗತ್ತಿಗೆಲ್ಲ ಅರಸಾಗು; ಮನುಷ್ಯನಿಗೆ ಮಾತ್ರವಲ್ಲದೆ ದೇವತೆಗಳಿಗೆ ದೊರೆಯತಕ್ಕ ಬಯಕೆಗಳು ಕೂಡ ನಿನಗೆ ದೊರೆಯು ವಂತೆ ನಾನು ಮಾಡುತ್ತೇನೆ; ನಾನು ದೇವವರ್ಗದವನು. ನಾನು ಮನಸ್ಸಿನಲ್ಲಿ ಎಣಿಸಿದ್ದು ನಡೆದೇ ತೀರುವದು (ಕ. 1-24). ಮನುಷ್ಯಲೋಕದಲ್ಲಿ ದೊರೆಯಲಾಗದಂಥ ಬಯಕೆಗಳನ್ನು ಕೂಡ ಬೇಕಾದಹಾಗೆ ಬಯಸು; ಪುರುಷರನ್ನು ಮೋಹಗೊಳಿಸುವ ಈ ದೇವಲೋಕದ ಅಪ್ಸರ ಸ್ತ್ರೀಯರು ಈ ತೇರುಗಳು, ಈ ಮಂಗಲ ವಾದ್ಯಗಳು- ಇವೆಲ್ಲ ನಮ್ಮಂಥವರ ಅನುಗ್ರಹದ ಹೊರತು ಮನುಷ್ಯ ಲೋಕದವರಿಗೆ ದೊರೆಯ ತಕ್ಕವುಗಳಲ್ಲ; ನಾನು ಇವುಗಳನ್ನೆಲ್ಲ ಕೊಡುತ್ತೇನೆ; ಇವುಗಳಿಂದ ನೀನು ಸೇವೆಯನ್ನು ತೆಗೆದುಕೊ; ಈ ಸ್ತ್ರೀಯರಿಂದ ನೀನು ಕಾಲು ತೊಳಸಿಕೊ; ನಚಿಕೇತ, ಕಾಗೆಯ ಹಲ್ಲನ್ನು ಎಣಿಸ ಹೋಗುವಂತೆ ಸತ್ತಮೇಲೆ ಆತ್ಮವೆಂಬುದೊಂದುಂಟೋ ಇಲ್ಲವೋ? - ಎಂಬ ಪ್ರಶ್ನೆಯ ಗಂಟು ಬಿಚ್ಚೆಂದು ಮಾತ್ರ ನನ್ನನ್ನು ಕೇಳಬೇಡ (ಕ.1-25).

[ಇರಲಿ. ಆತ್ಮನೆಂಬ ವಸ್ತುವಿನ ವಿಚಾರದ ಬಿಕ್ಕಟ್ಟನ್ನು ವರ್ಣಿಸುವದಕ್ಕೆ ಇದು ಸಮಯವಲ್ಲ. ವಿಷಯಗಳ ಮತ್ತು ಇಂದ್ರಿಯಗಳ ಸೇರಿಕೆಯಿಂದಾಗುವ ಸುಖದಲ್ಲಿ ಹುರುಳಿಲ್ಲವೆಂಬುದು ಈಗ ನಡೆದಿರುವ ಪ್ರಸಂಗ. ನಚಿಕೇತನ ಮುಂದಿನ ಮಾತು ಈ ಅಭಿಪ್ರಾಯವನ್ನು ಹೊರಗೆಡಹುವದು.]

**ನಚಿಕೇತ :** - ಅಯ್ಯ, ನೀನು ಹೇಳಿದ ಸುಖಸಾಧನಗಳೆಲ್ಲ ನಾಳೆಗಿರುವವೊ ಇಲ್ಲವೊ ಎಂದು ಸಂಶಯಗೊಳ್ಳುವದಕ್ಕೆ ತಕ್ಕವುಗಳು. ಸ್ವಾಮಿ, ಮೃತ್ಯುವೆ, ಇವೆಲ್ಲ ಇಂದ್ರಿಯಗಳ ಹೊಗರನ್ನು ಹೋಗಲಾಡಿಸುವವು ಅಪ್ಸರಸ್ತ್ರೀಯರೇ ಮೊದಲಾದ ಭೋಗಗಳು ನಮಗೆ ಕೆಡುಕೇ ಸರಿ. ಏಕೆಂದರೆ ಇವು ವೀರ್ಯ, ಧರ್ಮ, ಪ್ರಜ್ಞೆ, ತೇಜಸ್ಸು- ಇವುಗಳನ್ನೆಲ್ಲ ನಾಶಗೊಳಿಸುವವು. ಬಹುಕಾಲ ಬದುಕುವಂತೆ ಮಾಡುತ್ತೇನೆಂದಯಷ್ಟೆ. ಬ್ರಹ್ಮನ ಆಯಸ್ಸು ಕೂಡ ಕಡಿಮೆಯೆ; ಇನ್ನು ನಮ್ಮದರ ಪಾಡೇನು! ಆದ್ದರಿಂದ ಈ ತೇರುಗಳು, ವಾದ್ಯಗಳು, ಕುಣಿತಗಳು- ಇವೆಲ್ಲ ನಿನಗೇ ಇರಲಿ (ಕ.1-26) ಮನುಷ್ಯನಿಗೆ ಹಣವನ್ನು ಕೊಟ್ಟು ತೃಪ್ತಿಗೊಳಿಸುವದಾಗುವುದಿಲ್ಲ. ಸುಖಕ್ಕಾಗಿ ಜನರು ಹಣವನ್ನು ಗಳಿಸುವದಕ್ಕೇ ಹೆಣಗುವರಾದರೂ ಅದರಿಂದ ಅನರ್ಥವಾಗುವದು ಕಂಡುಬಂದಿದೆಯೇ ಹೊರತು ಸಾಕೆನಿಸಿ ಹಣದಿಂದ ಯಾರಿಗೂ ತೃಪ್ತಿಯಾದದ್ದು ಕಂಡಿಲ್ಲ. ನಮಗೆ ಹಣದ ಬಯಕೆ ಇದ್ದರೆ ನಿನ್ನ ದರ್ಶನದ ಫಲವಾಗಿಯೇ ಅದು ನಮಗೆ ದೊರೆಯುವದು. ಬಹುಕಾಲ ಬದುಕುವ ಮಾತೂ ಅಷ್ಟೇ. ನೀನು ನಮ್ಮ ಮೇಲಧಿಕಾರಿಯಾದ ಯಮನಾಗಿರುವ ವರೆಗೂ ನಾವು ಬದುಕಬಹುದು. ನಿಮ್ಮ ದರ್ಶನವನ್ನು ಪಡೆದ ಮನುಷ್ಯನು ಬೇಗ ಸಾಯುವವನೂ ದರಿದ್ರನೂ ಹೇಗೆ ಆದಾನು? ಆದ್ದರಿಂದ ನನಗೆ ಆತ್ಮವಿಷಯವನ್ನೇ ಹೇಳಬೇಕು. (ಕ.1-26). ಮುಪ್ಪೂ ಸಾವೂ ಇಲ್ಲದಂಥವರ ಬಳಿಗೆಬಂದು ಅವರಿಂದ ಪಡೆಯಬಹುದಾದ ಹೆಚ್ಚಿನ ಪ್ರಯೋಜನವನ್ನರಿತವನು ಮುಪ್ಪೂ ಸಾವೂ ಉಳ್ಳ ಅವಿವೇಕಿಗಳು ಬೇಡುವಂತೆ ಮೂರು ದಿನದ ಬಾಳಿನ ಮಕ್ಕಳಿಗೂ ಹಣಕ್ಕೂ ಏಕೆ ಬಾಯಿನೀರು ಸುರಿಸುವನು? ಹುರುಳಿಲ್ಲವೆಂದು ತಿಳಿದದ್ದನ್ನು ವಿವೇಕಿಯು ಬಯಸುವುದಿಲ್ಲ. ಸಾಮಾನ್ಯಜನರು ಮಕ್ಕಳ ವಿಷಯಕ್ಕೂ ಹಣದ ವಿಷಯಕ್ಕೂ ಮರುಳಾದರೂ ನಾನು ಆ ಬಲೆಗೆ ಬೀಳಲಾರೆನು. ಈ ಅಪ್ಸರಸ್ತ್ರೀಯರೇ ಮೊದಲಾದ ಸಾಧನಗಳ ಬಣ್ಣವು ಹೀಗೆಯೇ ಯಾವಾಗಲೂ ಇರುವದಿಲ್ಲ (ಕ.1-28). ಆದ್ದರಿಂದ ಮೂರು ದಿನದ ಬಾಳಿನ ಸುಖಸಾಧನಗಳಿಂದ ನನ್ನನ್ನು ಒಳಗುಮಾಡಿಕೊಳ್ಳುವದಕ್ಕೆ ಯತ್ನಿಸಬೇಡ. ನಾನು ಕೇಳಿದ ಪರಲೋಕ ವಿಷಯಕವಾದ ವಿಚಾರವನ್ನು ನನಗೆ ತಿಳಿಸು. ಇಂಥ

ಗಂಭೀರವಾದ ವಿಚಾರವನ್ನು ಬಿಟ್ಟು ಅವಿವೇಕಿಗಳು ಕೇಳುವ ವರವನ್ನು ನಚಿಕೇತನು ಕನಸಿನಲ್ಲಿಯೂ ಮನಸ್ಸಿಗೆ ತಂದುಕೊಳ್ಳುವವನಲ್ಲ. (ಕ.1-29)

ಹೀಗೆ ಪೂರ್ವಿಕರಾದ ಮಹಾಮಹಾವಿವೇಕಿಗಳ ಅಭಿಪ್ರಾಯವಿರುವದರಿಂದ ವಿಷಯಗಳ ಮತ್ತು ಇಂದ್ರಿಯಗಳ ಸೇರಿಕೆಯಿಂದಾಗುವ ಸುಖವು ಸಾರವಿಲ್ಲವಾದ್ದರಿಂದ ಎಷ್ಟು ಮಾತ್ರವೂ ಬಯಸತಕ್ಕದಲ್ಲವೆಂದು ಸರ್ವಾನುಭವಸಿದ್ಧವಾಯಿತು. ಈ ರೀತಿಯಲ್ಲಿ ನಮ್ಮ ಅನುಭವವನ್ನು ದೊಡ್ಡವರ ಅನುಭವದೊಡನೆ ಒರೆ ಹಚ್ಚಿ ನೋಡಿದ್ದಾಯಿತು. ವೇದವು ಕೂಡ ಸಂಸಾರದಲ್ಲಿ ಹುರುಳಿಲ್ಲವೆಂದಮೇಲೆ ಇನ್ನು ಮಾತಿಲ್ಲ.

ಇನ್ನು ಇದಕ್ಕೆ ತಕ್ಕ ಮದ್ದಿನ ವಿಚಾರ, ಕಳ್ಳಬಾಯಾರಿಕೆಯನ್ನು ಹುಟ್ಟಿಸುವ ವಿಷಯಸುಖದ ಬಾಯಾರಿಕೆಯ ಬೇನೆಗೆ ವಿಷಯಸುಖದ ಸಮೃದ್ಧಿಯನ್ನೆ ಸಾಧನವಾಗಿ ಹೇಳುವವರಿರುವರೇ ಹೊರತು ನಿಜವಾಗಿ ಆ ರೋಗವನ್ನಡಗಿಸುವ ಸರಿಯಾದ ಚಿಕಿತ್ಸೆಯು ಯಾರ ಬುದ್ಧಿಗೂ ಹೊಳೆಯುವದಿಲ್ಲ. ಈ ವಿಷಯದಲ್ಲಿ ನಾವೆಲ್ಲರೂ ಕೈಸಾರಿಬಿಟ್ಟವರಾಗಿದ್ದೇವೆ. ಆದರೆ ವೇದವು ಮಾತ್ರ ಆ ವಿಚಾರವನ್ನೊಳಗೊಂಡಿ ಇರುವದು. ಆ ಚಿಕಿತ್ಸೆಯನ್ನು ಮಾಡಿ ಗುಣವನ್ನು ಹೊಂದಿ ಹಾಯಾಗಿಇರುವವರು ಈಗಲೂ ಇದ್ದಾರೆ. ಆ ಮದ್ದೇ ಸಂಸಾರದಲ್ಲಿರುವ ಸಾರ - ಆದ್ದರಿಂದ ಸಂಸಾರದಲ್ಲಿ ಸಾರವಿಲ್ಲವೆಂದಲ್ಲ. ಇದೆ; ಅದನ್ನು ತಿಳಿಯದೆ ಸಂಸಾರದ ವಿಷಯಮಯವಾದ ಭಾಗಕ್ಕೆ ನಾವು ಮೋಹಗೊಂಡಿದ್ದೇವೆ. ಸಾರವಲ್ಲದ ಭಾಗವನ್ನು ಸಾರವೆಂದು ತಿಳಿಯ ಬೇಡಿರೆಂದು ಈ ಲೇಖನವು ಎಚ್ಚರಗೊಳಿಸುತ್ತದೆ. ಕೈಮಸಗೆಂದು ಹೊಟ್ಟೆಗೊಂದು ವಿಷವನ್ನು ಕೊಡುತ್ತಾರಂತೆ. ಅದು ಹೊಟ್ಟೆಗೆ ಹೋಗುವ ಮುಂಚೆ ಯಾಲಕ್ಕಿಯನ್ನು ತಿಂದಿದ್ದರೆ ಆ ವಿಷವೇನೂ ಮಾಡುವದಿಲ್ಲವಂತೆ. ಹಾಗೆ ಈಗ ಹೇಳುವ ಮದ್ದನ್ನು ಸೇವಿಸಿ ಆಮೇಲೆ ವಿಷಪ್ರಾಯವಾದ ವಿಷಯಗಳನ್ನು ಸೂರೆ ಮಾಡಿಕೊಂಡು ಎಷ್ಟು ಭೋಗಿಸಿದರೂ ಅದರ ವಿಷದ ವೇಗದಿಂದ ಮುಖವನ್ನು ಸುಕ್ಕಿಸಬೇಕಾದುದಿಲ್ಲ. ಆದ್ದರಿಂದ ನಾವು ಈ ಮದ್ದನ್ನು ಸೇವಿಸಿ ಸುಖಿಗಳಾಗಿರೆಂದು ಹೇಳತಕ್ಕವರೇ ಹೊರತು ವಿಷಯಗಳನ್ನು ದೂರಕ್ಕೆ ತಳ್ಳಿ ಕೈಕೊಡವಿ ತಲೆಯ ಮೇಲಿಟ್ಟುಕೊಂಡು ನಿಂತುಕೊಳ್ಳಿರೆಂದು ಹೇಳುವದಿಲ್ಲ. ಈ ಮದ್ದು ಸಾಮಾನ್ಯಜನರ ಕನವರಿಕೆಯ ಮಾತಿನದಾಗಿರದೆ ಮಹಾಮಹಾಜ್ಞಾನಿಗಳ ಹೃದಯದಲ್ಲಿ ಸ್ಫೂರ್ತಿಯಾದದ್ದಾಗಿದೆ. ಇದನ್ನರಿತು ನಮ್ಮ ಮಾತಿನ ಕಡೆಗೆ ಚಿತ್ತವಿಡಿ.

*****

# ಪರಿಶಿಷ್ಟ

## ಅಧ್ಯಾತ್ಮ ಪ್ರಕಾಶ ಪತ್ರಿಕೆಯಿಂದ ಸಂಗ್ರಹಿಸಿದ ಲೇಖನಗಳ ವಿವರ

| ಸಂಖ್ಯೆ | ವಿಷಯ | ಸಂಪುಟ | ಸಂಚಿಕೆ | ಇಸವಿ |
|---|---|---|---|---|
| 1. | ಹೊಸಕೆರೆ ಚಿದಂಬರಯ್ಯನವರು (ಶ್ರೀಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು) | 10 | 8 | 1939 |
| 2. | ಭರತಖಂಡದ ಮುಖ್ಯ ಧನ | 1 | 1 | 1923 |
| 3. | ಅಪ್ಪಯ್ಯನವರ ವೃತ್ತಾಂತ (ಪೂರ್ವಾರ್ಧ) | 1 | 3 | 1923 |
| | ಅಪ್ಪಯ್ಯನವರ ವೃತ್ತಾಂತ (ಉತ್ತರಾರ್ಧ) | 1 | 4 | 1923 |
| 4. | ಶ್ರೀಸಮರ್ಥ ರಾಮದಾಸರ ದಾಸಬೋಧೆಯ ಮಹಿಮೆ | | | |
| | ಸದ್ಗುರು ಸ್ತವನ -1 | 1 | 7 | 1923 |
| | ಸದ್ಗುರು ಸ್ತವನ -2 | 1 | 8 | 1923 |
| | ತತ್ತ್ವಜ್ಞಾನ -3 | 1 | 10 | 1923 |
| | ನರಜನ್ಮ - 4 | 1 | 10 | 1923 |
| 5. | ಸದ್ಗುರುವಿನ ಮಹತ್ತ್ವ | | | |
| | ಸದ್ಗುರುವಿನ ಮಹತ್ತ್ವ -1 | 2 | 1 | 1924 |
| | ಸದ್ಗುರುವಿನ ಮಹತ್ತ್ವ -2 | 2 | 2 | 1924 |
| | ಗುರುವಿನ ಗುರ್ತನ್ನು ತಿಳಿಯುವ ಅವಶ್ಯಕತೆ | 2 | 4 | 1924 |
| 6. | ಜಗತ್ತಿನಲ್ಲಿರುವ ದೇವರ ಸ್ವರೂಪ | 3 | 1 | 1931 |
| 7. | ರಂತಿದೇವ (ಪುರಾಣದ ಝರಿ)-1 | 3 | 2 | 1931 |
| | ರಂತಿದೇವ (ಪುರಾಣದ ಝರಿ)-2 | 3 | 3 | 1931 |
| 8. | ನಮನ ಮತ್ತು ಮನನ | 3 | 5 | 1932 |
| 9. | ಶ್ರೀಮದವಧೂತ ಬೋಧಾನಂದ ಸರಸ್ವತೀಸ್ವಾಮಿಗಳು | 3 | 6 | 1932 |
| 10. | ಶಾಂತಾದೇವಿಯ ಸಂಸಾರ | | | |
| | (ಶಾಂತೆಯ ಮನೋಭಾವ) -1 | 3 | 7 | 1932 |
| | (ನವನಾಗರಿಕ ಅಭಿರುಚಿ)-2 | 3 | 8 | 1932 |
| | (ಶಾಂತೆಗೆ ತಕ್ಕ ಗಂಡ)-3 | 3 | 9 | 1932 |
| | (ಆತ್ಮಾರಾಮನ ವೈರಾಗ್ಯ)-4 | 3 | 10 | 1932 |
| | (ಶಾಂತೆಯ ಇಷ್ಟಸಿದ್ಧಿ)-5 | 3 | 11 | 1932 |
| 11. | ಇಲ್ಲದಿರುವಿಕೆಯೆಂಬ ಉಪಾಧಿ | 4 | 3 | 1932 |
| 12. | ಸಂಸಾರದಲ್ಲೇನು ಸಾರ -1 | 5 | 2 | 1933 |
| | ಸಂಸಾರದಲ್ಲೇನು ಸಾರ -2 | 5 | 3 | 1933 |